Sri T. MARIAPPA.—There seems to be an impression in this House that Government have not been able to take proper steps against certain individuals because they are men of influence. I can unequivocally make a statement in this House that no such thing weighs with this Government. In fact we are taking all possible steps, almost every month, and we are reviewing and we have been insisting on all those people to whom the responsibility of collecting taxes has been entrusted to see that the money is collected and that without any further delay. Sir, let the members also consider that the legacy from the respective five units, particularly from the Hyderabad unit is very heavy. We have to collect almost four crores from that unit. Let not the members be carried away with the impression that this Ministry is very weak. We are not at all weak. In fact I have rejected many stay applications for the collection of arrears. In fact in deserving cases I have given a month's time, two months' time and three months' time and with a specific understanding that they should pay immediately part of the amount. In short, I can assure this House that no individual counts with this Government however powerful he may be. We are concerned only with the merits of each case. If it is a deserving case we give a little time; if itis not, we do not give any time. In fact I would like to place a review of the demand, collection and balance of arrears to Government before this House. We do not want to hide anything from this House. I always find during the interpellation hour that a sort of motive is imputed that the amounts due are not being disclosed. On one occasion during interpellation time a sort of imputation was cast against a certain person in the Congress hierarchy. I feel very much for it. At the very outset I can say that he is due to Government a heavy amount, is false. I do not exactly remember the amount. It is less than Rs. 5,000 to be very accurate. Therefore let not motives be imputed to Government. To recover arrears it takes a little more time, particularly when we have to get accounts from the several respective units. Moreover some of the tax gatherers are new to some parts. A man from Hyderabad may have been posted to Mysore or a man from Bombay might have been posted to Mysore or a man from Mysore might have been posted to Bombay. Therefore it takes a little more time for him to acquaint himself. I beg of you not to make general remarks because it leaves a bad taste in the mouth. If you have got facts in your hands pass them on to us; we will take very stringent action against such persons.

ಶ್ರೀ ವೈ. ವೀರಪ್ಪ.—ಆದರೆ ನಾನೀಗ ಈ ಮಂತ್ರಿಗಳಲ್ಲಿ ಈ ತೆರಿಗೆಯನ್ನು ವಸೂಲ್ಮಾಡಲು ಅಂಥ ಒಂದು ಅದಕ್ಷತೆಯಿದೆಯೆಂಬಾಗಲಿ ಅಥವಾ ಹೈದ್ರಾಬಾದಿನ ವಿಚಾರವನ್ನಾಗಲಿ ಹೇಳುತ್ತಿಲ್ಲ. ಅಥವಾ ಹಳೆ ಮೈಸೂರು, ಹೊಸ ಮೈಸೂರಿನ ಬಗ್ಗೆಯಾಗಲಿ ಅಥವಾ ಆ ಸರ್ಕಾರ, ಈ ಸರ್ಕಾರ ಎಂತಲಾಗಲಿ ಹೇಳುತ್ತಿಲ್ಲ. ಒಟ್ಟಿನಲ್ಲಿ ನಾನು ಹೇಳುತ್ತಿರುವುದೇನೆಂದರೆ ಈ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಎಷ್ಟೋ ಜನರು ಸರ್ಕಾರಕ್ಕೆ ಪಾವತಿಮಾಡ

(ಶ್ರೀ ವೈ. ವೀರಪ್ಪ)

ಬೇಕಾಗಿದ್ದಂಥ ತೆರಿಗೆ ಬಾಕಿಗಳನ್ನು ಸರ್ಕಾರದವರು ರೈಟ್‌ಆಫ್ ಮಾಡಿದ್ದಾರೆ ಎಂದರೆ ಹೊಡೆದು ಹಾಕಿಬಿಟ್ಟಿದ್ದಾರೆ. ಹೀಗೆ ಮಾಡುವುದು ಸಾರ್ವಜನಿಕರ ಹಿತರಕ್ಷಣೆ ಮಾಡತಕ್ಕ ಮಾರ್ಗವೇ ಎಂದು ಕೇಳುತ್ತೇನೆ. ಈ ದಿವಸ ಕೂಡ ಇನ್ನೂ ಎಷ್ಟೋ ಜನಗು ಮಾರಾಟ ತೆರಿಗೆಯು ಮತ್ತು ಎಕ್ಸೈಜ್ ಡ್ಯೂಟಿಯು ಬಾಕಿಗಳನ್ನು ನಿಲ್ಲಿಸಿಕೊಂಡಿದ್ದಾರೆ. ಈ ಬಾಕಿಗಳು ಎಷ್ಟೋ ಕಾಲದಿಂದಲೂ ಹಾಗೆಯೇ ನಿಂತು ಬರುತ್ತಿವೆ. ಈ ವಿಚಾರಗಳಲ್ಲಿ ಇವೊತ್ತೂ ಸಹ ಸರ್ಕಾರ ಒಂದು ಆಮೂಲಾಗ್ರವಾದ ಸ್ಟೇಟ್‌ಮೆಂಟನ್ನು ಕೊಟ್ಟರೆ ನಾವು ನಿಜವಾಗಿಯೂ ಅವರಿಗೆ ಚಿರಋಣಿಗಳಾಗಿರುತ್ತೇವೆ. ಈ ಹಿಂದೆ ಮಾನ್ಯ ಸದಸ್ಯರು ಕಳುಹಿಸಿದ್ದ ಪ್ರಶ್ನೆಗಳಿಗೆ ಸರ್ಕಾರದವರು ಉತ್ತರಕೊಡುವಾಗ ಈ ಬಾಕಿಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಕೆಲವು ಮಾತುಗಳನ್ನು ಹೇಳಿದ್ದಾರೆ. ನಮ್ಮ ಪ್ರಶ್ನೆಗಳಿಗೆ ಒದಗಿಸಲಾಗಿರುವ ಉತ್ತರಗಳಲ್ಲಿ ಈ ಬಗ್ಗೆ ಬೇಕಾದಷ್ಟು ಬಾಕಿ ನಿಂತಿರುವುದಾಗಿ ತಿಳಿಸಿದೆ. ವಾಸ್ತವಾಂಶಗಳು ಹೀಗಿರುವಾಗ ಈಗಲೂ ಸಹ ಸರ್ಕಾರದವರು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರೆ ನಾವು ಖಂಡಿತ ಅವರಿಗೆ ಚಿರಋಣಿಗಳಾಗಿರುತ್ತೇವೆ. ಸರ್ಕಾರಗವರು ಯಾವುದಾದರೂ ಒಂದು ರೀತಿಯಲ್ಲಿ ಈ ಬಗ್ಗೆ ಒಂದು ತೀರ್ಮಾನವನ್ನು ನಿಷ್ಕರ್ಷೆಮಾಡಿಕೊಂಡು ಇಂಥಿಂಥವರ ಮೇಲೆ ಈ ಬಾಕಿ ವಸೂಲಿಗಾಗಿ ಇಂಥಿಂಥ ಕಾರ್ಯಕ್ರಮವನ್ನು ಕೈಗೊಳ್ಳಲು ಏನಾದರೂ ಒಂದು ನಿರ್ಧಾರಕ್ಕೆ ಬಂದಿರುವಂಥ ಒಂದು ಸೂಚನೆಯನ್ನು ತಿಳಿಸಿದರೆ ಬಹಳ ಸಂತೋಷ. ಈ ಉದ್ದೇಶವನ್ನು ಸಫಲಗೊಳಿಸಲು. ದೇವರು ಅವರಿಗೆ ಶಕ್ತಿ ಸಾಮರ್ಥ್ಯಗಳನ್ನು ಕೊಡಲೆಂದು ಹಾರೈಸುತ್ತೇನೆ. ದೇಶ ಮತ್ತು ದೇಶದಲ್ಲಿರತಕ್ಕ ಜನ ಸಾಮಾನ್ಯರು ಸರಿಯಾಗಿ ಬಾಳುವಂತೆ ಮಾಡಬೇಕು, ಚೆನ್ನಾಗಿ ಬದುಕುವಂತೆ ಮಾಡಬೇಕು. ಈ ದೃಷ್ಟಿಯಿಂದ ನಾನೀಗ ಈ ವಿಚಾರಗಳನ್ನು ವಿಮರ್ಶೆಮಾಡುತ್ತಿದ್ದೇನೆಯೇ ವಿನಾ ಹನ್ನೊಂದು ಮಂತ್ರಿಗಳನ್ನಾಗಲಿ ಅಥವ ಮೂರು ಜನ ಉಪಮಂತ್ರಿಗಳನ್ನಾಗಲಿ ಟೀಕೆ ಮಾಡಬೇಕೆಂಬ ಉದ್ದೇಶ ನನಗಿಲ್ಲ.

ದೇಶದ ಆಡಳಿತ ಹಿತದೃಷ್ಟಿಯಿಂದ ಇದನ್ನು ನಿರ್ವಹಿಸುವುದು ಅಗತ್ಯವಾಗಿದೆ. ನನ್ನ ಮಿತ್ರರಾದ ಅನೇಕ ಸದಸ್ಯರೂ ನಾನೂ ನಮ್ಮ ಅನುಭವದ ಆಧಾರದ ಮೇಲ ಹೇಳುವುದಾದರೆ, ಇಲಾಖೆ ಇಲಾಖೆಗಳಲ್ಲಿ ನೈತಿಕ ಮಟ್ಟ ಸಡಿಲವಾಗಿ ಅನೀತಿ ಸಂಭವಿಸುತ್ತಾ ಇದೆ· ಇವೊತ್ತಿನ ದಿವಸ ದೇಶದಲ್ಲಿ ಆಡಳಿತ ಸಡಿಲವಾಗಿದೆ ಎಂದು ಹೇಳಿದರೆ ಅದೇನೂ ಅತಿಶಯೋಕ್ತಿಯಾಗಲಾರದು, ಆಂಟಿಕರಪ್‌ಷನ್, ಎಫಿಷಿಯನ್ಸಿ ಆಡಿಟ್ ಇಲಾಖೆಗಳ ಮೂಲಕ ಪರಿಶೀಲನೆಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವದಕ್ಕೆ ಏನಾದರೂ ಮಾಡಿದ್ದೀರಾ ? ಇವೊತ್ತಿನ ದಿವಸ ಲಂಚ ರುಷುವತ್ತು ಖಂಡಿತವಾಗಿ ನಿಂತಿಲ್ಲ. ಕಾನೂನು ಮಾಡಿ ಈ ಡಿಪಾರ್ಟ್‌ಮೆಂಟ್ ರಚನೆ ಮಾಡಿದ್ದಾರೆ. ಆದರೆ ಅದರ ಉದ್ದೇಶ ನೆರವೇರಿಲ್ಲ. Corruption after corruptionಗಳ ಬಗ್ಗೆ ತನಿಖೆ ಮಾಡುವದನ್ನು ನೋಡಿದರೆ ದೇಶದಲ್ಲಿ ಜನ ಸಾಮಾನ್ಯರಿಗೆ ಅತೃಪ್ತಿಯಾಗಿದೆ. ಈ ವಿಷಯದ ಬಗ್ಗೆ ನಾನು ಹತ್ತಿಪ್ಪತ್ತು ಪ್ರಶ್ನೆಗಳನ್ನು ಕಳಿಸಿದ್ದೇನೆ. ಲಂಚರುಷುವತ್ತನ್ನು ಚೆಕ್‌ಮಾಡುವುದಕ್ಕೆ ಏನುಕ್ರಮ ತೆಗೆದುಕೊಳ್ಳಲಾಗಿದೆ ಎಂದು ನಾನು ಕೇಳಿದ್ದೇನೆ. ಇದನ್ನೆಲ್ಲಾ ಪರಿಶೀಲನೆ ಮಾಡುವುದಕ್ಕೆ ಒಂದು ಕಮಿಟಿಯನ್ನು ರಚನೆ ಮಾಡುತ್ತೀರಾ ಎಂದು ಸಹ ಪ್ರಶ್ನೆ ಕೇಳಿದ್ದೇನೆ ಆದರೆ ಈ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ದೊರೆತಿಲ್ಲ. ಇಂದು ದೇಶದಲ್ಲಿ ಅತೃಪ್ತಿ ಜಾಸ್ತಿಯಾಗಿದೆ. ಮಾನ್ಯ ಅಧ್ಯಕ್ಷರ ಅಪ್ಪಣೆ ಕೇಳಿ, ಒಳ್ಳೆಯ ಮೇಧಾವಿಗಳೂ ಇಂಡಿಯಾದ ಪ್ರಮುಖ ವ್ಯಕ್ತಿಗಳೂ ಆಗಿರುವ ಶ್ರೀಮಾನ್ ಪತಂಜಲಿ ಶಾಸ್ತ್ರಿಯವರು ಈ ಲಂಚರುಷುವತ್ತುಗಳ ಬಗ್ಗೆ ಏನು ಅಭಿಪ್ರಾಯ ಕೊಟ್ಟಿದ್ದಾರೋ ಅದನ್ನು ಈ ಸಭೆಯಲ್ಲಿ ಓದಿ ತೋರಿಸುತ್ತೇನೆ. ಅದು ಈ ರೀತಿಯಾಗಿದೆ, "Corruption and Publicity. . . ."

ಶ್ರೀ ಟಿ ಮರಿಯಪ್ಪ.--ಸಭೆಯಲ್ಲಿ ನ್ಯೂಸ್‌ಪೇಪರ್‌ನಲ್ಲಿ ಇರುವದನ್ನು ಓದಿ ಹೇಳಬಾರದೆಂದು ನಿಯಮ ಇದೆ.

ಶ್ರೀ ವೈ. ವೀರಪ್ಪ.—ಈ ರೀತಿ ಓದುವುದು ಸಂಪ್ರದಾಯಕ್ಕೆ ವಿರುದ್ಧವಾಗಿದ್ದರೆ ನಾನು ಓದುವದಿಲ್ಲ. ಇಂದು ದೇಶದಲ್ಲಿ ಲಂಚರುಷುವತ್ತು ವಿಪರೀತ ಜಾಸ್ತಿಯಾಗಿದೆ, ಇದರಿಂದ ನಿಜವಾಗಿಯೂ ಪ್ರಗತಿಗೆ ಧಕ್ಕೆ ಬರುತ್ತಿದೆ, ದೇಶಕ್ಕೆ ಬಹುಮಟ್ಟಿಗೆ ಕುಂದಕ ಬರುತ್ತದೆಂದು ಅವರು ತಮ್ಮ ಅಭಿಪ್ರಾಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮನುಷ್ಯನಿಗೆ ಗಾಳಿ ನೀರು ಆಹಾರ ಅತಿ ಪ್ರಾಮುಖ್ಯವಾಗಿ ಬೇಕಾದುವು. ಆದರೆ ಆಹಾರದ ಬಗ್ಗೆ ಎಷ್ಟರ ಮಟ್ಟಿಗೆ ಕಾರ್ಯ ಸಾಧ್ಯವಾಗಿದೆ, ಅಭಿವೃದ್ಧಿಯಾಗಿ ಮುಂದುವರಿದಿದೆ ಎಂಬುದನ್ನು ನೋಡಿದರೆ ಬಹಳ ವ್ಯಾಕುಲದಿಂದ ವಿಧಿಯಿಲ್ಲದೆ ಇವೊತ್ತಿನ ದಿವಸ ಹೇಳಬೇಕಾಗಿದೆ. ಹೊಸದಾಗಿ ಏನನ್ನೂ ಹೇಳಬೇಕಾಗಿಲ್ಲ. ಈಗಾಗಲೇ ಕೇಂದ್ರ ಸರಕಾರದ ಮಂತ್ರಿಗಳಾದ ಅಜಿತ ಪ್ರಸಾದ ಜೈನರು ಅಕ್ಕಿಯ ಅಭಾವದ ಸೂಚನೆ ಕೊಟ್ಟಿದ್ದಾರೆ. ಆಹಾರ ಅಭಾವ ತಡೆಯುವದಕ್ಕೆ ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಅನೇಕ ಪ್ರೊಜೆಕ್ಟುಗಳನ್ನು ಮಾಡಿದ್ದಾರೆ. ಆದರೆ minor irrigation ಗೆ ಹೆಚ್ಚು ಉತ್ತೇಜನ ಕೊಡಬೇಕು. Minor irrigation ಕೆಲಸವು ನಿರೀಕ್ಷಣೆ ಮಾಡಿದಷ್ಟು ತೃಪ್ತಿಕರವಾಗಿ ನಡೆಯುತ್ತಿಲ್ಲವೆಂದು ಬಹಳ ವ್ಯಾಕುಲದಿಂದ ಹೇಳಬೇಕಾಗಿದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಈ ವಿಚಾರದಲ್ಲಿ ಹೆಚ್ಚು ನಿಗಾ ಕೊಡಬೇಕು ಎಂದು ನಾನು ಸೂಚಿಸುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರ. ವಿದ್ಯಾಭ್ಯಾಸಕ್ಕಾಗಿ 10-11 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ವಿದ್ಯಾಭ್ಯಾಸದ ವ್ಯವಸ್ಥೆಯಾವ ರೀತಿ ಇದೆ ಎಂದರೆ 1942 ರಿಂದ ಒಂದು ಪ್ರೈಮರಿ ಸ್ಕೂಲು ಕಟ್ಟಡ ಕಟ್ಟಿಸಿಕೊಡಬೇಕೆಂದು ಕೇಳುತ್ತಿದ್ದರೂ ಸಹ ಇನ್ನೂವರೆಗೆ ಕಟ್ಟಡ ಕಟ್ಟಿಸಿಕೊಟ್ಟಿಲ್ಲ. ದೇವಸ್ಥಾನಗಳಲ್ಲಿ ಶಾಲೆಗಳು ನಡೆಯುತ್ತಾ ಇವೆ. ಜನರಿಗೆ ಬಹಳ ತೊಂದರೆ ಯಾಗುತ್ತಾ ಇದೆ. ಈ ವಿಚಾರದಲ್ಲಿ ಅನೇಕ ಸದಸ್ಯರು ಹೇಳಿದ್ದಾರೆ. ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಸಂಬಳ ಸಾರಿಗೆಯ ವಿಚಾರ ಪ್ರಸ್ತಾಪ ಮಾಡಿ ಹೇಳಿದ್ದಾರೆ. ಆದರೆ ಖಾಸಗೀ ಸಂಸ್ಥೆಗಳು ನಡೆಸಿಕೊಂಡು ಬಂದಿರತಕ್ಕಂಥ ಶಾಲೆಗಳಲ್ಲಿ, ಡಿಸ್ಟ್ರಿಕ್ಟುಬೋರ್ಡ್ ಶಾಲೆಗಳಲ್ಲಿ, ಮುನಿಸಿಪಲ್ ಶಾಲೆಗಳಲ್ಲಿ ಮತ್ತು ಇತರ ವಿದ್ಯಾ ಸಂಸ್ಥೆಗಳು ನಡೆಸಿಕೊಂಡು ಬಂದಿರತಕ್ಕ ಶಾಲೆಗಳಲ್ಲಿ ಸರಕಾರೀ ನೌಕರರು ತೆಗೆದುಕೊಳ್ಳತಕ್ಕ ಸ್ಕೇಲನ್ನು ಅಲ್ಲಿಯೂ ಇರುವ ಹಾಗೆ ಮಾಡಬೇಕು; ಹೀಗೆ ಕೇಳಿದರೆ ಸರಕಾರದ ಹತ್ತಿರ ದುಡ್ಡು ಇಲ್ಲವೆಂದು ಹೇಳುತ್ತಾರೆ. ಆದರೆ ಇದರಿಂದ ವಿದ್ಯಾಭ್ಯಾಸ ಪ್ರಗತಿಗೆ ಧಕ್ಕೆಬಂದಂತಾಗಿದೆ. ಎಲ್ಲರಿಗೂ ಒಂದೇ ಮಟ್ಟದ ಸಂಬಳ ಸಾರಿಗೆ ಇರುವ ಹಾಗೆ ಮಾಡತಕ್ಕದ್ದು ಸೂಕ್ತ. ಇನ್ನು ಟೆಕ್ನಿಕಲ್ ಎಜ್ಯು

ಕೇಷನ್ನಿಗೆ 28+5 ವರ್ಷ ಅಂದರೆ 33 ವರ್ಷದ ಅವಧಿಯ ಒಂದು ನಿರ್ಬಂಧ ಇತ್ತು. ಈಗ ಸರಕಾರದ ರೂಲ್ಸ್ ಪ್ರಕಾರ 28 ವರ್ಷದೊಳಗೆ ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರಲು ಆಗುವದಿಲ್ಲ, ಆದ ಕಾರಣ ಮೊದಲಿನಂತೆ ಈ ನಿಯಮ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಸರಕಾರದವರು ಉಳಿತಾಯ ಮಾಡಬೇಕು ಎಂದು ಬೇಕಾದಷ್ಟು ಪ್ರಚಾರ ಮಾಡುತ್ತಿದ್ದಾರೆ. ಆದರೆ ಸರಿಯಾದ ರೀತಿಯಲ್ಲಿ ಉಳಿತಾಯವಾಗುತ್ತಿಲ್ಲ. ದುಡ್ಡು ಖರ್ಚಾಗುತ್ತಿದೆಯೇ ವಿನಾ ಸರಿಯಾದಪ್ರತಿಫಲ ದೊರೆಯುತ್ತಿಲ್ಲ. ಸರಕಾರದ ಕೆಲಸದಲ್ಲಿಯೇ ಸರಿಯಾಗಿ ಮಿತವ್ಯಯ ಆಗುತ್ತಿಲ್ಲ. ಸಾಲದ ಹೊರೆಮಾತ್ರ ಹೆಚ್ಚಾಗುತ್ತಾ ಇದೆ. ಈ ಸಾಲವನ್ನು ಯಾವ ರೀತಿ ತೀರಿಸಬೇಕು ಎಂಬ ಯೋಚನೆ ಯಿಲ್ಲ, ದುಡ್ಡನ್ನು ಸಹ ನ್ಯಾಯವಾಗಿ ಖರ್ಚು ಮಾಡುತ್ತಿಲ್ಲ. ಇದರ ಬಗ್ಗೆ ಸರಕಾರ ಹೆಚ್ಚಿನ ನಿಗಾ ಕೊಡಬೇಕು ಎಂದು ನಾನು ಹೇಳುತ್ತೇನೆ.

3.30 P.M.

ಮಾನ್ಯ ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲೇ ಫೈನಾನ್ಸ್ ಕಮಿಷನ್ ಹೇಳಿರುವುದನ್ನು ಉಲ್ಲೇಖಿಸಿದ್ದಾರೆ:

"We cannot over-emphasise the paramount importance of the States balancing their revenue budgets. We have framed our scheme of devolution so as to enable them to do so. With a massive Development Plan under implementation, tbere is a grave risk of the budgetary deficits of the States endangernig the country's economy by adding to the inflationary potential. Now that all expenditure creating permanent assets are being treated as Capital Outlay, deficits on current account covered by borrowing, result in an unfair shifting by the present generation of its burden to the future generation" ಎಂದು ಹೇಳಿದ್ದಾರೆ. ಏನಾಗಬೇಕು ಮುಂದಿನವರ ಗತಿ !! ಈ ಹೊತ್ತಿನ ದಿವಸ ನಾವು ಬೇಕಾದಷ್ಟು ಸಾಲ ಮಾಡುತ್ತಿದ್ದೇವೆ. ಮುಂದಿನ ಜನಾಂಗ ಯಾವ ರೀತಿ ಈ ಸಾಲದಿಂದ ನಿವೃತ್ತರಾಗುತ್ತಾರೆ? ಯಾವ ರೀತಿ ಪ್ರಗತಿದಾಯಕವಾಗಿ ಬೆಳೆಯುತ್ತಾರೆ ಅವರು? ಮತ್ತು ಜನಸಾಮಾನ್ಯರಿಗೆ ಯಾವ ರೀತಿ ಅನುಕೂಲವಾಗುತ್ತದೆ? ಎಂಬುದನ್ನು ಯೋಚನೆ ಮಾಡಬೇಕು. ನಿಜವಾಗಿಯೂ ನಾನು ಬಹು ಸಂಕಟದಿಂದ ಹೇಳುತ್ತಿದ್ದೇನೆ. ಹಿಂದೆಯೂ ಪದೇ ಪದೇ ಇದನ್ನೇ ಹೇಳಿದ್ದೇವೆ. ಹಿಂದಿನ ಅಸೆಂಬ್ಲಿ ಭಾಷಣಗಳನ್ನು ನೋಡಿದರೆ ಪದೇ ಪದೇ ಮಾನ್ಯ ಸದಸ್ಯರು ಒತ್ತಾಯ ಮಾಡಿರುವುದನ್ನು ಕಾಣಬಹುದು. ಅವರ ಸಲಹೆಗಳನ್ನು ಕಾರ್ಯಗತ ಮಾಡಿದ್ದೀರಾ ? ಎಷ್ಟರ ಮಟ್ಟಿಗೆ ಅನುಷ್ಠಾನಕ್ಕೆ ತರುತ್ತಿದ್ದೀರಿ ಎಂದು ನೋಡಿದರೆ ಏನೇನೂ ಇಲ್ಲ. ಈ ಹೊರೆ ನಮ್ಮ ಮುಂದಿನ ಜನಾಂಗಕ್ಕೆ ತುಂಬ ತೊಂದರೆಯನ್ನುಂಟು ಮಾಡುತ್ತದೆ. ಇದನ್ನು ಕಡಮೆ ಮಾಡುವುದಕ್ಕ ಪ್ರಯತ್ನ ಮಾಡದಿದ್ದರೆ ದೇಶಕ್ಕೆ ಗಂಡಾಂತರ ತಪ್ಪಿದ್ದಲ್ಲವೆಂದು ಹೇಳ ಬೇಕಾಗುತ್ತದೆ. ಆಮೇಲೆ ಆಪದ್ಧನ ಇಲ್ಲವೆಂದು ಮಾನ್ಯ ಮಂತ್ರಿಗಳು ನಾಲ್ಕನೆಯ ಪುಟದಲ್ಲಿ ತಿಳಿಸಿದ್ದಾರೆ. ಯಾವುದಾದರೂ "ಪ್ರವಾಹಗಳು, ಕ್ಷಾಮಗಳು ಇವೇ ಮೊದಲಾದ ನೈಸರ್ಗಿಕವಾದ ದುರ್ಘಟನೆಗಳ ಸಂಬಂಧದಲ್ಲಿ ಅನಿರೀಕ್ಷಿತವಾಗಿ ತಗಲುವ ವೆಚ್ಚವನ್ನು ವಹಿಸುವುದಕ್ಕಾಗಿ ಏರ್ಪಡಿಸಬೇಕಾದ ನಿಧಿಗಾಗಿ ಪ್ರತಿಯೊಂದು ರಾಜ್ಯ ಸರ್ಕಾರದವರೂ ಪೊಬಲಗನ್ನು ಇಡಬೇಕೆಂದು ವಿತ್ತೀಯ ಆಯೋಗ ಮಂಡಲಿಯವರು ಸಲಹೆಯನ್ನಿತ್ತಿದ್ದಾರೆ ಎಂದು ತಿಳಿಸಿದ್ದಾರೆ. ಇದರ ಮೇರೆಗೆ 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನಿಸಿದ್ದಾರೆಂದು ಗೊತ್ತಾಗಿದೆ. ನೂರು ರೂಪಾಯಿ ಸಂಬಳ ಬರುವವನು ಕೂಡ ಐದು ರೂಪಾಯಿಗಳನ್ನು ತಿಂಗಳಿಗೆ ಆಪದ್ಧನವಾಗಿ ಇಡದೆ ಇದ್ದರೆ ನಿಜವಾಗಿಯೂ ಆತನ ಸಂಸಾರ ಸರಿಯಾಗುವುದಿಲ್ಲ. ಅದು ಕಾಲಗೆಟ್ಟು ಹೋಗುತ್ತದೆ. ಆದೇರೀತಿ ಈ ಹೊತ್ತು 5?—53 ಕೋಟಿ ರೂಪಾಯಿಗಳ ವರಮಾನವಿರುವಲ್ಲಿ ಕೊನೆಯ ಪಕ್ಷ ಎರಡು ಕೋಟಿಯಷ್ಟಾದರೂ ಆಪದ್ಧನವಿರಲೇಬೇಕು. ನಮ್ಮಲ್ಲಿ ಈ ದೃಷ್ಟಿಯಿಂದ ಇಟ್ಟಿದ್ದ 36 ಕೋಟಿ ಆಪದ್ಧನವನ್ನು ಇಂದು ಪೂರ್ತಿಯಾಗಿ ಖರ್ಚು ಮಾಡಿ ಬಿಟ್ಟಿದ್ದೀರಿ. ಆದ್ದರಿಂದ ಆಪದ್ಧನವನ್ನಿಡದೆ ಹೋದರೆ ಭಾವಿ ಜನಾಂಗಕ್ಕೆ ತೊಂದರೆ ಯಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ತೀಕ್ಷ್ಣವಾದ ಕ್ರಮವನ್ನು ಕೈಕೊಂಡು, ಹಾಸಿಗೆಯುದ್ದಷ್ಟಕ್ಕೆ ಕಾಲು ಚಾಚು ಎಂಬ ನೀತಿಗನುಸಾರವಾಗಿ ನಮಗೆ ಎಷ್ಟು ಸಾಲ ದೊರಕುತ್ತದೆಯೋ ಅಷ್ಟೇ ಸಾಕು ಎಂದುಕೊಂಡು ನಮ್ಮ production ಹಾಗೂ ಆದಾಯವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

Labour Policy ವಿಚಾರದಲ್ಲಿ ಕೇಂದ್ರ ಸರ್ಕಾರದವರು ಒಂದು ವ್ಯವಸ್ಥೆ ಮಾಡಿದ್ದಾರೆ. ಆ ಬಗ್ಗೆ ಒಂದು ಕಾನೂನು ಕೂಡ ಮಾಡಿದ್ದಾರೆ. ಆದರೂ ಸರ್ಕಾರದವರು ಸಾರ್ವಜನಿಕರ ದುಡ್ಡಿನ ಬಗ್ಗೆ ಎಷ್ಟು ಅಸಡ್ಡೆಯಿಂದಿದ್ದಾರೆಂಬುದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ನಂಜನಗೂಡಿನಲ್ಲಿ ಕಪಿಲಾ ಟೆಕ್ಸ್‌ಟೈಲ್ ಮಿಲ್ಲಿನಲ್ಲಿ 1,500 ಜನರು ಕೆಲಸ ಮಾಡುತ್ತಿದ್ದರೆ ಅಲ್ಲಿ ಯಾವರೀತಿ ಕೆಲಸ ನಡೆಯುತ್ತಿದೆ? ಅದು ಫಲಪ್ರದವಾಗಿ ನಡೆಯುತ್ತಿದೆಯೇ, ಅದರಿಂದ ಜನರಿಗೆ ಅನುಕೂಲವಾಗುತ್ತಿದೆಯೇ, ಎಂದು ಒಂದು ಪ್ರಶ್ನೆಯನ್ನು ಕಳುಹಿಸಿಕೊಟ್ಟಿದ್ದೆ. ಕಳುಹಿಸಿ ಒಂದು ವರ್ಷವಾದರೂ ಉತ್ತರ ಬಂದಿಲ್ಲ. ಮೊನ್ನೆ ಮೊನ್ನೆ ಈ ಮಿಲ್ಲಿನ ವ್ಯವಸ್ಥೆಯೇನೆಂದು ವಿಚಾರಿಸಿದಲ್ಲಿ ಮೂರು ತಿಂಗಳುಗಳಿಂದ ಅದನ್ನು ನಿಲ್ಲಿಸಿ ಬಿಟ್ಟಿದ್ದಾರೆಂದು ಗೊತ್ತಾಯಿತು. ಸರ್ಕಾರ ಹನ್ನೊಂದು ಲಕ್ಷ ರೂಪಾಯಿಗಳನ್ನು ಕೊಟ್ಟಂಥ ಒಂದು ಕೈಗಾರಿಕೋದ್ಯಮದ ವಿಷಯದಲ್ಲಿ ಬೇಜವಾಬ್ದಾರಿ ರೀತಿಯಲ್ಲಿ ಕೆಲಸ ನಡೆದಾಗ, ಸರ್ಕಾರದವರು ತಾವು ಕೊಟ್ಟ ಹಣದ ಉದ್ದೇಶ ನೆರವೇರದೆ ಹೋದಮೇಲೆ ಕೂಡಲೆ ಅವರು ತಲೆಹಾಕಿ ತಮ್ಮ ಹಣವನ್ನು ಉಳಿಸಿಕೊಳ್ಳುವ ಒಂದು ಹವ್ಯಾಸಕ್ಕಾದರೂ ಗಮನಕೊಡದೆ ಇದ್ದರೆ ಹೇಗೆ ? ಮತ್ತು ಅಲ್ಲಿ ಇಂದು Labour problem ಕೂಡ solve ಆಗದೆ ಅನ್ಯಾಯಕತ್ವ ಉಂಟಾಗಿದೆ. ಮೂರು ತಿಂಗಳಿನಿಂದ ಮಿಲ್ ನಿಂತಿದೆ. Payment of Wages Act ಪ್ರಕಾರ 19ನೆಯ ಮಾರ್ಚಿ 1958ರಲ್ಲಿ ಸಾದರಾದ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರ ಆರ್ಡರಿನಂತೆ ಕೂಲಿಗಾರರಿಗೆ ಶೇಕಡ 25 ಭಾಗದಷ್ಟು ಕೂಲಿಯನ್ನು ಪಾವತಿ ಮಾಡಬೇಕೆಂದು ಹೇಳಿದ್ದರ ಪ್ರಕಾರ ಕೂಲಿಗಾರರು ಅದನ್ನು ತೆಗೆದುಕೊಳ್ಳುವುದಕ್ಕೆ ಹೋದಾಗ ಮಾಲೀಕರುಗಳು ಕೆಲವು ಸ್ಥಳೀಯ ಗೂಂಡಾಗಳ ನೆರ

(ಶ್ರೀ ವೈ. ವೀರಪ್ಪ)

ವನ್ನು ತೆಗೆದುಕೊಂಡು ಅವರಿಂದ ದುಂಡಾವರ್ತಿ ಎಬ್ಬಿಸಿ ಅನೇಕ ಕಿರುಕುಳಗಳನ್ನು ಕೊಟ್ಟರು. ಈ ಬಗ್ಗೆ ದೂರುಗಳು ಮಂತ್ರಿಗಳಿಗೂ ಹೋಗಿವೆ. ಇಷ್ಟಾದರೂ ಸರಕಾರದವರು ಗಮನ ಕೊಟ್ಟಿಲ್ಲ. ಹನ್ನೊಂದು ಲಕ್ಷ ರೂಪಾಯಿಗಳು ಸುಮ್ಮನೆಯೇ? Labour policy, labour policy ಎಂದು ಹೇಳುತ್ತೀರಿ; ಸರ್ಕಾರದವರೇ ಅಲ್ಲಿರುವಾಗಲೂ ಏನು ಮಾಡಿದ್ದೀರಿ? ಈ ಬಗ್ಗೆ ಸರ್ಕಾರದವರು ತೀವ್ರ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಪಾನನಿರೋಧದ ವಿಚಾರವಾಗಿ ಅನೇಕರು ಆಗಲೇ ಮಾತನಾಡಿದ್ದಾರೆ. ನನ್ನದು ಒಂದೇ ಒಂದು ಸೂಚನೆ. 'Hasten slowly'ಎಂಬ ನಿಮ್ಮ ನೀತಿಯ ವಿಚಾರವಾಗಿ ಅನೇಕರು ತಮಾಷೆಯಾಗಿ ಮಾತನಾಡಿದ್ದಾರೆ. ಸುಮ್ಮನೆ ಇಷ್ಟು ದುಡ್ಡನ್ನೇಕೆ ಖರ್ಚು ಮಾಡುತ್ತಿದ್ದೀರಿ? ಮಾಡಬೇಡಿ. ಈ ಸಿಬ್ಬಂದಿಗಾಗಿ ಮಾಡುವ ಖರ್ಚನ್ನು ಸೋಷಿಯಲ್ ವೆಲ್‌ಫೇರ್ ಕೆಲಸಕ್ಕಾದರೂ ಖರ್ಚುಮಾಡಿ. ಹಳ್ಳಿಗಳಲ್ಲಿ ಎಲ್ಲರಿಗೂ ಕುಡಿಯುವ ನೀರು ಸಿಕ್ಕುವಂತೆ ಮಾಡಿ. ಪಾನನಿರೋಧವನ್ನು ಜಾರಿಗೆ ತರುವುದಾಗಿ ಹೇಳಿ ಇಷ್ಟು ಮಾಡಿದ್ದರಿಂದೇನು ಪ್ರಯೋಜನ? ಸಾಕಾದಷ್ಟು ಹಣ ಖರ್ಚು ಮಾಡುವುದಕ್ಕಿಲ್ಲದೆ ದೇಶದ ಜನರ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡಿದೆ. ಅಲ್ಲದೆ ಅನೇಕವಾಗಿ illicit ರೀತಿಯ ತಯಾರಿಕೆ ಬಂದು ಜನರ ಆರೋಗ್ಯ ಕೆಡುತ್ತಿದೆ. ಲಂಚ ರುಷುವತ್ತುಗಳು ಹೆಚ್ಚಿ ಜನರ ನೈತಿಕ ಮಟ್ಟ ಕುಗ್ಗುತ್ತಿದೆ. ಆದ್ದರಿಂದ ಕಾಂಗ್ರೆಸ್ ಸರ್ಕಾರದವರ ಮೂಲ ನೀತಿಯಾದ ಪೂರ್ಣ ಪಾನನಿರೋಧವನ್ನು ಕೂಡಲೆ ಜಾರಿಗೆ ತರುವುದಲ್ಲದೆ, ಸೋಷಿಯಲ್ ವೆಲ್‌ಫೇರ್ ಬೋರ್ಡ್, protected water supply, ವಿದ್ಯಾಭ್ಯಾಸ, ಒಳ್ಳೆಯ ಮನೆಗಳನ್ನು ಕಟ್ಟಿಸಿ ಕೊಡುವುದು—ಇತ್ಯಾದಿ ಇತ್ಯಾದಿ ವಿಷಯಗಳಿಗೆ ಇದಕ್ಕೆ ಖರ್ಚು ಮಾಡುತ್ತಿರುವ ಹಣವನ್ನು ಒದಗಿಸಿಕೊಟ್ಟರೆ ಜನರಿಗೆ ಎಷ್ಟೋ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಪೋಲೀಸ್ ಇಲಾಖೆಯ ವಿಚಾರ ಹೇಳುವುದಕ್ಕೆ ಬೇಜಾರಾಗುತ್ತದೆ. ಆದರೂ ಅನಿವಾರ್ಯವಾಗಿ, ತತ್ವದ ದೃಷ್ಟಿಯಿಂದ ಒಂದು ವಿಚಾರ ಹೇಳುತ್ತೇನೆ. 1942ನೆಯ ಇಸವಿಯಲ್ಲಿ ಕೇವಲ 22 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದ ಈ ಬಾಬಿಗೆ ಇಂದು $3\frac{1}{2}$ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದರೂ, ಈ ಹೊತ್ತು ನಮ್ಮ ದೇಶದಲ್ಲಿ—welfare stateನಲ್ಲಿ ಇರುವ ಪೋಲೀಸ್ ದಳದಲ್ಲಿ ಅತೃಪ್ತಿಯೆಂಬುದು ಮೂಡಿದೆ. ಅತೃಪ್ತಿಯುಂಟಾಗಿ ಅನೇಕ ಅನ್ಯಾಯಗಳು ನಡೆಯುತ್ತಿವೆ.

ಪರಕೀಯರ ಆಳ್ವಿಕೆಯ 150 ವರ್ಷಗಳ ಕಾಲದಲ್ಲಿ ಆಗದಿದ್ದಂಥ ಗುಂಡಿನೇಟು, ಖೂನಿ, ಡಕಾಯಿತಿ ಪ್ರಕರಣಗಳು ಈ ಹತ್ತು ವರ್ಷಗಳಲ್ಲಿ ಆಗಿವೆ. ನಮ್ಮ ಪೋಲೀಸಿನಲ್ಲಿ ದಕ್ಷತೆಯಿಲ್ಲವೆಂದು ನಾನು ದೂಷಣೆ ಮಾಡುವುದಿಲ್ಲ. ಏಕೆಂದರೆ ಅಧಿಕಾರಿಗಳಲ್ಲಿರುವ ಅತೃಪ್ತಿಯೇ ಇದಕ್ಕೆ ಕಾರಣ. ಎಷ್ಟೋವೇಳೆ ಮನೆಗೆ ಬೆಂಕಿ ಬೀಳಲಿ, ಖೂನಿಯಾಗಲಿ, D.S.P. ಯವರು ಮಾತ್ರ ಸ್ಥಳಕ್ಕೆ ಹೋಗುವುದಿಲ್ಲ. ಪೋಲೀಸ್ ಅಧಿಕಾರಿಗಳು ಪದೇ ಪದೇ ಎಲ್ಲೆಲ್ಲಿ ಕಷ್ಟ ಪರಿಸ್ಥಿತಿಯಿದೆಯೋ ಅಲ್ಲಿ ತೀಕ್ಷ್ಣವಾಗಿ ಗಸ್ತು ಮಾಡುತ್ತಿದ್ದರೆ ಇಂಥ ಅನಾಹುತಗಳಾಗುವುದಿಲ್ಲ. ಅಲ್ಲದೆ ಡಿ.ಎಸ್.ಪಿ ಗಳಾಗಿ ಪ್ರಮೋಷನ್ ಮಾಡುವಾಗ ಅನುಭವವಿಲ್ಲದ ಜನರನ್ನು, ಎಷ್ಟೋ ತರುಣರ ಆಶೋತ್ತರಗಳಿಗೆ ಬೆಲೆ ಕೊಡದೆ ಯಾವುದೋ ಒಂದು ರೀತಿಯಾದ ವ್ಯವಹಾರ ಇಟ್ಟುಕೊಂಡು ಪ್ರಮೋಷನ್ ಕೊಡುವುದಾದರೆ ಅತೃಪ್ತಿಗೆ ಅವಕಾಶವಾಗುತ್ತದೆ. ಇದರಿಂದಾಗಿ ಈ ಇಲಾಖೆಯ ಕಾರ್ಯಕಲಾಪಗಳು ಸುಸಂಗತವಾಗಿ ನಡೆಯುವುದಕ್ಕೆ ಅನಾನುಕೂಲವಾಗಿದೆ. ಅಲ್ಲದೆ ಮದ್ರಾಸಿನ ಪೋಲೀಸ್ ಆಡಳಿತ ವ್ಯವಸ್ಥೆಯನ್ನು ಸ್ವಲ್ಪ ಕೇಳುವುದಾದರೆ, ಅಲ್ಲೆಲ್ಲಾ ಒಂದೊಂದು crime zoneಗೂ ಇಷ್ಟು ಜನ ಇನ್ಸ್‌ಪೆಕ್ಟರುಗಳಿರಬೇಕು, ಇಷ್ಟು ಜನ ಸಬ್ ಇನ್ಸ್‌ಪೆಕ್ಟರುಗಳಿರಬೇಕು, ಇಷ್ಟು ದಫೇದಾರರು, ಇಷ್ಟು ಕಾನ್‌ಸ್ಟೇಬಲ್‌ಗಳಿರಬೇಕು ಎಂದು ಗೊತ್ತು ಮಾಡಿಬಿಟ್ಟಿದ್ದಾರೆ. ನಮ್ಮಲ್ಲಾದರೋ 20 ಜನ ಕಾನ್‌ಸ್ಟೇಬಲ್‌ಗಳಿರಬೇಕೆಂದಿದ್ದರೆ ಹತ್ತು ಜನ ಕಾನ್‌ಸ್ಟೇಬಲ್‌ಗಳಿರುವುದು, ಹತ್ತು ಜನ ದಫೇದಾರರಿರುವ ಕಡೆ ಮೂರೇ ಜನರಿರುವುದು, ಇನ್ಸ್‌ಪೆಕ್ಟರ್ ಇರಬೇಕೆಂದಿದ್ದರೂ ಇನ್ಸ್‌ಪೆಕ್ಟರೇ ಇಲ್ಲದಿರುವುದು ಹೀಗಿದೆ. ಒಂದು zoneಗೆ ಇಷ್ಟು ಜನ ಇರಬೇಕೆಂದು ನೀವು ಹೋಲಿಕೆ ಮಾಡಿಕೊಂಡು ಅದರಂತೆ ಏಕೆ ಮಾಡುವುದಿಲ್ಲ? ಸರಿಯಾದ ರೀತಿ ಮಾಡುವುದರಿಂದ ಈ ಇಲಾಖೆಯ ದಕ್ಷತೆ ಹೆಚ್ಚುತ್ತದೆ. ಏಕೆಂದರೆ, ಈ ಡಿಪಾರ್ಟ್‌ಮೆಂಟಿನ ಕೆಲಸ ಕೇವಲ ಪ್ರಾಣಚ್ಚರವರು ಮಾಡುವ ಕೆಲಸವಲ್ಲ. ಪ್ರತಿಯೊಬ್ಬರ ಸಹಕಾರವೂ ಬೇಕು. ಈಗ ನಿಮಗೆ ಸಹಕಾರ ಏಕೆ ದೊರಕುತ್ತಿಲ್ಲ? ಅತೃಪ್ತಿಯ ಹುಡಂಭೂತ ಬಂದು ನಿಮಗೆ ಸಹಕಾರ ದೊರಕದೆ ಈ ತೆರದ ದುರವಸ್ಥೆಯುಂಟಾಗಿದೆ. ಈ ಬಗ್ಗೆ ಜಾಗ್ರತೆ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಅತೃಪ್ತಿ ಹಿಂದೆಯೂ ಇತ್ತು. ಇವೊತ್ತೂ ಇದೆ ಇದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಆದಷ್ಟುಮಟ್ಟಿಗೆ ಈ ಬಗ್ಗೆ ಸುವ್ಯವಸ್ಥಿತವಾದ ರೀತಿಯಲ್ಲಿ ಅತೃಪ್ತಿಯನ್ನು ಹೋಗಲಾಡಿಸಿ ಅಧಿಕಾರಿಗಳು ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ ಹಂದಿಗೋಡು ವಿಚಾರವನ್ನು ತೆಗೆದುಕೊಂಡರೆ ಅಲ್ಲಿ ಇಡೀ ಸಂಸಾರವೊಂದನ್ನು ಕೊಲೆ ಮಾಡಿದರು. ಆರುತಿಂಗಳ ಮಗುವನ್ನು ಸಹ ಕೊಲೆ ಮಾಡಿದರು. ಇಂದಿನವರೆಗೂ ಇದರ ವಿಷಯವೇನಾಯಿತೆಂಬುದು ತಿಳಿದುಬಂದಿಲ್ಲ ನನಗೆ ತಿಳಿದುಬಂದಿರುವ ಪ್ರಕಾರ ಒಬ್ಬ ಪೋಲೀಸ್ ದಫೇದಾರನು ಇದರಲ್ಲಿ involve ಆಗಿದ್ದಾನೆ. ಆ ವಿಷಯವನ್ನು ಈಗ ಚರ್ಚೆ ಮಾಡುವುದಿಲ್ಲ. ಎಷ್ಟರಮಟ್ಟಿಗೆ ಪೋಲೀಸ್ ಇಲಾಖೆಯ ಆಡಳಿತ ನಡೆಯುತ್ತಿದೆ, ಎಂಥ ಅನ್ಯಾಯಗಳಾಗುತ್ತಿವೆ ಎಂದು ಮಾತ್ರ ಹೇಳುತ್ತಿದ್ದೇನೆ. ಈ ಬಗ್ಗೆ ತೀಕ್ಷ್ಣವಾದ ಕ್ರಮವನ್ನು ಕೈಗೊಳ್ಳಬೇಕು. ನಾನು ಟೀಕೆ ಮಾಡಲು ಹೀಗೆ ಹೇಳುತ್ತಿಲ್ಲ, ವಾಸ್ತವಾಂಶಗಳನ್ನು ತಿಳಿದು ಮಾತನಾಡುತ್ತಿದ್ದೇನೆ. ನಿಮಗೆ ಸಂಶಯವಿದ್ದರೆ ನನ್ನ ಜೊತೆಯಲ್ಲಿ ಮೂರು ಜನ ಬನ್ನಿ. ನಾವು ವೇಷಬದಲಾಯಿಸಿಕೊಂಡು ಸಿ.ಐ.ಡಿ. ಕೆಲಸಮಾಡೋಣ. ನಾನು ಬೇಕಾದಷ್ಟು ಕೇಸುಗಳನ್ನು ಹಿಡಿದು ಕೊಡುತ್ತೇನೆ.

Anti-Corruption ಇಲಾಖೆ ಇದೆ. Efficiency Audit ಇಲಾಖೆ ಇದೆ. ಇಷ್ಟಿದ್ದೂ ಇವೊತ್ತಿನ ದಿವಸ ಕರಪ್ಷನ್ ನಿಂತಿಲ್ಲ. ಈ ಇಲಾಖೆಗೆ ಏಕೆ ಹಣವನ್ನು ಖರ್ಚುಮಾಡಬೇಕು ? ಕರಪ್ಷನ್ ನಿರ್ಮೂಲ ಮಾಡಬೇಕೆಂದು ಹೇಳುವಾಗ ಅದು ಇನ್ನೂ ಹೆಚ್ಚುತ್ತಿದ್ದರೆ, ಈ ಇಲಾಖೆಯಿಂದ ಉಪಯೋಗವಾದರೂ ಏನು ? ಈ ಬಗ್ಗೆ ಪರಿಶೀಲನೆಮಾಡಿ ತೀಕ್ಷ್ಣವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಹಳ್ಳಿ ಕೈಗಾರಿಕೆಯ ವಿಷಯದಲ್ಲಿ ಒಂದು ಮಾತು. ಭಾರತರತ್ನ ಎಂ. ವಿಶ್ವೇಶ್ವರಯ್ಯನವರು ಆದರ್ಶ ಪುರುಷರು. ಇವರಿಗೆ ನೂರುವರ್ಷವಾಗುತ್ತದೆ. ಇಂಥವರು ತಯಾರುಮಾಡಿದ ಬೃಹತ್ ಯೋಜನೆಯನ್ನು ಸರಿಯಾಗಿ ಅನುಷ್ಠಾನಕ್ಕೆ ತರದೆ ಇರುವುದರಿಂದ ದೇಶದ ಹಣ ಅನೇಕ ರೀತಿಯಲ್ಲಿ ಪೋಲಾಗುತ್ತಿದೆ ಎಂದರೆ ತಪ್ಪಾಗಲಾರದು. ನಮ್ಮ ಊರಿನಲ್ಲಿ ಒಂದು ಎಣ್ಣೆಗಾಣವನ್ನು ಸಹಕಾರ ಸಂಘದವರು ನಡೆಸಬೇಕೆಂದು ಏರ್ಪಾಡು ಮಾಡಿದರು. ಅದಕ್ಕೆ ಒಂದು ಜೊತೆ ಎತ್ತುಗಳನ್ನು ಕೊಂಡುಕೊಂಡಿದ್ದಾರೆ. ಗಾಣವನ್ನು ಕೊಟ್ಟಿದ್ದಾರೆ. ಅಡಿಷನಲ್ ಡೈರೆಕ್ಟರ್ ಅವರು ಅಲ್ಲಿಗೆ ಬಂದಾಗ ಪ್ರತಿಯೊಂದು ಸಲವೂ 100-150 ರೂಪಾಯಿಗಳ ಪ್ರಯಾಣ ಮತ್ತು ದಿನಭತ್ಯವನ್ನು ತೆಗೆದುಕೊಳ್ಳುತ್ತಾರೆ. ಹೀಗೆ ಮೂರು ನಾಲ್ಕುಸಲ ಬಂದಿದ್ದಾರೆ. ಈ ಗಾಣವನ್ನು fix ಮಾಡಬೇಕಾದರೆ ವೈಜ್ಞಾನಿಕ ರೀತಿಯಿಂದ ಮಾಡಿ, ಸರಿಯಾದ ರೀತಿಯಲ್ಲಿ ಬೇಜವನ್ನು ಅರೆದು ಕೆಲಸಮಾಡಿದರೆ ಸರಿಯಾದ ಪ್ರಮಾಣದಲ್ಲಿ ಎಣ್ಣೆ ಬರುತ್ತದೆ. ಇದನ್ನು ಹಾಕುವ ಕಡೆ ನೆರಳು ಇರಬೇಕು. ಇದನ್ನು fix ಮಾಡಲು ಹೈದರಾಬಾದಿನಿಂದ ಒಬ್ಬ expert ಅದನನ್ನು ಕರೆದುಕೊಂಡು ಬಂದರು. ಬೇಕಾದಷ್ಟು ದುಡ್ಡನ್ನು ಖರ್ಚುಮಾಡಿದರು. ಒಂದು ಜೊತೆ ಎತ್ತುಗಳಿಗೆ ಒಂದು ದಿನಕ್ಕೆ ನಾಲ್ಕೈದು ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಇಷ್ಟಾದರೂ ಸಹ ಇದರಿಂದ ಒಂದೆರಡು ವ್ಯಕ್ತಿಗಳಿಗೆ ಅನುಕೂಲವಾಗುತ್ತಿದೆ. ಜನಸಾಮಾನ್ಯರಿಗೆ ಅನುಕೂಲವಾಗುವ ರೀತಿಯಲ್ಲಿ ಇಂಥ ಕೆಲಸ ಮಾಡಬೇಕು ಎಂದು ಹೇಳುತ್ತೇನೆ.

N.E.S. ಬ್ಲಾಕುಗಳ ವಿಷಯವನ್ನು ತೆಗೆದುಕೊಂಡರೆ ನಮ್ಮಲ್ಲಿ ಈಗ ಒಂದು C.D. ಬ್ಲಾಕ್ ಇದೆ. ಅದಕ್ಕೆ 220 ಗ್ರಾಮಗಳು ಸೇರಿವೆ. ಅನೇಕ ಗ್ರಾಮಗಳಿಗೆ ಅಲ್ಲಿರತಕ್ಕ ಅಧಿಕಾರಿಗಳು ಹೋಗುತ್ತಿಲ್ಲ. ಅಲ್ಲಿರತಕ್ಕ ಒಬ್ಬ ಇಂಜಿನಿಯರು ಒಂದು ಕೆಲಸ ಮಾಡಿದ್ದಾರೆ. ಗುಂಜೇವು ಎಂದರೆ Causeway ಕಟ್ಟಿಸಿದಾಗ ಅವರ ಮನೆಯಲ್ಲಿಯೇ ಕುಳಿತುಕೊಂಡು ಎಸ್ಟಿಮೇಟ್ ಮಾಡಿದ್ದಾರೆ. ಅವರ inspection ಮಾಡಿಲ್ಲ. ಅದನ್ನು ಕಟ್ಟಿದ ಎರಡೂವರೆ ತಿಂಗಳೊಳಗಾಗಿ ಒಡೆದು ಕೊಚ್ಚಿ ಹೋಯಿತು. ಅದರ ಬಗ್ಗೆ investigation ಮಾಡಿ ಎಂದು ತಿಳಿಸಿದೆ. ಎಲ್ಲವನ್ನೂ ಮಾಡಿ ಡೆಪ್ಯುಟಿಕಮಿಷನರು ತಮ್ಮ ಅಭಿಪ್ರಾಯವನ್ನು ತಿಳಿಸಿ ಸರ್ಕಾರಕ್ಕೆ ಶಿಫಾರ್ಸು ಮಾಡಿದ್ದಾರೆ. ಈಗ ಆ ಫೈಲ್ ಸೆಕ್ರೆಟೇರಿಯಟ್ಟಿಗೆ ಬಂದಿದೆ. ಅದರಮೇಲೆ ಇನ್ನೂ ಆರ್ಡರಾಗಿಲ್ಲ. ಈ ರೀತಿಯಲ್ಲಿ ಕೆಲಸಗಳು ನಡೆದರೆ ಹಳ್ಳಿಯ ಜನಗಳಿಗೆ, ಅವರ ಮಕ್ಕಳು ಮರಿಗಳಿಗೆ ಮತ್ತು ದೇಶಕ್ಕೆ ಅನುಕೂಲವಾಗುವುದಿಲ್ಲ. ಈ ಸಭೆಯ ಒಬ್ಬ ಸದಸ್ಯರು ಹೇಳಿದ ವಿಷಯಕ್ಕೆ ಹೀಗಾದರೆ ಇತರರ ವಿಷಯವನ್ನು ಹೇಳುವಂತಿಲ್ಲ. ನ್ಯಾಯ ಮತ್ತು ಧರ್ಮ ಎಲ್ಲರಿಗೂ ಒಂದೇ. ಆದುದರಿಂದ ಇಂಥ ವಿಷಯಗಳಲ್ಲಿ ಅಧಿಕಾರಿಗಳಿಂದ ಬಂದಿರುವ ರಿಪೋರ್ಟಿಗೆ ಮನ್ನಣೆ ಕೊಟ್ಟು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದೆ ಹೋದರೆ ಬಹಳ ತೊಂದರೆಯಾಗುತ್ತದೆ.

ಪಬ್ಲಿಕ್ ವರ್ಕ್ಸ್ ಇಲಾಖೆಗೆ ಯಾವುದೋ ಒಂದು ಆಸೆಯಿಂದ ನಮ್ಮ ಆದಾಯದ ಅರ್ಧಭಾಗವನ್ನು allot ಮಾಡುತ್ತಿದ್ದೇವೆ. ಮೈನರ್ ಇರಿಗೇಷನ್ ಬಗ್ಗೆ ಎಕ್ಸಿಕ್ಯೂಟಿವ್ ಇಂಜಿನಿಯರು, ಡೆಪ್ಯುಟಿಕಮಿಷನರು ಮತ್ತು N.E.S. ನವರು ಹೆಚ್ಚಿಗೆ ನಿಗಾ ಕೊಡಬೇಕೆಂದು ಸೂಚನೆ ಸರ್ಕಾರದಿಂದ ಇದೆ. ಹೊಳೆನರಸೀಪುರ ತಾಲ್ಲೂಕಿನಲ್ಲಿ ಹುಣಸನಕೆರೆ, ಮಾರನಗೆರೆ ಕೆರೆಗಳ ವಿಷಯದಲ್ಲಿ ಕಳೆದ 20 ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಆಯಾ ಗ್ರಾಮಸ್ಥರು ಅಹವಾಲುಗಳನ್ನೂ ಅರ್ಜಿಗಳನ್ನೂ ಸಾವಿರಗಟ್ಟಲೆ ಕಳುಹಿಸಿದ್ದಾರೆ. ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡಿದಾಗ ಹೇಳಿದ್ದೇನೆ. ಬೇರೆ ಮಂತ್ರಿಗಳು ಬಂದಾಗಲೆಲ್ಲ ಹೇಳಿದ್ದೇನೆ. ಬಹುಶಃ ಮಾನ್ಯ ಆರೋಗ್ಯಶಾಖೆಯ ಮಂತ್ರಿಗಳು ಬಂದಿದ್ದ ಸಂದರ್ಭದಲ್ಲಿ ಹೇಳಲಿಲ್ಲವೆಂದು ಕಾಣುತ್ತದೆ. ಮಾನ್ಯ ಮಂತ್ರಿಗಳು ಬಂದಿದ್ದಾಗ ಲಿಖಿತ ಮೂಲಕ ಅಹವಾಲನ್ನು ಹೇಳಿಕೊಂಡಿದ್ದರೂ ಕೂಡ ಅದರ ಕಡೆಗೆ ಗಮನ ಕೊಡದೆ ಇರುವುದರಿಂದ ಸುಮಾರು 500-600 ಎಕರೆ ಜಮೀನು ವ್ಯವಸಾಯವಾಗದೆ grow more food campaign ಗೆ ತೊಂದರೆಯಾಗಿದೆ.

ಹೊಳೆನರಸೀಪುರತಾಲ್ಲೂಕು, ಹಳೇಕೋಟೆ ಹೋಬಳಿಯಲ್ಲಿ ಸಂಕೇನಹಳ್ಳಿ ಪ್ರಾಜೆಕ್ಟು ಸಂಬಂಧದಲ್ಲಿ ಎಂಟೂವರೆ ಲಕ್ಷ ರೂಪಾಯಿಗಳ ಯೋಜನೆ ಇದೆ. ಇದರಿಂದ 750 ಎಕರೆ ಜಮೀನು ಸಾಗುವಳಿಗೆ ಬರುತ್ತದೆ. ಇದರ ಬಗ್ಗೆ ಸರ್ವೆಯಾಗಿದೆ. ಪ್ರತಿಯೊಂದು record build up ಮಾಡಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ಕಳುಹಿಸಿದ್ದಾರೆ, ಅದು ಚೀಫ್ ಇಂಜಿನಿಯರ್ ಅವರ ಆಫೀಸಿನಲ್ಲಿ ಸೇರಿಕೊಂಡಿವೆ. ಇದಕ್ಕೆ ಇನ್ನೂ technical sanction ಆಗಿಲ್ಲ, administrative sanction ಆಗಿಲ್ಲವೆಂದು ಹೇಳುತ್ತಾರೆ. ಇಂಥ ಎಷ್ಟು ಕೇಸುಗಳಿವೆ, ಏಕೆ sanction ಆಗಿಲ್ಲವೆಂಬುದನ್ನು ಪರಿಶೀಲನೆಮಾಡಬೇಕು. ಇಂಥ ಯೋಜನೆಗಳನ್ನು ಶೀಘ್ರವಾಗಿ ಮಾಡದೆ ಇದ್ದರೆ ಆಹಾರದ ವಿಷಯದಲ್ಲಿ ನಾವು ಆಕಾಶವನ್ನು ನೋಡಿಕೊಂಡು ಕುಳಿತುಕೊಳ್ಳಬೇಕಾಗುತ್ತದೆ; ಅಕ್ಕಿ ರೂಪಾಯಿಗೆ ಒಂದೂವರೆ ಸೇರು ಅಥವ ರಾಗಿ ಎರಡೂವರೆ ಸೇರು ಈ ಪ್ರಕಾರವಾಗಿ ಕೊಂಡುಕೊಂಡು ತಿನ್ನಬೇಕಾಗುತ್ತದೆ. ವರ್ಷವೆಲ್ಲ ಹೆಬ್ಬಹಳ್ಳದಲ್ಲಿ ನೀರು ಹರಿಯುತ್ತದೆ. ಈ ಕೆಲಸವನ್ನು ಜಾಗ್ರತೆಯಾಗಿ ಮುಗಿಸದಿದ್ದರೆ ಯಾರಿಗೂ ಅನುಕೂಲವಾಗುವುದಿಲ್ಲ.

ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಹಂಚಿಕೆಯಾಗತಕ್ಕ ವಿಷಯದಲ್ಲಿ ಹಾಸನ ಜಿಲ್ಲೆಯನ್ನು ತೆಗೆದುಕೊಂಡರೆ ಆ ಜಿಲ್ಲೆಯಲ್ಲಿ ಎಂಟು ತಾಲ್ಲೂಕುಗಳಿವೆ. ಪ್ರತಿತಾಲ್ಲೂಕಿಗೂ ಸರಿಯಾಗಿ ಹಣದ ಹಂಚಿಕೆಯಾಗುತ್ತಿಲ್ಲ. ಉದಾಹರಣೆಗೆ ಬೇಲೂರು ತಾಲ್ಲೂಕಿಗೆ 14,78,600 ರೂಪಾಯಿಗಳನ್ನು ಕೊಟ್ಟಿದ್ದರೆ ಹೊಳೆನರಸೀಪುರ ಮತ್ತು ಇತರ ಕೆಲವು ತಾಲ್ಲೂಕುಗಳಿಗೆ 20-30 ಸಾವಿರ ರೂಪಾಯಿ ಮಾತ್ರ ಕೊಡುತ್ತಿದ್ದಾರೆ. ಇದರಿಂದ ಹಳ್ಳಿಯ ಜನಗಳಿಗೆ ಅನುಕೂಲವಾಗಿಲ್ಲ. ನಾವೂ ಮತ್ತು ನಮ್ಮ ರೈತರೂ ಕಂದಾಯ ಮತ್ತು ತೆರಿಗೆಗಳನ್ನು ಇತರರಂತೆಯೇ ಕೊಡುತ್ತೇವೆ. ಆದರೂ ಸಹ ನಮ್ಮ ತಾಲ್ಲೂಕಿಗೆ ಸರಿಯಾಗಿ ಹಣದ ಹಂಚಿಕೆಯಾಗಿಲ್ಲ.

ಮಾನ್ಯ ಮುಖ್ಯಮಂತ್ರಿಗಳು ಮತ್ತು ವೀರಣ್ಣಗೌಡರು ಚುಂಚನಕಟ್ಟೆಬಳಿ ಕಾವೇರಿ ನದಿಯ ಮೇಲಿನ ಸೇತುವೆಯನ್ನು ಪ್ರಾರಂಭ ಮಾಡಲು ಬಂದಿದ್ದ ಸಂದರ್ಭದಲ್ಲಿ ಸಾಲಿಗ್ರಾಮ—ಹಳ್ಳಿಮೈಸೂರು ರಸ್ತೆಯ ದುರಸ್ತಿ ವಿಷಯವನ್ನು ತಿಳಿಸಿದ್ದೆ. ನಮ್ಮ ತಾಲ್ಲೂಕಿನಲ್ಲಿರುವ ರಸ್ತೆಯ ಭಾಗವನ್ನು ದುರಸ್ತಿ ಮಾಡಿಕೊಂಡಿದ್ದೇವೆ. ಉಳಿದಿರುವ ರಸ್ತೆಯನ್ನು ದುರಸ್ತಿ ಮಾಡಿಕೊಟ್ಟರೆ, 26 ಮೈಲಿಗಳ ದೂರ ಉಳಿತಾಯವಾಗುತ್ತದೆ. ಹುಣಸೂರು ಮತ್ತು ಇತರ ಭಾಗಗಳಿಂದ ಬರತಕ್ಕ ವಾಹನಗಳಿಗೆ, ಅನುಕೂಲವಾಗಿ ಅಲ್ಲಿನ ಜನಗಳ

(ಶ್ರೀ ವೈ. ವೀರಪ್ಪ)

ಆರ್ಥಿಕ ಮುಗ್ಗಟ್ಟಿನ ನಿವಾರಣೆಯಾಗುತ್ತದೆ, ವ್ಯಾಪಾರ ಹೆಚ್ಚುತ್ತದೆ. ಏಳು ಮೈಲಿಗಳಷ್ಟು ಉದ್ದದ ರಸ್ತೆ ಮಾತ್ರ ದುರಸ್ತು ಆಗಿಲ್ಲ. ಪದೇ ಪದೇ ಈ ವಿಷಯವನ್ನು ಹೇಳುತ್ತಿದ್ದೇನೆ. ಇದನ್ನು ಈಗ ಲಾದರೂ ಶೀಘ್ರವಾಗಿ ಮಾಡಬೇಕೆಂದು ಹೇಳು ತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ತು ಇಲಾಖೆಯ ಮಂತ್ರಿಗಳು).—ಹೇಳಿದ ಕೂಡಲೆ ಆಗು ವುದಿಲ್ಲ. ಅದಕ್ಕೆ ಎಸ್ಟಿಮೇಟು ಆಗಬೇಕು, ಸ್ಯಾಂಕ್ಷನ್ ಆಗಬೇಕು. ಈ ವರ್ಷದಲ್ಲಿ ಕೆಲಸವನ್ನು ತೆಗೆದು ಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ವೈ. ವೀರಪ್ಪ.—ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಇಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—Lumpsum grant ಇರುತ್ತದೆ. ಅದರಲ್ಲಿ ಇಂಥ ಸಣ್ಣ ಪುಟ್ಟ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ.

ಶ್ರೀ ವೈ. ವೀರಪ್ಪ.—ಇನ್ನೂ ಎಷ್ಟರಮಟ್ಟಿಗೆ ಈ ಇಲಾಖೆ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ, ಕೆಲಸ ಮಾಡುತ್ತಿದೆ ಎಂಬುದನ್ನು ಹೇಳುತ್ತೇನೆ. 1957-58ನೆಯ ಬಡ್ಜೆಟ್ಟಿನಲ್ಲಿ ಯಗಚಿ ನದಿಗೆ ಪಡುವಳಲು ಎಂಬಲ್ಲಿ 50,000 ರೂಪಾಯಿ ಖರ್ಚಿನಲ್ಲಿ ಒಂದು ಸೇತುವೆಯನ್ನು ಕಟ್ಟಬೇಕು ಎಂದಿತ್ತು. ಇದರಿಂದ ಬೇಲೂರು ಮತ್ತು ಇತರ ಗ್ರಾಮಗಳಿಗೆ ಹೋಗಬೇಕಾದರೆ 12-13 ಗ್ರಾಮಗಳ ವರಿಗೆ ಅನುಕೂಲವಾಗುತ್ತದೆ. ಇದು 1957-58 ನೆಯ ಸಾಲಿನ ಬಡ್ಜೆಟ್‌ನಲ್ಲಿ 196ನೆಯ ಪುಟದಲ್ಲಿದೆ. 1957-58ನೆಯ ಬಜೆಟ್‌ನಲ್ಲಿಯೂ ಕೂಡ 497 ನೆಯ ಪೇಜನ್ನು ತೆಗೆದುಕೊಂಡರೆ, ಅಲ್ಲಿ 50 ಸಾವಿರ ರೂಪಾಯಿ ಪ್ರೊವೈಡ್ ಮಾಡಿದ್ದಾರೆ. 10,000 ರೂಪಾಯಿ ಖರ್ಚಾಗಿದೆ ಎಂದು ಹೇಳಿದರು. ಆದರೆ ಯಗಚಿ ಹೊಳೆಗೆ ಬ್ರಿಡ್ಜ್ ಹಾಕುವುದಕ್ಕೆ ಮೂರು ಮೈಲಿ ದೂರಕ್ಕೆ, ಪುನಃ 50,000 ರೂಪಾಯಿ ಗ್ರಾಂಟ್ ಮಾಡಿದ್ದಾರಲ್ಲ. ಇದರಿಂದ 10-15 ಗ್ರಾಮ ಗಳಿಗೆ ಅನುಕೂಲವಾಗುವುದಾದರೆ ಕೊಡಲಿ. ಇಲ್ಲಿ ನೋಡಿದರೆ ಅಸಿಸ್ಟೆಂಟ್ ಎಂಜನಿಯರ್, ಸರ್ವೇಯರ್ ಮುಂತಾದ ಸ್ಥಳೀಯ ಅಧಿಕಾರಿಗಳು ಬಹುಶಃ ಒಂದು ಪ್ರಭಾವಕ್ಕೆ ಒಳಗಾದ ಹಾಗಿದೆ. 1958-59 ನೆ ಬಜೆಟ್ಟಿನ ಪೇಜ್ 561 ತೆಗೆದುಕೊಂಡರೆ ಇದು ಮನದ ಟ್ಟಾಗುತ್ತದೆ. "Capital account of civil works outside the Revenue Account, etc." ಎಂಬುದರಲ್ಲಿ construction of a Bridge across Yagachi river near Pura ಎಂದು ಇದೆ. ಇಲ್ಲಿ ಜನರಿಗೆ ಅನುಕೂಲವಿಲ್ಲ. ಮೂರು ಮೈಲಿ ದೂರದಲ್ಲಿರುವ ಪುಡವಳಲು ಗ್ರಾಮದಲ್ಲಿ ಕೊಟ್ಟರೆ 10-15 ಹಳ್ಳಿಗಳಿಗೆ ಅನುಕೂಲವಾಗುತ್ತದೆ ಎಂದು ಎಕ್ಸಿಕ್ಯೂಟೀವ್ ಇಂಜನಿಯರ್ ಹೇಳಿದ್ದಾರೆ. ಅಲ್ಲಿ ಆಗಲೇ ಬೇಕಾದಷ್ಟು ದುಡ್ಡು ಖರ್ಚುಮಾಡಿ ದ್ದಾರೆ. ಯಾವುದೋ ಒಂದು ಪ್ರಭಾವಕ್ಕೋ, ಭಯಕ್ಕೋ ಒಳಗಾಗಿ, ಈ ಹೊಸ ಪ್ರಪೋಸಲ್ಸನ್ನು ಸ್ಥಳೀಯ ಅಧಿಕಾರಿಗಳು ಕಳುಹಿಸಿದ್ದಾರೆ. ಇದನ್ನು ಗುರ್ತುಮಾಡಿಕೊಂಡಿರಿ. ಅನುಕೂಲವಾದರೆ ಇದನ್ನೂ ಮಾಡಿ. ಪುರಗ್ರಾಮದ ಹತ್ತಿರ ಬ್ರಿಡ್ಜ್ ಮಾಡಿದರೆ ಎಷ್ಟು ಹಳ್ಳಿಗಳಿಗೆ ಅನುಕೂಲವಾಗುತ್ತದೆ? ಇಲ್ಲಿ ಮಾಡಿದರೆ 16 ಗ್ರಾಮಗಳಿಗೆ ಅನುಕೂಲವಾಗುತ್ತದೆ. ಪುರದ ಹತ್ತಿರ ಬೇಕಾದರೆ ಬ್ರಿಡ್ಜ್ ಮಾಡಿಕೊಡಿ. ಆದರೆ ಸುಮ್ಮನೆ ಮೂರು ಮೈಲಿ ದೂರದಲ್ಲಿಯೇ ಬ್ರಿಡ್ಜ್ ಕಟ್ಟಿ ದರೆ ಅನುಕೂಲವಾಗುವುದಿಲ್ಲ. ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ನಿಮ್ಮ ಮುಂದಿರುವ ಪ್ರಪೋಸಲನ್ನು ಕಾರ್ಯಗತ ಮಾಡುತ್ತೀರಿ ಎನ್ನುವು ದರಲ್ಲಿ ಸಂದೇಹವಿಲ್ಲ ಎಂದು ಸರ್ಕಾರದವರಿಗೆ ಹೇಳಿ ನನಗೆ ಮಾತನಾಡುವುದಕ್ಕೆ ಇಷ್ಟು ಕಾಲಕೊಟ್ಟಿ ದ್ದಕ್ಕಾಗಿ ಅಧ್ಯಕ್ಷರನ್ನು ಅಭಿವಂದಿಸಿ ನನ್ನ ಭಾಷಣ ವನ್ನು ಮುಗಿಸುತ್ತೇನೆ.

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಈ 1958-59ನೆ ಇಸವಿಯ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳಲ್ಲಿ ತಮ್ಮನ್ನು ಪ್ರಾರ್ಥಿಸಿಕೊಳ್ಳು ತ್ತೇನೆ. ಚನ್ನಗಿರಿ ತಾಲ್ಲೂಕಿನಲ್ಲಿ ರಸ್ತೆಗಳಾಗಬೇಕು, ಬಾವಿಗಳಾಗಬೇಕು, ಆರೋಗ್ಯ ಕೇಂದ್ರಗಳು ಆಗ ಬೇಕು ಎಂದು ಪದೇ ಪದೇ ಒತ್ತಾಯಮಾಡಿ ಸರ್ಕಾರಕ್ಕೆ ಮನವಿ ಮಾಡಿಕೊಂಡಾಗ್ಯೂ ಅವು ಕಾರ್ಯರೂಪಕ್ಕೆ ಬರಲಿಲ್ಲ.

ಹೋದ ಬಡ್ಜೆಟ್ಟಿನ ಮೇಲೆ ಮಾತನಾಡುತ್ತಾ ನಾನು ರೈತರ ಹಿತದೃಷ್ಟಿಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಅಗ್ರಿಕಲ್‌ಚರಲ್ ಕಾಲೇಜನ್ನು ಸ್ಥಾಪಿಸ ಬೇಕೆಂದು ಕೇಳಿದ್ದೆ. ಮಾನ್ಯ ಸಚಿವರು ಕ್ಯಾಬಿನೆಟ್ಟನ್ನು ಒಪ್ಪಿಸಬೇಕು, ಆಲೋಚನೆ ಮಾಡುತ್ತೇನೆ ಎಂದು ಹೇಳಿದರು. ಅದು ಕೂಡಾ ಕಾರ್ಯರೂಪಕ್ಕೆ ಬರಲಿಲ್ಲ. ನಮ್ಮಗಳ ದುರಾದೃಷ್ಟ. ಈಗಲಾದರೂ ಕೂಡ ಸಂಬಂಧಪಟ್ಟ ಮಂತ್ರಿಗಳು ತಮ್ಮ ಸಹೋದ್ಯೋಗಿ ಗಳ ಸಂಗಡ ದೀರ್ಘವಾದ ಚರ್ಚೆಮಾಡಿ ಶಿವಮೊಗ್ಗ ದಲ್ಲಿ ವ್ಯವಸಾಯ ಕಾಲೇಜನ್ನು ತೆರೆಯಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ಕಾರದ ಯೋಜನೆಯಂತೆ ಭದ್ರಾನಾಲಾ ಕೆಲಸ 1960ನೇ ಇಸವಿಯಲ್ಲಿ ಆಗಬೇಕು. ಅದು ಏನು ಕಷ್ಟವೋ ಗೊತ್ತಿಲ್ಲ. ಅದರ ಕೆಲಸ ಬಹಳ ಹಿಂದು ಳಿದಿದೆ. ಸಂಬಂಧಪಟ್ಟ ಮಂತ್ರಿಗಳು ತೀಕ್ಷ್ಣವಾಗಿ ಕೆಲಸ ಜರುಗುವಂತೆ ಕಾರ್ಯಕ್ರಮ ತೆಗೆದುಕೊಳ್ಳ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ನಮ್ಮ ತಾಲ್ಲೂಕಿನಲ್ಲಿ ಮಾನಳ್ಳಿ ಕೆರೆಗೆ ಏಳೆಂಟು ಲಕ್ಷ ರೂಪಾಯಿ ಪ್ರೊವೈಡ್ ಆಗಿದೆ. ಆ ಹಣ ಹಾಗೆಯೇ ಇದೆ. ಇಲಾಖೆಯವರು ಕೆಲಸವನ್ನು ಕಾರ್ಯರೂಪಕ್ಕೆ ತರುತ್ತಾ ಇಲ್ಲ. ಕಾರಣ ಗೊತ್ತಾಗಲಿಲ್ಲ. ಆ ಕೆಲಸ ವನ್ನು ತ್ವರಿತವಾಗಿ ಕಾರ್ಯರೂಪಕ್ಕೆ ತರಬೇಕೆಂದು ಶ್ರೀ ವೀರಣ್ಣಗೌಡರನ್ನು ಪ್ರಾರ್ಥನೆ ಮಾಡಿಕೊಳ್ಳು ತ್ತೇನೆ.

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಲಂಚ ಜಾಸ್ತಿ ಯಾಗುತ್ತಿದೆ ಎಂದು ನಾನು ಚಾಲೆಂಜ್ ಮಾಡಿ ಹೇಳುತ್ತೇನೆ. ಏಕೆಂದರೆ, ಒಬ್ಬ ಎಂಜನಿಯರು ನಾಲ್ಕೂ ವರೆ ಸಾವಿರ ರೂಪಾಯಿ ಹೊಡೆದಿದ್ದಾರೆ. ಎನ್‌ಕ್ವೈರಿ ಮಾಡಲಿ. ಒಂದು ಕೆಲಸವೂ ಕಾರ್ಯರೂಪಕ್ಕೆ ಬರುವುದಿಲ್ಲವಲ್ಲ ಎಂದು ವ್ಯಸನವಾಗುತ್ತದೆ. ಡಿಪಾರ್ಟ್‌ಮೆಂಟಿನ ಗಂಟು ಹೋಗುತ್ತದಲ್ಲ ಎಂದು ವ್ಯಸನಬರುತ್ತದೆ. ನಮ್ಮ ಚನ್ನಗಿರಿ ತಾಲ್ಲೂಕು ಮಾನಹಳ್ಳಿಯಲ್ಲಿ ಒಂದು ಆಫೀಸ್ ಮಾಡಿ, ಅಲ್ಲಿನ ಕೆಲಸವನ್ನು ಕಾರ್ಯರೂಪಕ್ಕೆ ತರ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪೋಲೀಸ್ ಶಾಖೆಯ ವಿಚಾರ ಹೇಳಬೇಕೆಂದಿದ್ದೇನೆ. ಯಾರ ಬಾಯಲ್ಲಿ ಕೇಳಲಿ ಪೋಲೀಸ್ ಆಡಳಿತದ ವಿಚಾರವೇ! ನಾನೇ ಸ್ವತಃ ಅದರ ಆಡಳಿತ ನೋಡಿದ್ದೇನೆ. ಲಂಚದ ಸುರಿಮಳೆ. ಒಬ್ಬ ಕಾನ್ಸ್ ಟೇಬಲ್ ಲಂಚ, ಸಬ್‌ಇನ್ಸ್‌ಪೆಕ್ಟರ್ ಲಂಚ, ಎಲ್ಲಾ ಲಂಚ, ಅಲ್ಲಿ ಶರಾಬು ಕುಡಿಯುವುದು ಸ್ವೇಚ್ಛೆಯಾಗಿ ನಡೆಯುತ್ತಿದೆ, ಸರ್ಕಾರ ಅದನ್ನು ತಹಬಂದಿಗೆ

ತರಲಿಲ್ಲವಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ. ಪ್ರತಿಯೊಬ್ಬ ಸದಸ್ಯರೂ ಪೋಲೀಸ್ ಇಲಾಖೆಯಲ್ಲಿ ಲಂಚ ಜಾಸ್ತಿಯಾಗಿದೆಯೆಂದು ಹೇಳಿದರು. ಖೂನಿಗಳು ಜಾಸ್ತಿಯಾಗಿವೆ. ಕೇಸ್ ಹಾಕುವಾಗ ರುಜು ವಾತು ಬರದಹಾಗೆ ಪೋಲೀಸಿನವರು ಚಾರ್ಜ್‌ಷೀಟ್ ಕೆಡಿಸಿಬಿಡುತ್ತಾರೆ. ಅನುಕೂಲವಾದ ಕೆಲವು ಅಂಶಗಳನ್ನೇ ಅದರಲ್ಲಿ ಬರೆಯದೆ ಬಿಟ್ಟುಬಿಡುತ್ತಾರೆ. ಹೀಗಾಗಿ ಖೂನಿ ಕೇಸುಗಳು ಕೋರ್ಟಿನಲ್ಲಿ ರುಜುವಾತಾಗುತ್ತಿಲ್ಲ. ಈಗಲಾದರೂ ಗೃಹಶಾಖೆಯ ಮಂತ್ರಿಗಳು ಈ ವಿಚಾರದಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಎಂ. ಟಿ. ಲೋನ್ ಮತ್ತು ಎಸ್. ಟಿ. ಲೋನ್‌ಗಳಿಗೆ ಮಂಜೂರಾದ ಹಣವನ್ನು ರೈತರಿಗೆ ಸಕಾಲಕ್ಕೆ, ತಕ್ಷಣವೇ ಪಾವತಿಮಾಡಿ ಅವರಿಗೆ ಆಹಾರಧಾನ್ಯ ಬೆಳೆಯಲು ಪ್ರೋತ್ಸಾಹ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಅಲ್ಲದೆ ಬಡ ರೈತರಿಗೆ ಮುಫತ್ತಾಗಿ ಆಗದಿದ್ದರೆ,ಸಾಲದ ರೂಪವಾಗಿಯಾದರೂ ಹೆಚ್ಚಿಗೆ ಗೊಬ್ಬರವನ್ನು ಸರ್ಕಾರದವರು ಕೊಟ್ಟು ಆಹಾರದ ಅಭಾವವನ್ನು ನೀಗಿಸಬೇಕೆಂದು ಸಂಬಂಧಪಟ್ಟ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ವ್ಯವಸಾಯದ ಮುಟ್ಟು ಇಲ್ಲದೆ ಇದ್ದರೆ ಜಿರಾಯಿತು ಕೆಲಸ ಬಂದಾಗಿ ಬಿಡುತ್ತದೆ ಎಂದು ಪದೇಪದೇ ಹೇಳುತ್ತಲೇ ಇದ್ದೇವೆ. ಆಯಾ ಸ್ಥಳಗಳಲ್ಲಿ, ಆಯಾ ಹೆಡ್‌ಕ್ವಾರ್ಟರ್ಸ್‌ನಲ್ಲಿ ಡಿಪೋ ಓಪನ್‌ಮಾಡಿ ರೈತರಿಗೆ ಈ ಸಲಕರಣೆಗಳನ್ನು ಒದಗಿಸುತ್ತೇನೆಂದು ಮಾನ್ಯ ಸಚಿವರು ಈ ಸಭೆಯ ಸದಸ್ಯರಿಗೆ ಹೇಳಿದ್ದರು. ಡಿಪೋ ಓಪನ್ ಮಾಡಿದರು, ನಾಟಾ ಸೇಲ್‌ಮಾಡಿದರು. ರೈತರಿಗೆ ಸ್ವಪ್ನದಲ್ಲಿ ಕಂಡಹಾಗೆ ಆಯಿತು. ಪುನಃ ಡಿಪೋವಿನಲ್ಲಿನ ನಾಟವನ್ನೆಲ್ಲಾ ಹರಾಜುಮಾಡಿಸಿ ಸರ್ಕಾರದವರು ದುಡ್ಡು ತೆಗೆದುಕೊಂಡರು. ವ್ಯವಸಾಯದ ಮುಟ್ಟುಇಲ್ಲದೆ ರೈತರಿಗೆ ಬಹಳ ತೊಂದರೆಯಾಗಿದೆ. ಹೀಗಾದರೆ ಅವರು ಆಹಾರ ಬೆಳೆಯುವುದು ಹೇಗೆ? ಸರ್ಕಾರದವರು ಆಹಾರದ ಅಭಾವ ನೀಗುವುದು ಹೇಗೆ?

4 P.M.

ಹೊಸಳ್ಳಿಗ್ರಾಮದಲ್ಲಿ ಎಣ್ಣೆ ಸಂಶೋಧನಾ ಕೇಂದ್ರವನ್ನು ತೆರೆಯಬೇಕೆಂದು ಇಂಡಿಯಾ ಸರ್ಕಾರದ ಒಪ್ಪಿಗೆ ಪಡೆದಿದ್ದರೂ ಚನ್ನಗಿರಿ ತಾಲ್ಲೂಕಿನಲ್ಲಿ ನಾನೂರು ಎಕರೆ ಪ್ರದೇಶ ಬೇಕು ಎಂತಲೋ ಏನೋ ಇವತ್ತಿನವರೆಗೂ ಅದನ್ನು ತೆರೆಯಲಿಲ್ಲ. ಇದು ನಮ್ಮ ದುರದೃಷ್ಟ, ನಮ್ಮ ತಾಲ್ಲೂಕಿನಲ್ಲಿ ಪ್ರಜಾಸಂಖ್ಯೆ ಹೆಚ್ಚಾಗಿರುವುದರಿಂದ ಈಗಲಾದರೂ ಅದನ್ನು ತೆರೆಯಲು ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಆಮೇಲೆ ನಮ್ಮ ಕಡೆಯವರು ಇಬ್ಬರು ಮಂತ್ರಿಗಳಾಗಿದ್ದರೂ ಕೂಡ 20 ಗ್ರಾಮಗಳಿಗಿರುವ ಕುಡಿಯುವ ನೀರಿನ ಅಭಾವವನ್ನು ತಪ್ಪಿಸಿ ತೊಂದರೆ ನಿವಾರಿಸಿಲ್ಲ. ಈಕಡೆ ಗಮನ ಕೊಡಬೇಕು. ಜನರಿಗೆ ಮುಖ್ಯವಾಗಿ ಆಹಾರ, ನೀರು ಬೇಕು. ಈ ಸಂಬಂಧದಲ್ಲಿರುವ ಕಷ್ಟವನ್ನು ಮೊದಲು ಪರಿಹಾರ ಮಾಡಬೇಕು. 33 ಸ್ಕೂಲಿಗೆ ಬೇಕಾದ ರೂಮುಗಳಿಲ್ಲ. ಐ.ವಿ.ಸಿ. ರಸ್ತೆಗಳಿಗೆ, ಗ್ರಾಮಾಭಿವೃದ್ಧಿಗೆ ಗ್ರಾಂಟು ಕೊಡಬೇಕು. 21 ಗ್ರಾಮಗಳಲ್ಲಿ ಸ್ಕೂಲುಕಟ್ಟಡವಿಲ್ಲ. ನಮ್ಮ ಪ್ರಾಂತದಲ್ಲಿ ಹತ್ತು ಸಾವಿರ ಜನಸಂಖ್ಯೆಯಿದೆ. ಅದನ್ನು ಪ್ರತಿನಿಧಿಸಲು ಇಬ್ಬರು ಸಚಿವರಾಗಿದ್ದರು; ಒಬ್ಬರು ರೆವಿನ್ಯೂಮಂತ್ರಿಗಳಾಗಿದ್ದರು. ಹಾಗಿದ್ದರೂ ಕೂಡ ಇಲ್ಲಿಯವರೆಗೂ ನಮಗಿರುವ ತೊಂದರೆಗಳನ್ನು ಹೋಗಲಾಡಿಸಿಲ್ಲ, ದಯವಿಟ್ಟು ಈಗಲಾದರೂ ಆಕಡೆ ಗಮನಕೊಟ್ಟು ನಾನು ಹೇಳಿರುವ ಆವಶ್ಯಕತೆಗಳ ಕಡೆ ನಿಗಾಕೊಡಬೇಕೆಂದು ಪ್ರಾರ್ಥಿಸುತ್ತೇನೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಕೆಲಸಗಳು ಸುಲಲಿತವಾಗಿ ಆಗುವಂತೆ ಹೆಚ್ಚು ಹೆಚ್ಚಾಗಿ ಗ್ರಾಂಟು ಕೊಡಬೇಕು ; ಮತ್ತು ಸ್ಕೂಲುಗಳು ಅಭಿವೃದ್ಧಿಗೆ ಬರುವಂತೆ ನಾನಾ ಗ್ರಾಂಟು ವಗೈರೆ ಕೊಟ್ಟು ನಮ್ಮ ತಾಲ್ಲೂಕನ್ನು ಉತ್ತಮ ಸ್ಥಿತಿಗೆ ತರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಹೇಳಿದ ವಿಷಯಗಳಿಗೆಲ್ಲಾ ಗಮನಕೊಟ್ಟು ಕಾರ್ಯರೂಪಕ್ಕೆ ತರಬೇಕೆಂದು ಸಂಬಂಧಪಟ್ಟ ಸಚಿವರಲ್ಲಿ ಮತ್ತೊಮ್ಮೆ ಪ್ರಾರ್ಥನೆಮಾಡಿ ಇಷ್ಟುಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಟಿ. ಕೆ. ಕಂಬ್ಳಿ (ಕುಂದಗೋಳ್).—ಸನ್ಮಾನ್ಯ ಅಧ್ಯಕ್ಷರೇ, 1958–59 ನೆಯ ಸಾಲಿನ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹೊಸ ರಾಜ್ಯವಾಗಬೇಕಾದರೆ, ಐದು ಭಾಗಗಳು ಒಟ್ಟುಕೂಡಿ ಆಗಿದೆ. ಅದರ ಪೈಕಿ ಬೊಂಬಾಯಿ ಕರ್ಣಾಟಕ ಭಾಗವೂ ಸೇರಿದೆ. ಮುಂಬಯಿ ಕರ್ಣಾಟಕದ ಕೆಲವು ಜಿಲ್ಲೆಗಳು ಸೇರಿರುವ ಈ ರಾಜ್ಯದಲ್ಲಿ ಜಮಖಂಡಿ ಸಂಸ್ಥಾನವೂ ವಿಲೀನವಾಗಿದೆ. ಹೀಗೆ ವಿಲೀನವಾದ ಸಂಸ್ಥಾನದಲ್ಲಿ ರೆವೆನ್ಯೂ ತೆರಿಗೆಯನ್ನು ಎರಡು ಪಟ್ಟು ಹೆಚ್ಚಾಗಿ ಹೇರಿದ್ದಾರೆ, ಅದನ್ನು ಕಡಮೆ ಮಾಡಬೇಕು ಎಂದು ಕೇಳಿದರೆ ರೀ ರಿವಿಷನ್ ಆಗಲಿ, ಮಾಡುತ್ತೇವೆಂದು ಬೊಂಬಾಯಿ ಸರ್ಕಾರ ಮತ್ತು ಈ ಸರ್ಕಾರ ಆಶ್ವಾಸನೆ ಕೊಟ್ಟಿದ್ದಾರೆ. ಅದರಂತೆ ಜಾಗ್ರತೆ ಕಡಮೆಮಾಡಬೇಕೆಂದು ಸಂಬಂಧಪಟ್ಟವರಿಗೆ ಹೇಳಬಯಸುತ್ತೇನೆ.

ಮುಂಬಯಿ ಕರ್ಣಾಟಕದಲ್ಲಿ ತಾಲ್ಲೂಕು ಮತ್ತು ಮಹಲ್ (ಪೇಠ) ಎಂದು ಈ ಪ್ರಕಾರ ಭಿನ್ನ ಭಿನ್ನವಿದೆ. ಅದು ಸರಿಯಲ್ಲ. ಈಗ ನಮ್ಮ ಧಾರವಾಡ ಒಂದು ಜಿಲ್ಲೆಯಲ್ಲಿ 12 ತಾಲ್ಲೂಕು, ನಾಲ್ಕು ಮಹಲ್ ಇವೆ. ಇದನ್ನು ಸರಿಮಾಡಿ ಎಲ್ಲಾ ತಾಲ್ಲೂಕುಗಳಿಗೂ ತಹಶೀಲ್ದಾರರನ್ನು ನೇಮಕಮಾಡಬೇಕು.

ಇನ್ನೊಂದು ವಿಷಯ. ಸ್ಕೂಲು ಕಟ್ಟಡ ಮತ್ತು ಚಾವಡಿಗಳಿಗೆ ರಿಪೇರಿ ಸಲುವಾಗಿ ಹಣ ಖರ್ಚುಮಾಡಿ ಬಹಳ ವರ್ಷಗಳಾದುವು. ರೈತರೂ ಸ್ಕೂಲು ಹೊಸ ಕಟ್ಟಡಕ್ಕಾಗಿ ಸ್ವಲ್ಪ ಹಣ ಜಮಾ ಮಾಡಿದ್ದಾರೆ. ಇದಕ್ಕೆ ನಮ್ಮ ಬೊಂಬಾಯಿ ಸರ್ಕಾರ 15 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ಹೋದಸಲ 5 ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರಕ್ಕೆ ಕೊಟ್ಟಿದ್ದಾರೆ; ಇನ್ನೂ 10 ಲಕ್ಷ ರೂಪಾಯಿಗಳನ್ನು ಕೊಡಬೇಕು, ಆದನ್ನು ಮೊದಲು ಕೊಟ್ಟು ಅನುಕೂಲ ಮಾಡಬೇಕೆಂದು ಸಂಬಂಧ ಪಟ್ಟವರಿಗೆ ಹೇಳುತ್ತೇನೆ. ನಮ್ಮ ಕಡೆ ಸ್ಕೂಲು ಕಟ್ಟಡಗಳು ಸಾಕಷ್ಟಿಲ್ಲ, ರಸ್ತೆಗಳಿಲ್ಲ, ನೀರಿನ ಸೌಕರ್ಯವಿಲ್ಲ, ಇಂಥ ಸಮಸ್ಯೆಗಳಿವೆ. ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಮತ್ತು ಕೆಲವು ಊರುಗಳಲ್ಲಿ ಆಜುಬಾಜು ರಸ್ತೆಯಿಲ್ಲ. ಇರುವ ಒಂದೊಂದು ರಸ್ತೆ ಸರಿಯಾಗಿಲ್ಲ. ಹಿಂದಿನ ಸಂಸ್ಥಾನ ಸರಿಯಾಗಿ ಈ ಬಗ್ಗೆ ಗಮನ ಕೊಟ್ಟಿಲ್ಲ. ಇದಕ್ಕೆಲ್ಲಾ ಕೂಡಲೆ ಗಮನ ಕೊಟ್ಟು ತಕ್ಕ ಸೌಕರ್ಯ ಒದಗಿಸಬೇಕು. ಕುಂದಗೋಳ್ ತಾಲ್ಲೂಕಿನಲ್ಲಿ ಏನೇನೂ ಸೌಕರ್ಯವಿಲ್ಲ, ಒಂದೇ ಒಂದು ರೈಲು ಮಾರ್ಗವಿರುತ್ತದೆ. ಮಳೆಗಾಲದಲ್ಲಿ ಅಡ್ಡಾಡುವುದಕ್ಕೆ ಸೌಕರ್ಯವಿಲ್ಲ. ಅದಷ್ಟು ಜಾಗ್ರತೆ ಒದಗಿಸಬೇಕು.

(ಶ್ರೀ ಟಿ. ಕೆ. ಕಂಬ್ಳಿ)

ನಮ್ಮ ಕಡೆ ರಸ್ತೆ ಕೆಲಸ ಡಿ.ಎಲ್.ಬಿ. ಯವರು ಷುರು ಮಾಡಿದ್ದಾರೆ. ಬ್ರಿಡ್ಜ್ ಮಾಡಿಸಬೇಕು ಅಂದರೆ ನಮ್ಮ ಬಜೆಟ್ಟಿನ ಹೊರಗಡೆ ಇದೆ, ಈಗ ಆಗುವುದಿಲ್ಲವೆಂದು ಹೇಳುತ್ತಾರೆ. ಒಂದೆರಡು ಬ್ರಿಡ್ಜ (ಕೂಲ) ಗಳನ್ನು ಕುಂದಗೋಳ-ಲಕ್ಷ್ಮೇಶ್ವರ ನಡುವೆ ಕೂಡಲೇ ತೃಪ್ತಿಕರವಾಗಿ ಮಾಡಿಸಬೇಕೆಂದು ಹೇಳುತ್ತೇನೆ.

ಇನ್ನು ಭೂಸುಧಾರಣೆಯ ವಿಷಯ. ನಮ್ಮ ರಾಜ್ಯದಲ್ಲಿ 100ಕ್ಕೆ 75 ಜನ ವ್ಯವಸಾಯ ಮಾಡುತ್ತಾರೆ. ಆದರೂ ಕೂಡ ಆಹಾರ ಧಾನ್ಯ ಸರಿಯಾಗಿ ಸಿಕ್ಕುತ್ತಾ ಇಲ್ಲ. ಅದರಲ್ಲಿ ಲೋಪದೋಷ ಇದೆ ಎಂಬುದು ಬಹಳ ಸ್ಪಷ್ಟವಾಗಿದೆ. ಈ ಸಮಸ್ಯೆಯನ್ನು ಬಿಡಿಸಬೇಕಾದರೆ ಹೊಸವ್ಯವಸಾಯದ ಬಿಲ್ಲು ಬರಬೇಕು ಅದನ್ನು ಅವಶ್ಯವಾಗಿ ಮಾಡಬೇಕು. ಟೆನೆನ್ಸಿ ಕಾನೂನು ಮುಂಬೈ ರಾಜ್ಯದಲ್ಲಿ ಬಂದು 20 ವರ್ಷಗಳಾಯಿತು. ಈ ಕಾನೂನು ಬರುವ ಪೂರ್ವದಲ್ಲಿ ಟೆನೆಂಟ್ಸ್ ಬೇಡವೇ ಬೇಡ ಎಂದು ಬಹಳವಾಗಿ ವಿರೋಧ ಮಾಡುತ್ತಿದ್ದರು. ಮೊದಲು ಒಂದು ಜಿಲ್ಲೆಯೊಳಗೆ, ಉದಾಹರಣೆಗಾಗಿ, ಧಾರವಾಡ ಜಿಲ್ಲಾದಲ್ಲಿ ಷುರು ಮಾಡಿದರು. ಈ ಟೆನೆನ್ಸಿ ಕಾನೂನು ಬರುವುದಕ್ಕೆ ಮುಂಚೆ ಒಂದು ವರ್ಷ ಆಹಾರಧಾನ್ಯ ಸಾಕಾಗುವಷ್ಟು ಬರುತ್ತಿತ್ತು. ಅದು ಈಗ ಹದಿನೆಂಟು ತಿಂಗಳವರೆಗೆ ಸಾಕಾಗುವಷ್ಟು ಹುಟ್ಟುವಳಿ ಬರುತ್ತದೆ. ಅದಕ್ಕಾಗಿ ನಾವು ಭೂಸುಧಾರಣೆಯನ್ನು ಅವಶ್ಯವಾಗಿ ಮಾಡಬೇಕು ಎಂದು ನನ್ನ ವಿನಂತಿ. ಈಗ ಒಂದು ಕಾನೂನನ್ನು ಮಾಡಿ ಆಮೇಲೆ ಅಮೆಂಡ್‌ಮೆಂಟ್ ಮಾಡಿಕೊಳ್ಳಬಹುದು. ಈ ಬಿಲ್ಲನ್ನು ಕೆಲವು ಮಂದಿ ವಿರೋಧ ಮಾಡುತ್ತಿದ್ದಾರೆ. ಇದು ಬಹಳ ಕೆಡುಕು ಎನಿಸುತ್ತದೆ. ಅವರು ಗೊತ್ತಿಲ್ಲದೆ ಮಾಡುತ್ತಾರೆ ಎಂದು ತಿಳಿದು ಕೊಂಡಿದ್ದೇನೆ. ಮುಂಬಯಿ ಅಸೆಂಬ್ಲಿಯೊಳಗೆ ಇದೇ ರೀತಿ ಈ ಟೆನೆನ್ಸಿ ಬಿಲ್ಲು ತರಲೇ ಬೇಕು ಎಂದು ಕೆಲವು ಮಂದಿ, ತರುವುದು ಬೇಡ ಎಂದು ಕೆಲವು ಮಂದಿ ಹೇಳುತ್ತಿದ್ದರು. ಜಮಖಂಡಿ ಸಂಸ್ಥಾನದಲ್ಲಿ ಈ ಕಾನೂನು ಜಾರಿಗೆ ಬಂದಮೇಲೆ ಅಲ್ಲಿಯ ರೈತರಿಗೆ ಈ ಖಾಯಿದೆಯಿಂದ ಬಹಳ ಅನುಕೂಲವಾಯಿತು. ಆದ್ದರಿಂದ ಇಲ್ಲಿ ವಿರೋಧ ಮಾಡುತ್ತಿರುವುದು ತಪ್ಪಲ್ಲ. ಇನ್ನು ಕೆಲವು ದಿವಸಗಳೊಳಗೆ ಈ ಬಿಲ್ಲು ಮಾಡುವುದು ಚೆನ್ನಾಗಿದೆ ಎಂದು ಅವರಿಗೇ ಗೊತ್ತಾಗುತ್ತದೆ ಅರ್ಥವಾಗುತ್ತದೆ. ಈ ಬಿಲ್ಲನ್ನು ಅವಶ್ಯವಾಗಿ ಮಾಡಬೇಕು. ಅದನ್ನು ಮಾಡುವ ಹೊತ್ತಿಗೆ ಸ್ವಲ್ಪ ಬದಲಾವಣೆ ಮಾಡಬೇಕು ಎಂದು ನನ್ನ ಅಭಿಪ್ರಾಯ ಇದೆ. ಒಂದು ಕುಟುಂಬಕ್ಕೆ 1,200 ರೂಪಾಯಿ ನಿಗದಿ ಮಾಡಬೇಕೆಂದಿದೆ. ಈಗ ಕುಟುಂಬದಲ್ಲಿ 5-10-50 ಜನ ಇದ್ದರೂ ಎರಡುಪಟ್ಟು ಅಷ್ಟೇ ಇರಬೇಕೆಂದಿದೆ. ಒಂದು ಕುಟುಂಬದಲ್ಲಿ 34 ಜನರಿದ್ದರೆ ಅವರಿಗೆ ಈಗ ನಿಗದಿ ಮಾಡಿರುವ ಪ್ರಮಾಣದ ಎರಡು ಮೂರು ಪಟ್ಟು ಕೊಡಬೇಕೆಂದು ಹೇಳಬಯಸುತ್ತೇನೆ. ಈಗ ಜಮೀನುದಾರರಿಗೆ ಜಮೀನಿನ ಬೆಲೆಯನ್ನು ಬಾಂಡ್ ರೂಪದಲ್ಲಿ ಕೊಡಬೇಕೆಂದಿದೆ. ಅದನ್ನೂ 15 ವರ್ಷಗಳ ಕಂತುಗಳ ಮೂಲಕ ಕೊಡಬಹುದು, ಎಂದಿದೆ. ಒಬ್ಬನಿಗೆ ಎರಡು ಎಕರೆ ಹೊಲ ಇದ್ದು ಅದರ ಬೆಲೆ 500 ರೂಪಾಯಿಗಳಿದ್ದರೆ ಆ ಹಣವನ್ನು 15 ಕಂತುಗಳಲ್ಲಿ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಸರ್ಕಾರದವರೇ ಜಮೀನ್ದಾರರಿಗೆ ಹಾರ್ಡ್‌ಕ್ಯಾಷ್ ಕೊಡಬೇಕೆಂದು ನನ್ನ ಅಭಿಪ್ರಾಯ ಇದೆ. ಈ ಪ್ರಕಾರ ಕೇಂದ್ರ ಲ್ಯಾಂಡ್ ಪಾಲಿಸಿಯನ್ನು ಮತ್ತು ವಿನೋಬಭಾವೆಯವರ ಹೇಳಿಕೆಯನ್ನು ಲಕ್ಷ್ಯದಲ್ಲಿಟ್ಟು ಕೂಡಲೇ ಟೆನೆನ್ಸಿ ಬಿಲ್ಲನ್ನು ಜಾರಿಗೆ ತರಬೇಕು. ಮನುಷ್ಯನಿಗೆ ಗಾಳಿ, ಬೆಳಕು ಇದ್ದಹಾಗೆ ಭೂಮಿಯೂ ಆವಶ್ಯಕ. ಕೆಲವರು ಭೂಮಿಗೆ ಕಾಯಿದೆಯನ್ನು ಏತಕ್ಕೆ ತಂದರು ಎಂದು ಕೇಳುತ್ತಾರೆ. ಪಟ್ಟಣದೊಳಗೆ ಬೇಕಾದಷ್ಟು ಬಿಲ್ಡಿಂಗ್ಸ್ ಇರುವವರು ಇದ್ದಾರೆ. ಗಿರಣಿ ಮಾಲೀಕರು ಇದ್ದಾರೆ. ಅವರಿಗೆ ಅಪ್ರತ್ಯಕ್ಷ ತೆರಿಗೆ ಬೇಕಾದಷ್ಟು ಹಾಕಿದ್ದಾರೆ. ವ್ಯಾಪಾರ ತೆರಿಗೆ ಮುಂತಾಗಿ ಬೇಕಾದಷ್ಟು ತೆರಿಗೆ ಇದೆ. ಈಗ ಜಮೀನು ಹೋಗುವ ಕಾಲ ಬಂದಿದೆ. ಎಲ್ಲವನ್ನು ಸರಿಸಮನಾಗಿ ಒಂದೇಸಲ ಮಾಡಲು ಸಾಧ್ಯವಿಲ್ಲ. ಅದನ್ನು ಲಕ್ಷ್ಯದಲ್ಲಿಡಬೇಕು. ಈಗ ಭೂ ಸುಧಾರಣೆ ಆಗಬೇಕಾದರೆ ಕೆಲವು ದಿವಸ ಬಹಳ ಕಷ್ಟ ಅನುಭವಿಸಬೇಕಾಗುತ್ತದೆ. ಅದಿಲ್ಲದೆ ಒಂದು ಸುಧಾರಣೆ ಆಗಬೇಕು ಎಂದರೆ ಸಾಧ್ಯವಿಲ್ಲ. ತ್ಯಾಗ ಮಾಡಿದರೆ ಹೆಚ್ಚು ಸೌಕರ್ಯ ಸಿಕ್ಕುತ್ತದೆ. ಹಾಗೆ ಮಾಡದಿದ್ದರೆ ಇದು ಆಗುವುದಿಲ್ಲ. ಆದ್ದರಿಂದ ತ್ಯಾಗ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಬಿ. ಪದಕಿ (ಪರಸಗಡ).—ಸ್ವಾಮಿ, 1957-58 ನೆಯ ಬಜೆಟ್ಟಿನ ಅಂಕಿ ಸಂಖ್ಯೆಗಳನ್ನು ವಿರೋಧಿಸುತ್ತಾ ನಾನು ಕೆಲವು ವಿಷಯಗಳಬಗ್ಗೆ ಮಾತನಾಡಬಯಸುತ್ತೇನೆ. ನಾನು ಈ ಎಲೆಕ್ಷನ್‌ನಲ್ಲಿ ನಿಲ್ಲಬೇಕಾದರೂ ಕೂಡ ಕಾಂಗ್ರೆಸ್‌ನವರ ಕೆಲವರ ಉಪಟಳತನವೇ ನಿಲ್ಲುವ ಪ್ರವೃತ್ತಿ ಕೊಟ್ಟಿತು.

ಶ್ರೀ ವಿ. ವೆಂಕಟಪ್ಪ (ವಿದ್ಯಾ ಇಲಾಖೆಯ ಮಂತ್ರಿಗಳು).—ಇವರು ಮುಟ್ಠಾಳತನ ಎಂದು ಹೇಳುತ್ತಾರೆ ಅದು ಅನ್ ಪಾರ್ಲಿಮೆಂಟರಿ.

ಉ ಪಾ ಧ್ಯ ಕ್ಷ ರು.—ಆ ತರಹ ಉಪಯೋಗಿಸಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಉಪಟಳ is not unparliamentary. What he said is not "ಮುಟ್ಠಾಳತನ".

ಶ್ರೀ ಎಸ್. ಬಿ. ಪದಕಿ.—ನನಗೆ ಅಂಗ್ರೇಜಿ ಬರುವುದಿಲ್ಲ.

SRI C. J. MUCKANNAPPA.—He has not said 'muttalathana'. He said "ಕಾಂಗ್ರೆಸ್ಸಿನವರ ಉಪಟಳತನ"

ಉಪಾಧ್ಯಕ್ಷರು.—ಉಪಟಳ ಅನ್‌ಪಾರ್ಲಿಮೆಂಟರಿಯಲ್ಲ.

ಶ್ರೀ ಎಸ್. ಬಿ. ಪದಕಿ.—ನಾನು ರೈತರವತಿಯಿಂದ ನಿಂತು ಚುನಾವಣೆಯಲ್ಲಿ ಆರಿಸಿ ಬಂದವನು. ನಾನು ಅಂಗ್ರೇಜಿ ಕಲಿತವನಲ್ಲ. ಕರ್ಣಾಟಕದೊಳಗೆ ನನ್ನಂಥ ವ್ಯಕ್ತಿ ಈ ಜಾಗಕ್ಕೆ ಯೋಗ್ಯನಲ್ಲ ಎಂದು ನನ್ನ ಆತ್ಮ ಹೇಳುತ್ತದೆ. ಅದೂಕೂಡ ಕೆಲವು ಜನರು ವಿದ್ವಾಂಸರಿದ್ದು ತಿಳಿದವರಿದ್ದೂ ಸಹ ಈ ರೀತಿ ಆದುದು ವಿಷಾದ ಎನಿಸುತ್ತದೆ. ಏಕೆಂದರೆ ಕಲಿತವರು, ತಿಳಿದವರು, ಹಿರಿಯರು, ಬಹಳ ತಜ್ಞರು, ವಿದ್ವಾಂಸರು ಎಲ್ಲರೂ ಚುನಾವಣೆಗೆ ನಿಂತಿದ್ದು, ಅವರ ಜೊತೆಗೆ ಅಜ್ಞಾನಿಯಾದ ನಾನೂ ಸಹ ಸ್ಪರ್ಧಿಸಿದ ಸಂದರ್ಭದಲ್ಲಿ ಜನ ನನ್ನಮೇಲೆ ಪ್ರೀತಿ ವಿಶ್ವಾಸ ಇಟ್ಟು ನನ್ನನ್ನು ಚುನಾವಣೆ ಮಾಡಿದರು. ಅಂಥ ಜನರ ಕಲ್ಯಾಣ ಆದೀತು ಎನ್ನುವ ಭಾವನೆ ನನಗಂತೂ ಅಷ್ಟಾಗಿ ಇಲ್ಲ. ನಾನು ಇದನ್ನು ಹೇಳದೆ ವಿಧಿಯಿಲ್ಲ. ಏಕೆಂದರೆ ವಿದ್ವಾಂಸರು, ತಿಳಿದವರು, ಮಹಾನ್ ಮಹಾನ್ ವ್ಯಕ್ತಿಗಳು ಬಂದು ನನ್ನ ವಿರುದ್ಧ ಚುನಾವಣೆಗೆ ನಿಂತು ಬೇಕಾದಷ್ಟು ಪ್ರಯತ್ನ ಮಾಡಿದರೂ ಕೂಡ ಜನತೆ ನನಗೆ ಬೆಂಬಲ ಕೊಟ್ಟಿದ್ದು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಅಂತಹ ಸಂಗತಿ ಇದೆ. ಅದರ ಬಗ್ಗೆ ಹೆಚ್ಚು ಹೇಳಲಿಕ್ಕೆ ನಾನು ತಯಾರಿಲ್ಲ.

ರೈತರಿಗೆ ಆಗತಕ್ಕ ಅನಾನುಕೂಲಗಳು, ಅಡಚಣೆ ಗಳು ಏನಿವೆ ಅವುಗಳ ಬಗ್ಗೆ ಕೆಲವು ಮಾತು ಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ಮೊದಲನೆಯದಾಗಿ ಪೊಲೀಸ್ ಖಾತೆಯವರು ರೈತ ರಿಗೆ ಮಾಡತಕ್ಕ ಅನ್ಯಾಯಗಳ ಬಗ್ಗೆ ಕೆಲವು ಮಾತು ಗಳನ್ನು ಆಡುತ್ತೇನೆ. ರೈತ ಹೊಲದಲ್ಲಿ ತನ್ನ ಬಿತ್ತನೆ ಅಂಗಳದಲ್ಲಿ ಬಿತ್ತನೆ ಮಾಡುತ್ತಾ ಇರುತ್ತಾನೆ. ಅವನು ತನ್ನ ಬಡತನದ ಬೇಗೆಯಲ್ಲಿ ತನ್ನ ಕೆಲಸ ಕಾರ್ಯಗಳನ್ನು ಯಾವ ರೀತಿ ಮಾಡಿಕೊಳ್ಳಬೇಕೆಂಬು ದರಲ್ಲೇ ತನ್ಮಯನಾಗಿರುತ್ತಾನೆ. ಯಥಾ ರಾಜ ತಥಾ ಪ್ರಜಾ ಎನ್ನುವ ಹಾಗೆ ಸರ್ಕಾರ ಯಾವರೀತಿ ಇದ್ದರೆ ಪ್ರಜೆಗಳು ಆ ರೀತಿ ಇರುತ್ತಾರೆ. ಆದ್ದರಿಂದ ಆಹಾರ ಉತ್ಪನ್ನ ಮಾಡುವ ಹೊರೆಯನ್ನು ಅವನು ಹೊತ್ತಿರು ವುದರಿಂದ ಸರ್ಕಾರದವರು ಲಕ್ಷ್ಯಕೊಟ್ಟು ಮಾನ್ಯ ಮಿತ್ರರು ಹೇಳಿದ ಹಾಗೆ ಭೂಸುಧಾರಣೆ ಮಾಡಲೇ ಬೇಕಾಗುತ್ತದೆ. ನಿಮ್ಮ ಕೃತಿ, ನಿಮ್ಮ ನೀತಿ, ನಿಮ್ಮ ನಡವಳಿಕೆ ಇವುಗಳಮೇಲೆ ಪ್ರತಿಯೊಂದೂ ಕೂಡ ನಡೆಯಬೇಕಾಗಿದೆ. ಈಗಿನ ಪರಿಸ್ಥಿತಿಯಲ್ಲಿ ತಮ್ಮ ನೀತಿಯ ಪ್ರಕಾರ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಸ್ಥಾಪನೆ ಮಾಡಬೇಕಾದ ಅವಶ್ಯಕತೆಯಿ ರುತ್ತದೆ. ಹಾಗಿದ್ದೂ ಕೂಡ ಈಗ ನಡೆಯುತ್ತಿರುವ ನಡವಳಿಕೆಗಳನ್ನು ನೋಡಿದರೆ ಬಹಳ ಸೋಜಿಗವಾ ಗಿದೆ. ಹೊಲದಲ್ಲಿ ಪೈರು ಕಟಾವಾಗಿರುತ್ತದೆ, ರೈತ ಮೂರುಹೊತ್ತೂ ಹೊಲದಲ್ಲೇ ಇರಬೇಕಾಗುತ್ತದೆ. ಅಂಥ ಸಮಯದಲ್ಲಿ ಈ ಪೋಲೀಸಿನವರು ಯಾವನ ಕಡೆಯಿಂದಲೋ ಒಂದು ಷರಾಬು ಬಾಟಲಿಯನ್ನು ಅವನ ಹೊಲದಲ್ಲಿ ಅವನಿರುವ ಕಡೆ ಇಡಿಸುತ್ತಾರೆ. ಹೀಗೆ ಇಡಿಸಿ ಅವನನ್ನು ಹುಡುಕಿಕೊಂಡು ಬಂದು ಅವನನ್ನು ಅರೆಸ್ಟ್ ಮಾಡುತ್ತಾರೆ. ವಿಚಾರ ಮಾಡು ವುದಿಲ್ಲ; ಅವನ ಮನೆಗೆ, ಬಾಗಿಲಿಗೆ ಬೀಗ ಹಾಕು ವುದಕ್ಕೂ ಕೂಡ ಅವಕಾಶ ಕೊಡುವುದಿಲ್ಲ, ಪೋಲೀಸ್ ಸ್ಟೇಷನ್ನಿಗೆ ಎಳೆದುಕೊಂಡು ಹೋಗುತ್ತಾರೆ. ಷರಾಬು ಕುಡಿದಿದ್ದಾನೆ ಎಂದು ಹೇಳಿ ಎರಡು ಮೂರು ದಿವಸ ವಿನಾಕಾರಣ ಪೋಲೀಸ್ ಸ್ಟೇಷನ್ನಲ್ಲಿಟ್ಟು ಕೊಂಡು, ಊಟ, ಚಹ ಒಂದೂ ಸಹ ಕೊಡದೇ ಮೂಕಪ್ರಾಣಿಯಂತೆ ಅವನನ್ನು ಗಾಳಿ, ಬೆಳಕು ಇಲ್ಲದ ಕೋಣೆಗೆ ನೂಕಿ ಬಾಗಿಲು ಹಾಕಿ,ನಾಲ್ಕು ಐದು ದಿವಸ ಕಾಡಿಸುತ್ತಾರೆ. ಅಲ್ಲೇ ಕೆಲವು ಜನ ಇರು ತ್ತಾರೆ. ಅವರು ಇವನಿಗೆ ಏಕೆ ಇಷ್ಟು ಕಷ್ಟ ಪಡುತ್ತೀ 50 ರೂಪಾಯಿ ಕೊಟ್ಟು ಬಿಡು ನಿನ್ನನ್ನು ಬಿಡಿಸುತ್ತೇವೆ ಎಂದು ಹೇಳುತ್ತಾರೆ. ಅವನ ಹತ್ತಿರ ರೊಕ್ಕ ಇಲ್ಲ ಎಂದರೂ ಸಹ ಕೇಳುವುದಿಲ್ಲ. ಈರೀತಿ ಎಷ್ಟೋ ಅಡಚಣೆಗಳು ಆಗುತ್ತವೆ. ನೂರಾರು ರೂಪಾಯಿ ಅವನು ಎಲ್ಲಿಂದ ತರಬೇಕು? ಮಾಮೂಲು ಕೇಳುತ್ತಾರೆ. ಯಾರಾದರೂ ಕೇಳಿದರೆ ಚಹದ ಅಂಗಡಿಯಲ್ಲೂ ಸಹ ಇದೇ ರೀತಿ ಹೇಳುತ್ತಾರೆ. ನಮ್ಮ ಸಾಹೇಬರಿಗೆ ಅಲ್ಲದಿದ್ದರೆ ಸರ್ಕಾರದವರಿಗೂ ಸಹ ಬೇಕಾದರೆ ಹಿಸ್ಸೆ ಕೊಡುತ್ತೇವೆ ನಮಗೇನೂ ಅದರ ಭಯ ಇಲ್ಲ ಎಂದು ಅವರು ಸ್ಪಷ್ಟವಾಗಿ ಹೇಳುತ್ತಾರೆ. ಕುಡಿದ ಅಮಲಿನಲ್ಲಿದ್ದಾಗ ಅವರೇ ಈ ರೀತಿ ಹೇಳುವು ದನ್ನು ನಾನು ಕೇಳಿದ್ದೇನೆ. ಇದರ ಬಗ್ಗೆ ತೀವ್ರವಾಗಿ ವ್ಯವಸ್ಥೆಮಾಡಬೇಕು. ಈಗ ನಮ್ಮ ದೇಶದಲ್ಲಿ ಪೋಲೀಸಿನವರನ್ನು ಕಂಡರೆ ಜನರಲ್ಲಿ ಭಯಮೂಡು ವಂಥ ಪರಿಸ್ಥಿತಿ ಇದೆ. ಮೊದಲು ಪೋಲೀಸಿನವರು ಬಂದರೆ ನಮ್ಮ ರಕ್ಷಣೆ ಆಗುತ್ತದೆ ಎನ್ನುವಂಥ ಪರಿ ಸ್ಥಿತಿ ಇತ್ತು. ಆದ್ದರಿಂದ ಈ ಬಗ್ಗೆ ಜನರಲ್ಲಿರತಕ್ಕ ಹೆದರಿಕೆಯ ಮನೋಭಾವವನ್ನು ಹೋಗಲಾಡಿಸಲು ಸರ್ಕಾರದವರು ಸಾಕಾದಷ್ಟು ಪ್ರಚಾರಕಾರ್ಯ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಎರಡನೆಯದು ಈ ಪೋಲೀಸ್ ಖಾತೆಯೊಳಗೆ ಇನ್ನೂ ಹೆಚ್ಚಿನದು ಹೇಳುವಂಥಾದ್ದು ಎಂದರೆ 200 ರೂಪಾಯಿ ಕೊಟ್ಟರೆ ಯಾವನನ್ನಾದರೂ ಖೂನಿಮಾಡಿ ಅರಗಿಸಿಕೊಳ್ಳಬಹುದು, 500 ರೂಪಾಯಿ ಕೊಟ್ಟರೆ ಬೇಕಾದ ಸಾವುಕಾರರನ್ನು ಖೂನಿಮಾಡಿ ಅರಗಿಸಿ ಕೊಳ್ಳಬಹುದು. ಇದೇ ರೀತಿ ಬರಬರುತ್ತಾ ಐದುಸಾವಿರ ರೂಪಾಯಿ ಕೊಟ್ಟರೆ ಮಂತ್ರಿಗಳನ್ನೂ ಕೂಡ ಖೂನಿ ಮಾಡಿ ಅರಗಿಸಿಕೊಳ್ಳಬಹುದು ಎನ್ನುವ ಕಾಲ ಎಲ್ಲಿ ಬರುತ್ತದೆಯೋ ಎಂದು ನನಗೆ ಅನಿಸುತ್ತದೆ. ನಮ್ಮ ತಾಲ್ಲೂಕಿನಲ್ಲಿ ಈ ವರ್ಷ ಇದೇ ತಿಂಗಳೊಳಗೆ ಒಂದು ಖೂನಿ ಆಗಿದೆ. ಇವತ್ತಿನವರೆಗೂ ಒಬ್ಬನನ್ನು ಕೂಡ ಹಿಡಿಯಲು ಪೋಲೀಸ್‌ನವರಿಂದ ಆಗಿಲ್ಲ. ಆದ್ದರಿಂದ ನಮಗೆ ಇವತ್ತಿನ ದಿವಸ ರಕ್ಷಣೆ ಕೊಡುವುದಿದ್ದರೆ, ರಕ್ಷಣೆ ಕೊಡುತ್ತೇವೆ ಎಂಬ ಆಶ್ವಾಸನ ಕೊಡಿ.

4-30 P.M.

ಎರಡನೆಯದಾಗಿ ನಮ್ಮ ರೈತರಿಗಾಗುತ್ತಿರುವ ಅನ್ಯಾಯಗಳ ಬಗ್ಗೆ ಕೆಲವು ವಿವರಗಳನ್ನು ಹೇಳು ತ್ತೇನೆ. ಬಹುತೇಕ ನಮ್ಮ ಹಳ್ಳಿಗಳಲ್ಲಿ ರೈತರು ಅಲ್ಲಿರುವ ಕಂಟ್ರಾಕ್ಟರುಗಳನ್ನು ನಂಬಿಕೊಂಡು ಕೆಲಸ ಮಾಡುತ್ತಿರುತ್ತಾರೆ, ಮತ್ತು ಊರಿನಲ್ಲಿರುವ ಗೌಡ, ಕುಲಕರ್ಣಿಗಳನ್ನು ನಂಬಿಕೊಂಡು ಕೆಲಸ ಮಾಡು ತ್ತಿರುತ್ತಾರೆ. ಏಕೆಂದರೆ ಇವರೆಲ್ಲ ಬಹುತೇಕ ತಿಳಿ ಯದೇ ಇರುವ ಬಡ ರೈತರಾದುದರಿಂದ ಇವರನ್ನು ಆ ಊರಿನ ಪುಡಾರಿಗಳು ಎಂದೆನಿಸಿಕೊಳ್ಳುವವರು ದುರುಪಯೋಗಪಡಿಸಿಕೊಂಡು ಈ ರೈತರುಗಳಿಗೆ ತೊಂದರೆಯನ್ನು ಕೊಡುತ್ತಿರುತ್ತಾರೆ. ಹೀಗೆ ಮಾಡು ವುದರಲ್ಲಿ ಏನೂ ಅರ್ಥವಿಲ್ಲ. ಅಲ್ಲದೆ ಈ ಕಂಟ್ರಾಕ್ಟರು ಗಳು ಸರಕಾರಕ್ಕಾಗಿ ಕೆಲವು ಮನೆಗಳನ್ನು ಕಟ್ಟಲು ಸುಣ್ಣ, ಇಟ್ಟಿಗೆ, ಮಣ್ಣು ಮುಂತಾದ ಸಾಮಾನು ಗಳಿಗಾಗಿ ಬೇಕಾದಷ್ಟು ಹಣವನ್ನು ಪಡೆದಿರು ತ್ತಾರೆ. ಈ ಕಂಟ್ರಾಕ್ಟರುಗಳು ಮನೆಗಳನ್ನು ಕಟ್ಟಿಸುತ್ತಾರೆ. ಆದರೆ ಇಂತಹ ಕಟ್ಟಿದ ಮನೆಗಳು ಒಂದೆರಡು ವರ್ಷಗಳೊಳಗಾಗಿ ದುರಸ್ತು ಆಗಬೇಕಾ ಗುತ್ತದೆ. ಹಾಗೆ ಈಗಲೂ ಸಹ ಮಾಡಿಲ್ಲ. ಇಂತಹ ಮನೆಗಳನ್ನು ಈಗಲಾದರೂ ದುರಸ್ತು ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮೂರನೆಯದಾಗಿ ಸರಕಾರದವರು ನಮ್ಮ ಕಡೆ ಗಳಲ್ಲಿ ತಕಾವಿ ಸಾಲಗಳನ್ನು ಕೊಡುತ್ತಿದ್ದಾರೆ. ಆ ಸಾಲಗಳನ್ನು ಕೊಡುವುದಕ್ಕೆ ಆಯಾ ತಾಲ್ಲೂಕಿನ ಅಮಲ್ದಾರರುಗಳನ್ನು ನೇಮಿಸಿದ್ದಾರೆ. ಇದರಲ್ಲಿ ಇವರನ್ನು ಅನುಸರಿಸಿಕೊಂಡು ಹೋಗುವವರಿಗೇ ಸಾಲ ದೊರೆಯುತ್ತಿರುವುದೇ ವಿನಾ ಬಡ ರೈತರಿಗೆ ಏನೂ ಉಪಯೋಗವಾಗುತ್ತಿಲ್ಲ. ಈಗಾಗಲೇ ಎಷ್ಟೋ ಕಡೆ ಬೇಕಾದಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದಾರೆ. ಪರಂತು ಈ ಹಣ ಇನ್ನೂ ವಾಪಸಾಗಿಲ್ಲ. ಸಾಲವನ್ನೇನೋ ತೆಗೆದುಕೊಂಡಿರುತ್ತಾರೆ. ಅದರಲ್ಲಿ ಕೆಲವರು ಆ ಊರಿನ ಗೌಡ ಕುಲಕರ್ಣಿಗಳನ್ನು ಅನು ಸರಿಸಿಕೊಂಡು ಹೋಗುತ್ತಿರುವುದರಿಂದ ಅವರಿಗೇ ಸಾಲಗಳು ಹೆಚ್ಚಾಗಿ ದೊರೆಯುತ್ತವೆ ಮತ್ತು ಬಡ ರೈತರಿಗೆ ಸಾಕಷ್ಟು ಸಾಲಗಳು ಸಿಕ್ಕುತ್ತಿಲ್ಲ. ಅಲ್ಲದೆ ಒಂದು ಸಾರಿ ಸಾಲ ಕೊಟ್ಟಿರುವುದನ್ನು ಪುನಃ ಇನ್ನೊಂದು ಸಾರಿ ಕೊಡುವಾಗ ಹಿಂದಿನ ಸಾಲವನ್ನು ಪೂರ್ತಿಯಾಗಿ ಮುಗಿಸದೇ ಇದ್ದರೂ ಕೂಡ ಸಾಲಗಳು ಸಿಕ್ಕುತ್ತಿವೆ. ಹಾಗೆ ದೊರೆತ ಸಾಲದ ಹಣವೂ ಕೂಡ ಸರಿಯಾಗಿ ಉಪಯೋಗವಾಗದೆ ಇರುವುದೂ ಉಂಟು.

(ಶ್ರೀ ಎಸ್. ಬಿ. ಪದಕಿ)

ಅದಕ್ಕಾಗಿ ಆಯಾ ಊರಿನಲ್ಲಿರುವ ಗೌಡ ಕುಲಕರ್ಣಿಗಳು ಹೀಗೆ ಸಾಲ ಕೊಟ್ಟಿರುವವರ ಪಟ್ಟಿಯನ್ನು ಮಾಡಿ ಸರಕಾರಕ್ಕೆ ಬರಬೇಕಾದ ಸಾಲಗಳನ್ನು ವಸೂಲು ಮಾಡಬೇಕು. ಆದರೆ ಹೀಗೆ ವಸೂಲು ಮಾಡಬೇಕಾದ ಸಂದರ್ಭಗಳಲ್ಲಿ ನಮ್ಮ ಕಡೆಯ ದುಷ್ಕಾಲದ ಪರಿಸ್ಥಿತಿಯಿಂದ ಸಾಧ್ಯವಾಗಿಲ್ಲ. ಇದರಿಂದಾಗಿ ಅಲ್ಲಿ ಹೆಚ್ಚು ಬೆಳೆಯನ್ನು ಬೆಳಸಲಾಗಲಿಲ್ಲ ಹೀಗೆ ದುಷ್ಕಾಲವಾಗಿರುವ ಪ್ರದೇಶದಲ್ಲಿ ಸರಕಾರದವರು ಈ ಕಂದಾಯವನ್ನು ಕೆಲವು ಕಡೆಗಳಲ್ಲಿ ವಸೂಲು ಮಾಡಕೂಡದೆಂದು ಇದ್ದರೂ ವಸೂಲು ಮಾಡುತ್ತಿದ್ದಾರೆ. ಹಾಗೆ ವಸೂಲಾಗದಿದ್ದರೆ ಅಲ್ಲಿರುವ ಮಾಮಲತದಾರರು ನೋಟಿಸು ಕೊಟ್ಟು ಕಂದಾಯವನ್ನು ವಸೂಲು ಮಾಡಲು ಹೊರಡುತ್ತಾರೆ. ಹಾಗೆ ವಸೂಲಾಗದಿದ್ದರೆ ಆತನಲ್ಲಿರುವ ಆಸ್ತಿಗಳನ್ನು ಲಿಲಾವು ಮಾಡಬೇಕೆಂದು ಹೇಳುತ್ತಾರೆ. ಇದರ ಬಗ್ಗೆ ಬಡ ರೈತರಿಗೆ ಸಾಕಷ್ಟು ಸೌಲಭ್ಯಗಳನ್ನು ಕೊಡಬೇಕು. ಹಾಗೆ ಕೊಡಲಿಕ್ಕೆ ಸರಕಾರ ಪ್ರಯತ್ನ ಮಾಡಬೇಕು ಮತ್ತು ಇದರಿಂದ ರೈತರಿಗೆ ಸಾಕಷ್ಟು ಅನುಕೂಲಗಳು ದೊರೆಯುತ್ತವೆ. ಅಲ್ಲದೆ ಈಗ ರೈತನಿಗೆ 1,200 ರೂಪಾಯಿಗಳು ಸಾಕೆಂದು ಮಾಡಿದ್ದಾರೆ. ಆದರೆ ನಮ್ಮ ಮಂತ್ರಿಗಳಿಗೆ ಮಾಹೆಯಾನ 1,200 ರೂಪಾಯಿಗಳನ್ನು ಕೊಡುತ್ತಿದ್ದರೂ ಅದೂ ಸಾಲದಾಗಿದೆ. ಇದನ್ನು ತಾವು ವಿಚಾರಮಾಡಬೇಕು. ಅಲ್ಲದೆ ಇಂತಹ ದೊಡ್ಡ ಹುದ್ದೆಯಲ್ಲಿರುವ ಮಂತ್ರಿಗಳಿಗೆ ಸೌಲಭ್ಯಗಳು ದೊರಕಬೇಕು ಮತ್ತು ಇಂತಹ ಇತರ ದೊಡ್ಡ ಮನುಷ್ಯರುಗಳಿಗೆ ಅನುಕೂಲವಾಗಬೇಕು, ಇವರು ಪ್ರತಿಯೊಬ್ಬರೂ ದಿನವೊಂದಕ್ಕೆ ಹತ್ತು ರೂಪಾಯಿಗಳಷ್ಟು ಸಿಗರೇಟು ಮತ್ತು ಇತರ ವೆಚ್ಚಗಳಿಗಾಗಿ ಖರ್ಚುಮಾಡಬಹುದು ಮತ್ತು ಇದಕ್ಕಾಗಿ ಹೆಚ್ಚಿನ ಪಗಾರ, ಆದರೆ ರೈತನಾದವನಿಗೆ ಬಹಳ ಕಡಮೆಯಾಗಿದ್ದರೂ ಪರವಾಗಿಲ್ಲ. ಏಕೆಂದರೆ ರೈತ ಬರೀ ಬಣ ಬಕ್ರಿ ತಿಂದು ಜೀವಿಸುವವನು ಎನ್ನುವ ಭಾವನೆಯಿದೆ. ಇವನ್ನೆಲ್ಲ ವಿಚಾರಮಾಡಬೇಕು. ಇವನ್ನೆಲ್ಲ ವಿಚಾರ ಮಾಡಿ ಎಲ್ಲರೂ ಸಮಾನತೆಯಿಂದ ಜೀವನ ನಡೆಸುವುದಕ್ಕೆ ಅನುಕೂಲ ಮಾಡಿಕೊಡಬೇಕು. ಇದರಿಂದ ದೇಶದ ಜನಗಳಿಗೂ ಅನುಕೂಲವಾಗುತ್ತದೆ. ಈಗ ಕಾಂಗ್ರೆಸ್ಸು ಸರಕಾರ ಈ ಕೆಲಸ ಮಾಡುತ್ತಿಲ್ಲ ಎಂದು ಹೇಳುವುದು ಮುಖ್ಯವಲ್ಲ. ಯಾವ ಪಾರ್ಟಿ ಸರಕಾರವೇ ಆಗಲಿ, ಕಾಂಗ್ರೆಸ್ಸು ಸರಕಾರವೇ ಆಗಲಿ, ಕಮ್ಯುನಿಸ್ಟು ಸರಕಾರವಾಗಲಿ ಅದೇನೂ ಮುಖ್ಯವಲ್ಲ. ಪ್ರಜೆಗಳಿಗೆ ಅನುಕೂಲವಾಗುವಂತೆ ಮಾಡುವುದು ಮುಖ್ಯ. ಅದರಂತೆ ಈಗ ಮಾಡುತ್ತಿಲ್ಲ.

ಇನ್ನು ಶೇತಗಿ ಸೊಸೈಟಿಗಳ ವಿಚಾರವಾಗಿ ಹೇಳಬೇಕಾಗಿದೆ. ನಮ್ಮಲ್ಲಿ ಈ ಸೊಸೈಟಿಗಳು ಸಾಕಷ್ಟಿವೆ. ಆದರೆ ಇದರಲ್ಲಿ ಒಳಹೊಕ್ಕು ನೋಡಿದರೆ ಎಷ್ಟೋ ಕಡೆಗಳಲ್ಲಿ ಬಹಳವಾದ ರೊಕ್ಕ ನಾಶವಾಗುತ್ತಿದೆ. ಇಂತಹ ಸೊಸೈಟಿಗಳಲ್ಲೇ ಪ್ರತಿನಿಧಿಯಾಗಿ, ಮೆಂಬರಾಗಿ ಎಷ್ಟೋ ಜನಗಳಿಗೆ ಅನುಕೂಲವೇನೋ ಸಿಕ್ಕುತ್ತದೆ. ಆದರೆ ಹೀಗೆ ಜನುಕೂಲಗಳು ಸಿಕ್ಕಬೇಕಾದರೆ ಅಲ್ಲಿರುವ ಜನಗಳು ಈ ಸೊಸೈಟಿಗಳಲ್ಲಿರುವವರನ್ನು ಅನುಸರಿಸಿಕೊಂಡಿರಬೇಕಾಗಿದೆ, ಏಕೆಂದರೆ, ಅವರೇ ಈ ಸೊಸೈಟಿಗಳಲ್ಲಿ ಚೇರ್ಮನ್ನರಾಗಿರುತ್ತಾರೆ. ಇದರಿಂದಾಗಿ ಎಷ್ಟೋ ಕಡೆಗಳಲ್ಲಿ ಸಾಲವಾಗಿ ಕೊಟ್ಟಿರತಕ್ಕ ಹಣ ವಸೂಲಾಗದೆ ಬಾಕಿಯಾಗಿ ನಿಂತಿವೆ. ಆದರೆ ಕೆಲವು ಕಡೆ ಬಹಳ ಚೆನ್ನಾಗಿ ಕೆಲಸ ಮಾಡುವ ಸೊಸೈಟಿಗಳೂ ಇವೆ. ನಮ್ಮಲ್ಲಿ ಹೀಗಿರುವ ಒಂದು ಸೊಸೈಟಿ ಇದೆ. ಅದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ನಾನು ಅದರ ಮೆಂಬರೇನೂ ಆಗಿಲ್ಲದಿದ್ದರೂ ಅದರಲ್ಲಿ ಕೆಲಸ ಮಾಡುವ ಅಧಿಕಾರಿಗಳಿಂದ ಈ ಸೊಸೈಟಿಯು ಎಷ್ಟು ಚೊಕ್ಕಟವಾಗಿ ಕೆಲಸ ಮಾಡುತ್ತಿದೆ ಎನ್ನುವುದು ತಿಳಿದುಬಂದಿದೆ. ಆದರೆ ಇನ್ನು ಕೆಲವೆಡೆಗಳಲ್ಲಿ ಬೇಕಾದಷ್ಟು ಹಣಗಳು ವಸೂಲಾಗದೆ ನಷ್ಟವಾಗಹತ್ತಿದೆ ಮತ್ತು ಎಷ್ಟೋ ರಾಡಾಗಿವೆ. ಅದರಿಂದ ನಾನು ಸಲಹೆ ಮಾಡುವುದು, ಇಂತಹ ಸೊಸೈಟಿಗಳಲ್ಲಿ ಮೆಂಬರಾಗಿರುವವರನ್ನು ಆ ಸೊಸೈಟಿಯ ಚೇರ್ಮನ್ನರಾಗಿಯೋ ಅಥವಾ ಇತರ ಅಧಿಕಾರಿಯಾಗಿಯೋ ಮಾಡಬಾರದು. ಬೇರೆಯವರನ್ನು ಇಂತಹ ಹುದ್ದೆಗೆ ನೇಮಿಸಿದರೆ ಬಹುತೇಕ ಜನಕ್ಕೆ ಹೆಚ್ಚಿನ ಅನುಕೂಲ ದೊರೆಯುತ್ತದೆ.

Sri F. W. CORBETT (Nominated).—Mr. Speaker, the Hon'ble Finance Minister has presented a Budget with an income of Rs. 5096.65 lakhs and an expenditure of Rs. 5082.60 leaving a surplus of only Rs. 14.05 lakhs. As private individuals we would not consider this surplus as huge. He has no doubt found it very difficult to find money to meet the growing demands of all the departments and he has done very well. I would however suggest to him with all due respect that he should effect an all-out cut of five per cent in each department. This will give us a surplus of 2½ crores and will obviate any further taxation.

Hon'ble Member Srimathi Nagaratnamma very rightly complained about the working of the Social Welfare Board. There are social service organisations which have been serving the public of the State for more than 50 years. Sufficient financial help has not been given to them. I suggest that a few thousand rupees be allotted to some of our social organisations.

Our hospitals are overcrowded. Patients are sleeping on the floor. Nurses and Doctors are underpaid. I request the Hon'ble Minister for Health to spend a few rupees more and buy some cots for these patients. There is also a growing tendency among doctors in our hospitals to prescribe expensive medicines. If a poor man goes to a private doctor he gives a mixture for six or eight annas but if he goes to a hospital he is given a prescription to fetch some medicine costing Rs. 8 to Rs. 12. This practice among the doctors has to be discouraged. Every day patients are going to Vellore for

treatment. In Bangalore we find doctors who have returned after taking degrees in western countries. Is it not a disgrace that people should go to Vellore for treatment? What is wrong with our hospitals? We have not got equipment which these doctors can make use of with higher knowledge they have acquired abroad. We want better equipment for our hospitals.

Now I will talk about transport. Transport service has deteriorated after it was nationalised. In Bangalore as an Hon'ble Member puts it, transport service is paying handsomely. But there is discrimination. Between City Market and Russel Market 10 buses are plying every hour but between Russel Market and Adgodi only one bus every two hours and between City Market and Ulsoor only one bus for an hour. It is true that we have not got enough buses to go round, but the remedy lies in dividing the available buses equitably among all the routes and not in starving some routes and feeding one route with 10 buses per hour.

Then I would like to say a word about rail transport. Bangalore has grown enormously in importance, but we have not got a direct route to the north without a break in gauges. The remedy is very simple. Between Bangalore and Guntakal we have 176 miles of meter gauge line. Convert that into broad gauge and we will get a through broad gauge route from Bangalore to the North. Then you can take that 176 miles of meter gauge rails and send it to Poona for laying a meter gauge line from Poona to Bombay. In that case we will have two direct routes to the north, one broad gauge line to Bombay *via* Guntakal and one meter gauge line to Bombay *via* Poona. Converting the Guntakal-Bangalore line into a broad gauge line is very simple. You are not required to spend any money for survey and for acquiring lands. All that you have to do is to strengthen the existing bridges and widen and strengthen the track so as to carry the heavier broad gauge vehicles. The meter gauge rails from Bangalore to Guntakal could then be sent to Poona for laying a meter gauge line from Poona to Bombay. After that is done the whole of Mysore State will be served with direct rail transport to the north without a break in the gauges.

Then, medical treatment in the rural areas is in a very deplorable condition. Unfortunately, there is a policy that only Graduates should be sent to the rural areas. The result is that rural areas generally have no doctors.

SRI R. M. PATIL (Minister for Public Health).—In which part of the State?

SRI F. W. CORBETT.—I need not mention any particular part. All the rural areas have not got doctors. If a man in a rural area falls ill today, there is no doctor to attend to him. If he dies, what consolation is it to tell him while dying that his grandson will get a medical graduate to treat him? The man who is ill today wants medical treatment now. We want more licentiates to go to the rural areas. In Russia they have a three-year course for licentiates and those licentiates attend to the ordinary ailments of the people. Serious cases are sent to the big hospitals. Here we want a three-year course for licentiates to attend to the ordinary ailments of the people and give them some medical treatment. For giving treatment for ordinary ailments like dressing a fracture, etc., you do not want a graduate. Have you got graduate teachers for all your village schools? Have you got graduate engineers for all your village roads? Then why insist on graduate doctors only for giving treatment in the rural areas? Ordinary licentiates are enough for the rural areas to give treatment for ordinary ailments. I suggest that in Mysore State we have 4 medical schools, each training 100 nurses and 100 licentiates per year. At the end of the three-year course we will have 400 nurses and 400 licentiates. Thereafter every year we will have 400 nurses and 400 licentiates. At the end of 10 years all our villages will have nurses and doctors. Today if we send all our medical graduates to villages, they will not be enough to go round. In Bangalore itself we have not got enough doctors to go round. Then, why insist on medical graduates for the rural

(SRI F. W. CORBETT)

areas when we can conveniently follow the example of other countries and train sufficient licentiates to attend to the poor people in the rural areas who are without any treatment now. I hope the Minister for Health will look into this matter. Thank you.

Sri R. M. PATIL.—The Medical Council insists on graduates and not licentiates.

ಶ್ರೀ ಡಿ. ಮೂಕಪ್ಪ (ಸಾಗರ).—ಮಾನ್ಯ ಸಭಾಪತಿಗಳೇ ಈ ದಿವಸ ನಮ್ಮ ಮುಂದಿರತಕ್ಕ 1958-59ನೆಯ ಸಾಲಿನ ಆಯುವ್ಯಯ ಪಟ್ಟಿಯನ್ನು ಅನುಮೋದಿಸುತ್ತ ಒಂದೆರಡು ವಿಷಯಗಳನ್ನು ನಾನೀಗ ತಮ್ಮ ಮೂಲಕ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಮೊದಲನೆಯದಾಗಿ ನಮ್ಮ ಕರ್ಣಾಟಕ ಪ್ರಾಂತ್ಯ ಬೇಕಾದಷ್ಟು ಸಂಪತ್ತುಸಮೃದ್ಧಿಗಳಿಂದ ಕೂಡಿರತಕ್ಕಂಥ ಪ್ರಾಂತ್ಯ. ಆ ರೀತಿ ಇದ್ದಾಗ್ಯೂ ಕೂಡ ನಾವು ಇದನ್ನು ರೂಢಿಸಿಕೊಳ್ಳುವುದರಲ್ಲಿ ತುಂಬ ಹಿಂದೆ ಬಿದ್ದಿದ್ದೇವೆ ಎಂಬುದರಲ್ಲಿ ಸಂದೇಹವೇ ಇಲ್ಲ. ಇದರಲ್ಲಿ ಅತಿ ಮುಖ್ಯವಾದದ್ದು—ಎಂದರೆ ಜನರಿಗೆ ಮುಖ್ಯವಾಗಿ ಬೇಕಾಗಿರುವುದು ಹೊಟ್ಟೆ ಮತ್ತು ಬಟ್ಟೆ. ಈ ಎರಡು ಮುಖ್ಯ ವಿಚಾರಗಳಲ್ಲಿ ಜನರ ಹೊಟ್ಟೆಗೆ ಬೇಕಾದಂಥ ಆಹಾರವನ್ನು ಉತ್ಪಾದನೆ ಮಾಡುವ ಪ್ರದೇಶ ಮತ್ತು ಉತ್ಪಾದನೆ ಮಾಡುವಷ್ಟು ಜನ ನಮ್ಮ ದೇಶದಲ್ಲಿ ಬೇಕಾದಷ್ಟಿದ್ದರೂ ಮತ್ತು ನಮ್ಮ ದೇಶದಲ್ಲಿರತಕ್ಕ ಜನತೆ ಶೇಕಡ ಎಪ್ಪತ್ತರಷ್ಟು ಈ ವ್ಯವಸಾಯೋದ್ಯಮವನ್ನು ಅವಲಂಬಿಸಿಕೊಂಡಿದ್ದಾಗ್ಯೂ ಕೂಡ ನಮ್ಮ ದೇಶಕ್ಕೆ ಬೇಕಾದಷ್ಟು ಆಹಾರವನ್ನು ಉತ್ಪಾದನೆ ಮಾಡದಿರುವುದು ಬಹಳ ವಿಷಾದಕರ. ಇದಕ್ಕಾಗಿ ನಮ್ಮ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡು ಈ ಆಹಾರದ ಉತ್ಪಾದನೆಯ ಬಗ್ಗೆ ವಿಶೇಷ ಶ್ರಮವಹಿಸುತ್ತಿದ್ದಾಗ್ಯೂ ಕೂಡ ಅದು ಸಾಧ್ಯವಾಗದೆ ಇರುವುದಕ್ಕೆ ಕಾರಣವೇನೆಂಬುದರ ಬಗ್ಗೆ ನಾನೀಗ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ಆಹಾರವನ್ನು ಸೃಷ್ಟಿ ಮಾಡುವಂಥ ಮನುಷ್ಯನಿರತಕ್ಕ ಪ್ರದೇಶ ಬಹಳ ಹಳ್ಳಿಗಾಡು. ಆದುದರಿಂದ ಅವನ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕಾದದ್ದು ಅ ಮುಖ್ಯವಾದಂಥ ವಿಚಾರ. ದೇಶಕ್ಕೆ ಸ್ವಾತಂತ್ರ್ಯ ಬಂದು ಈಗಾಗಲೇ ಹತ್ತುವರ್ಷಗಳಾದರೂ ಕೂಡ ನಿಜವಾಗಿಯೂ ಈವರೆಗೂ ಯಾರು ದೇಶದ ಜನರ ಹೊಟ್ಟೆಗಾಗಿ ಬೇಕಾದ ಆಹಾರ ಉತ್ಪಾದನೆ ಮಾಡಲು ಶ್ರಮಪಡುತ್ತಿದ್ದಾನೋ ಅಂಥ ಮನುಷ್ಯನಿಗೆ—ಆ ರೈತನಿಗೆ ಸ್ವಾತಂತ್ರ್ಯವಿನ್ನೂ ಸಿಕ್ಕಿಲ್ಲವೆಂದು ಹೇಳಿದರೆ ಇದನ್ನು ತಾವೆಲ್ಲರೂ ಒಪ್ಪುತ್ತೀರೆಂದು ಭಾವಿಸುತ್ತೇನೆ. ಈ ರೀತಿ ಈ ದಿವಸ ಅಸ್ವತಂತ್ರನಾಗಿರತಕ್ಕ ಮನುಷ್ಯ ಕ್ರಿಮಿಕೀಟಗಳೋಪಾದಿಯಲ್ಲಿ ಹಗಲಿರಳೂ ದೇಶಕ್ಕಾಗಿ ಜನತೆಯ ಹೊಟ್ಟೆಯ ಆಹಾರ ಸೃಷ್ಟಿಗಾಗಿ ಪಡುತ್ತಿರುವ ಕಷ್ಟವೆಷ್ಟಿದೆ ಎನ್ನುವುದನ್ನು ತಾವೆಲ್ಲರೂ ಪರಿಶೀಲನೆ ಮಾಡಬೇಕಾಗಿದೆ. ಅವನ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ತಾವೆಲ್ಲರೂ ಗಮನ ಕೊಡಬೇಕಾದದ್ದು ಅತ್ಯಗತ್ಯವೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ದಿವಸ ಸರ್ಕಾರದವರು ಆ ರೈತನಿಗೆಂದು ನೀಡುತ್ತಿರುವ ಸೌಲಭ್ಯಗಳೇನಿವೆ ಅವು ಆತನಿಗೆ ನೇರವಾಗಿ ದೊರೆಯುತ್ತಿಲ್ಲ ಎನ್ನುವುದನ್ನು ನಾನೀಗ ತಮ್ಮ ಮುಂದೆ ಇಡುತ್ತಿದ್ದೇನೆ. ಸರ್ಕಾರದವರು ಈಗಾಗಲೇ ಈ ವ್ಯವಸಾಯದ ಮತ್ತು ವ್ಯವಸಾಯಗಾರರ ಬಗ್ಗೆ ಕೆಲವು ಸಹಾಯಗಳನ್ನೂ ಸೌಲತ್ತುಗಳನ್ನೂ ನೀಡಿರುತ್ತಾರೆ. ಆದರೆ ಈಗ ಇರತಕ್ಕ ವ್ಯವಸಾಯಗಾರರನ್ನು ನಾವು ಮೂರುಭಾಗವಾಗಿ ವಿಂಗಡಿಸಬಹುದು. ಹೇಗೆಂದರೆ ಕೇವಲ ಕಂದಾಯವನ್ನು ಕೊಟ್ಟುಕೊಂಡು ಪಾಲನ್ನೋ ಅಥವಾ ಗೇಣಿಯನ್ನೋ ಪಡೆಯುತ್ತಿರುವಂಥ ಮನುಷ್ಯನನ್ನೂ ಕೂಡ ಸರ್ಕಾರ ಈ ದಿವಸ ರೈತನೆಂಬುದಾಗಿ ಪರಿಗಣಿಸಿದ್ದಾರೆ. ಇಂಥ ರೈತನು ಒಂದನೆಯ ವರ್ಗಕ್ಕೆ ಸೇರಿರುತ್ತಾನೆ. ಇನ್ನು ಎರಡನೆಯ ವರ್ಗದ ರೈತನೆಂದರೆ ಕೇವಲ ಕಂದಾಯವನ್ನು ಕೊಟ್ಟುಕೊಂಡು ತಾನೇ ಸ್ವಂತವಾಗಿ ಸಾಗುವಳಿ ಮಾಡಿಕೊಂಡು ಹೋಗತಕ್ಕವನನ್ನೂ ಒಂದು ತರಹೆಯ ರೈತನೆಂದೇ ಪರಿಗಣಿಸಲಾಗಿದೆ. ಇನ್ನು ಮೂರನೆಯ ವರ್ಗಕ್ಕೆ ಸೇರಿದ ರೈತನೆಂದರೆ ಜಮೀನು ಇಲ್ಲದೆ ಇನ್ನೊಬ್ಬರ ಜಮೀನನ್ನು ಅಂದರೆ ಮೊದಲನೆಯ ವರ್ಗಕ್ಕೆ ಸೇರಿದವರ ಜಮೀನನ್ನು ಕೃಷಿ ಮಾಡತಕ್ಕಂಥವರು ಮೂರನೆಯ ವರ್ಗಕ್ಕೆ ಸೇರಿದವರಾಗಿದ್ದಾರೆ. ಈ ರೀತಿ ಮೂರನೆಯ ವರ್ಗಕ್ಕೆ ಸೇರಿದ ರೈತರು ಬಹುಸಂಖ್ಯಾತರು ಆಗಿದ್ದಾರೆ. ಸರ್ಕಾರದಿಂದ ದೊರೆಯತಕ್ಕಂಥ ಸವಲತ್ತುಗಳು ಈ ಮೂರನೆಯ ವರ್ಗದವರಿಗೆ ದೊರೆಯುತ್ತಿಲ್ಲವೆಂದು ನಾನು ಹೇಳಬಯಸುತ್ತೇನೆ. ಕಂದಾಯ ಕೊಡತಕ್ಕವರಿಗೆ ಮಾತ್ರ ಸವಲತ್ತು ದೊರೆಯುತ್ತವೆ. ಈ ಮೂರನೆಯ ವರ್ಗದವರು ಕಂದಾಯ ಕೊಡದೇ ಇರುವದರಿಂದ ಇವರಿಗೆ ಸವಲತ್ತುಗಳ ಉಪಯೋಗವಾಗುವುದಿಲ್ಲ. ಸ್ವಾತಂತ್ರ್ಯ ಬಂದನಂತರ ಇಂಥವರಿಗೆ ದೊರೆತ ಸವಲತ್ತು ಎಂದರೆ ಮತದಾನದ ಹಕ್ಕು ಒಂದೇ ಸಂದಾಯವಾಗಿದೆಯೇ ವಿನಾ ಇನ್ನಾವುದೂ ದೊರೆಯುತ್ತಿಲ್ಲ. ಆಸ್ತಿ ಇದ್ದವರಿಗೆ ಮಾತ್ರ ಸಾಲ ಕೊಡಬೇಕೆಂದು ಇದೆ. ಆಸ್ತಿ ಇಲ್ಲದವರಾದರೆ ಜಾಮೀನು ಕೊಡಬೇಕಾಗುತ್ತದೆ. ಮೂರನೆಯ ವರ್ಗದವರಿಗೆ ಜಮೀನು ಇಲ್ಲದ್ದರಿಂದ ಸಾಲ ಸಹ ದೊರೆಯುವುದಿಲ್ಲ. ನಿಜವಾಗಿಯೂ ಶ್ರಮಪಡತಕ್ಕಂಥ ಈ ವರ್ಗದ ರೈತರಿಗೆ ಸಹಾಯ ಸವಲತ್ತುಗಳು ದೊರೆಯಬೇಕಾದುದು ಅಗತ್ಯ. ವ್ಯವಸಾಯಕ್ಕೆ ಬೇಕಾಗುವ ಸಾಮಾನುಗಳು ಸಹಾ ಇವರಿಗೆ ದೊರೆಯುತ್ತಿವೆಯೋ ಎಂಬುದನ್ನು ಯೋಚನೆ ಮಾಡಬೇಕು. ಕಂದಾಯ ಕೊಡತಕ್ಕವರಿಗೆ ಮಾತ್ರ ಸಹಾಯ ಸೌಲಭ್ಯಗಳು ದೊರೆಯುತ್ತಿವೆಯೇ ವಿನಾ ಅದೇ ಊರಿನಲ್ಲಿ ಶಾಶ್ವತವಾಗಿ ಇದ್ದು ಬಹುಕಾಲದಿಂದ ಜಮೀನು ಸಾಗುವಳಿ ಮಾಡತಕ್ಕಂಥವರಿಗೆ ಸಹಾಯ ದೊರೆಯುವುದಕ್ಕೆ ಸಾಧ್ಯವಾಗಿಲ್ಲವೆಂದು ತುಂಬ ವಿಷಾದದಿಂದ ಹೇಳಬೇಕಾಗಿದೆ. ಆದ್ದರಿಂದ ರೈತನಿಗೆ ನೇರವಾಗಿ ಸಹಾಯ ಸವಲತ್ತು ಸಿಕ್ಕುವಹಾಗೆ ಮಾಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ಈಗ ಆಹಾರಧಾನ್ಯವನ್ನು ಸ್ಟಾಕ್ ಮಾಡಬೇಕು ಎಂಬ ಒಂದು ಸ್ಕೀಮು ಮಾಡಿ ಅದಕ್ಕಾಗಿ ಬೆಲೆಯನ್ನು ನಿಗದಿ ಮಾಡಿದ್ದಾರೆ. ಒಂದು ಪಲ್ಲ ಭತ್ತಕ್ಕೆ ಸುಮಾರು 23 ರೂಪಾಯಿ ಎಂದು ನಿಗದಿಮಾಡಿದ್ದಾರೆ. ಆದರೆ ಒಂದು ಪಲ್ಲ ಬತ್ತ ಬೆಳೆಯುವುದಕ್ಕೆ ರೈತನು ಪಡುವ ಪರಿಶ್ರಮ, ಗೊಬ್ಬರ, ಗೋಡು, ಬೀಜ, ವಗೈರೆ ಇದನ್ನೆಲ್ಲಾ ಲೆಕ್ಕಾ ಹಾಕಿದರೆ ಅವನಿಗೆ ಸರಿಯಾದ ಪ್ರತಿಫಲ ಸಿಕ್ಕುತ್ತದೆಯೇ? ಆಗಿನ ಕಾಲದಲ್ಲಿ ಒಂದು ಪಲ್ಲ ಬತ್ತದ ಬೆಲೆ ಮೊದಲು ಏಳು ರೂಪಾಯಿ ಇತ್ತು. ಆದರೆ ಈಗ

ಮೂರರಷ್ಟು ಬೆಲೆ ಹೆಚ್ಚಾಗಿದೆ. ಅದರಂತೆ ಆಗಿನ ಕಾಲದಲ್ಲಿ ಒಬ್ಬ ನವಕರನಿಗೆ ಕನಿಷ್ಠ ಎಂದರೆ ಹತ್ತು ಹನ್ನೆರಡು ರೂಪಾಯಿ ಸಂಬಳ ದೊರೆಯುತ್ತಿತ್ತು. ಈಗ ಅದೇ ನವಕರನಿಗೆ 100-120 ರೂಪಾಯಿ ಸಂಬಳ ಸಿಕ್ಕುತ್ತದೆ. ನವಕರನ ಸಂಬಳದ ಪ್ರಮಾಣವನ್ನು ಎಂಟರಷ್ಟು ಏರಿಸಲಾಗಿದೆ. ಆದರೆ ಅದೇ ಪ್ರಮಾಣದಲ್ಲಿ ಧಾನ್ಯಗಳ ಬೆಲೆ ಏರಿಲ್ಲ. ಧಾನ್ಯಗಳ ಬೆಲೆ ಮೂರರಷ್ಟು ಪ್ರಮಾಣದಲ್ಲಿ ಮಾತ್ರ ಹೆಚ್ಚಾಗಿದೆ. ಈ ರೀತಿಯಾಗಿರುವುದರಿಂದ ರೈತನು ಜೀವನ ಹೇಗೆ ನಡೆಸಬೇಕು ? ಪ್ರತಿಯೊಬ್ಬನಿಗೆ ಇಂತಿಷ್ಟು ಕನಿಷ್ಠ ಉತ್ಪತ್ತಿ ದೊರೆಯುವ ಹಾಗೆ ಕಲ್ಪಿಸಬೇಕಾದುದು ನ್ಯಾಯ. ರೈತನಿಗೆ ಉತ್ತೇಜನ ಕೊಡಬೇಕು. ರೈತನು ಬೆಳೆದ ಆಹಾರ ಧಾನ್ಯಗಳಿಗೆ ಹೆಚ್ಚು ಬೆಲೆ ಬರುವಹಾಗೆ ಮಾಡಬೇಕು.

ಇನ್ನು ಕೋ-ಆಪರೇಟಿವ್ ಸೊಸೈಟಿ ವಿಚಾರವಾಗಿ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಕೋ-ಆಪರೇಟಿವ್ ಸೊಸೈಟಿ ಸಂಬಂಧದಲ್ಲಿ ಸಾಕಷ್ಟು ಪ್ರಚಾರ ಮಾಡಲಾಗಿದೆ. ಆದರೆ ನಿರೀಕ್ಷಣೆ ಮಾಡಿದಷ್ಟು ಪ್ರತಿಫಲ ದೊರೆಯದೆ ಜನರಲ್ಲಿ ಒಂದು ರೀತಿಯ ಅಸಮಾಧಾನಕ್ಕೆ ಕಾರಣವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ಪ್ರಚಾರ ಮಾಡಿದ್ದರೂ ಷೇರುಗಳನ್ನು ಜನರು ತೆಗೆದುಕೊಳ್ಳುತ್ತಿಲ್ಲ. ಸರ್ಕಾರದಿಂದಲೂ ಸಹ ಹಣ ಸರಿಯಾಗಿ ದೊರೆಯುತ್ತಿಲ್ಲ. ಹಣದ ಅಭಾವದಿಂದ ಜನರಿಗೆ ಆಶಾಭಂಗವಾಗಿದೆ. ಜನರಿಗೆ ತೊಂದರೆಯಾಗಿದೆ. ಆದಕಾರಣ ಇದನ್ನು ಜಾಗ್ರತೆ ಪರಿಶೀಲನೆ ಮಾಡಬೇಕು ಹಾಗು ಬಡಜನರಿಗೆ ಸರಿಯಾದ ರೀತಿಯಲ್ಲಿ ಹಣ ದೊರೆಯುವ ಹಾಗೆ ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಪೋಲೀಸ ವಿಚಾರ. ಈಗಾಗಲೇ ಅನೇಕ ಜನ ಸ್ನೇಹಿತರು ಈ ವಿಚಾರದಲ್ಲಿ ಹೆಚ್ಚಾಗಿ ಹೇಳಿದ್ದಾರೆ. ಹೇಳಿದ್ದನ್ನೇ ಮತ್ತೆ ಹೇಳಲು ನಾನು ಅಪೇಕ್ಷಿಸುವುದಿಲ್ಲ. ಆದರೆ ಒಂದು ವಿಚಾರವನ್ನು ಹೇಳದೇ ಇರುವುದು ಸೂಕ್ತವಲ್ಲವೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಒಂದು ಮಾತನ್ನು ಹೇಳಲು ಬಯಸುತ್ತೇನೆ. ದೇಶದಲ್ಲಿ ಶಾಂತಿರಕ್ಷಣೆ, ನೀತಿರಕ್ಷಣೆ, ಅನ್ಯಾಯಗಳನ್ನು ತಡೆಗಟ್ಟುವುದು ಮುಂತಾದ ಮುಖ್ಯ ಕೆಲಸಗಳು ಪೋಲೀಸಿನವರದಾಗಿದೆ. ಪೋಲಿಸ ಡಿಪಾರ್ಟ್‌ಮೆಂಟಿನವರಲ್ಲಿ ಅಶಾಂತಿಯುಂಟಾಗಿರುವದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಪೋಲೀಸಿನವರ ಕಡೆಗೆ ತಕರಾರು ಕೊಡಲು ಹೋದರೆ ಹೋದ ಜನರಿಗೆ ಹಿಂಸೆ ಪಡಿಸುತ್ತಾರೆ. ಈ ರೀತಿ ಹಿಂಸೆ ಕೊಟ್ಟ ಉದಾಹರಣೆಗಳು ಬೇಕಾದಷ್ಟು ಇವೆ. ನ್ಯಾಯವಾದದ್ದನ್ನು ರಕ್ಷಣೆ ಮಾಡುವ ಕಾಲಕ್ಕೆ ಅಶಾಂತಿ ಅನ್ಯಾಯಕ್ಕೆ ಎಡೆ ಮಾಡಿಕೊಡುವಂತಾಗಿದೆ. ಇನ್ನು ಮೇಲಾದರೂ ಸಾಧ್ಯವಾದಮಟ್ಟಿಗೆ ಇಂಥಾದ್ದನ್ನೆಲ್ಲಾ ತಡೆಗಟ್ಟುವಂತೆ ಮಾಡಬೇಕು.

5 P.M.

ಇದಕ್ಕೆ ನನ್ನ ಅಭಿಪ್ರಾಯದಲ್ಲಿ ಒಂದು ಕೆಲಸ ಮಾಡಬಹುದು. ಪೋಲೀಸ್ ಶಾಖೆಯಲ್ಲಿ, ಪೋಲೀಸ್ ಆಫೀಸಿನಲ್ಲಿ ಕೇವಲವಾಗಿ ಮೇಲ್ಪಟ್ಟ ಅಧಿಕಾರಿಗಳು ಆಗಾಗ್ಗೆ ತನಿಖೆಮಾಡುವುದರ ಮೂಲಕವಾಗಿಯೇ ಅಲ್ಲರತಕ್ಕ ತಪ್ಪುನೆಪ್ಪುಗಳನ್ನು, ನ್ಯೂನತೆಗಳನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅವರೂ ಕೂಡ ಬುದ್ಧಿವಂತರೇ. ಆ ಡಿಪಾರ್ಟ್‌ಮೆಂಟಿನಲ್ಲೇ ಬುದ್ಧಿವಂತರಿರುವುದರಿಂದ ರಿಕಾರ್ಡುಗಳಲ್ಲಿ ತಪ್ಪು ಸಿಕ್ಕುವಂತೆ ಅವರು ಎಂದಿಗೂ ಮಾಡುವುದಿಲ್ಲ. ಆದ್ದರಿಂದ ಮೇಲ್ಪಟ್ಟ ಅಧಿಕಾರಿಗಳು ತಿಂಗಳು, ಎರಡು ತಿಂಗಳಿಗೊಂದು ಸಾರಿ ಭೇಟಿ ಕೊಟ್ಟಾಗ ರಿಕಾರ್ಡುಗಳನ್ನು ಚೆಕ್ ಮಾಡುವುದಕ್ಕೆ ಬದಲು, ಆ ಪ್ರದೇಶದ ಜನರನ್ನು ಕೇಳಿ ಅವರಿಗೇನು ತೊಂದರೆಯಾಗುತ್ತಿದೆಯೆಂದು ಕೇಳಿ, ಆ ಮೂಲಕ ಎಚ್ಚರಿಕೆ ಕೊಡುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಇನ್ನು ಅರಣ್ಯದ ವಿಚಾರ ಹೇಳುತ್ತೇನೆ. ಫಾರೆಸ್ಟ್ ಇಲಾಖೆಯವರು M R.P. ಲೈಸೆನ್ಸ್ ಎಂದು ಮನೆ ಕಟ್ಟಿಕೊಳ್ಳುವುದಕ್ಕೆ ಬೇಕಾದ ಮರಮುಟ್ಟುಗಳನ್ನು ಸಾಗಿಸುವ ಅವಕಾಶ ಮಾಡಿದ್ದಾರೆ. ಎರಡ್ ರೂಪಾಯಿ ಕಂದಾಯ ಕೊಡುವವನಿಗೆ ನಾಲ್ಕು ರೂಪಾಯಿಗಳ ನಾಟಾ ತೆಗೆದುಕೊಳ್ಳುವುದಕ್ಕೆ ಲೈಸೆನ್ಸ್ ಕೊಡುತ್ತಾರೆ. ಆದರೆ, ಅವನಿಗೆ ಕಾಡಿನಲ್ಲಿ ಮರವನ್ನು ಕತ್ತರಿಸಿ ಸಾಗಾಣಿಕೆ ಮಾಡುವುದರಲ್ಲೇ ಇರುವುದು ಕಷ್ಟ. ಸಾಗಾಣಿಕೆಗೆ ಲೈಸೆನ್ಸ್ ಕೊಡುವುದು ಅರಣ್ಯದ ಶಾಖೆ. ಮರವನ್ನು ಕತ್ತರಿಸಿದ ಮೇಲೆ ಫಾರೆಸ್ಟ್ ಇಲಾಖೆಯವರಲ್ಲಿಗೆ ಹೋಗಿ ಅವರಿಂದ ಸೀಲ್ ಹಾಕಿಸಿಕೊಳ್ಳಬೇಕೆಂದರೆ ಎರಡು-ಮೂರು ವರ್ಷವೇ ಹಿಡಿಯುತ್ತದೆ. ಏಕೆಂದರೆ, ಈ ರೀತಿ ಸೀಲ್ ಮಾಡಿಸಿಕೊಳ್ಳುವುದಕ್ಕೆ ಏನಾದರೂ ತಕ್ಕ ಪ್ರತಿಫಲ ಕೊಟ್ಟ ಹೊರತು ಆಗುವುದಿಲ್ಲ. ಕಾರಿನಲ್ಲಿ ಕರೆದು ಕೊಂಡುಹೋಗಿ ತೃಪ್ತಿಪಡಿಸಬೇಕು. ಈ ರೀತಿ ಕಾರಿನಲ್ಲಿ ಕರೆದುಕೊಂಡು ಹೋಗಿ ತೃಪ್ತಿಪಡಿಸಬೇಕಾದರೆ ಬಹಳಕಾಲ ಕಳೆಯುತ್ತದೆ. ಇಷ್ಟರೊಳಗೆ ಬೆಂಕಿಯಿಂದಲೋ, ಕಳ್ಳರಿಂದಲೋ ಕತ್ತರಿಸಿಟ್ಟಿದ್ದ ನಾಟಾವೆಲ್ಲಾ ಹೋಗಿರುತ್ತದೆ. ಇಂಥಾ ಅನ್ಯಾಯವನ್ನು ತಡೆಗಟ್ಟಿ ನಿಜವಾಗಿ ರೈತರಿಗೆ ಬರಬೇಕಾದ ಸವಲತ್ತುಗಳು ನೇರವಾಗಿ ಸಿಕ್ಕುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ. ನಮ್ಮ ಹಳೆಯ ಮೈಸೂರಿನಲ್ಲಿ ಜಾತಿ-ವರ್ಗಗಳ ವಿಂಗಡಣೆಮಾಡಿ ಸುಮಾರು 20-30 ವರ್ಷಗಳ ಮೇಲಾಯಿತು. Forward, Backward ಮತ್ತು Depressed class—ಈ ರೀತಿಯಾಗಿ ಮೂರು ಪಂಗಡ ಮಾಡಿ ಕಡಮೆ ವರ್ಗದವರಿಗೆ ಕೆಲವು ಸವಲತ್ತುಗಳನ್ನು ಕೊಡುತ್ತಿದ್ದೀರಿ. ಆದರೆ Backward ಎಂಬ ವರ್ಗದಲ್ಲೇ ಅನೇಕ ಕೋಮಿನ ಜನರು ಸೇರಿದ್ದು, ಅದರಲ್ಲಿ ಕೆಲವರು ಹಿಂದುಳಿದ ವರ್ಗಗಳವರಿಗಿಂತಲೂ ಹೀನಸ್ಥಿತಿಯಲ್ಲಿರುವವರಾಗಿದ್ದಾರೆ. ಅವುಗಳನ್ನು ಈಗಲಾದರೂ ಪರಿಶೀಲನೆಮಾಡಿ ಬೊಂಬಾಯಿ ಪ್ರಾಂತ್ಯದಲ್ಲಿ ಯಾವ ರೀತಿ ಮಾಡಿದ್ದಾರೋ ಅದೇ ರೀತಿ Backward-other Backward ಎಂದು ಒಂದು ಹೊಸ ಒಳ ವಿಂಗಡಣೆ ಮಾಡಬೇಕು. ಅದರಂತೆ ಮಾಡಿ, ಅಲ್ಲಿ other Backward ಪಂಗಡದವರಿಗೆ ಯಾವರೀತಿ ಸವಲತ್ತುಗಳನ್ನು ಒದಗಿಸುತ್ತಿದ್ದಾರೋ ಅದೇ ರೀತಿ ಇವರಿಗೂ ಅನುಕೂಲ ಕಲ್ಪಿಸಿಕೊಟ್ಟು ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯದ ಬಗ್ಗೆ ಹೇಳಿ ಮುಗಿಸುತ್ತೇನೆ. ಆರೋಗ್ಯದ ವಿಷಯದಲ್ಲಿ ಸರ್ಕಾರದವರು ಹಳ್ಳಿಯ ಜನರ ಬಗ್ಗೆ ಹೆಚ್ಚಿನ ಗಮನಕೊಡಬೇಕು. ಅವರ ಆರೋಗ್ಯ ಭಾಗ್ಯವನ್ನು ಕಾಪಾಡಬೇಕೆಂದು ಹಳ್ಳಿ ಹಳ್ಳಿಯಲ್ಲೂ ಕೇಳಿದಾಗಲೆಲ್ಲಾ ಒಂದು ಆಸ್ಪತ್ರೆಯನ್ನು ಸ್ಥಾಪನೆ ಮಾಡುತ್ತಿದ್ದೀರಿ. ಆದರೆ, ನೀವು ಎಷ್ಟ ಸ್ಥಾಪನೆ ಮಾಡಿದ್ದರೂ, ಅಷ್ಟೇ ಮಟ್ಟದಲ್ಲಿ ಆಸ್ಪತ್ರೆಗಳು ಟೌನುಗಳಲ್ಲಿ ಪ್ರೈವೇಟ್ ಜನರಿಂದ ತೆರೆಯಲ್ಪಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದಕೆ

(ಶ್ರೀ ಡಿ. ಮೂಕಪ್ಪ)

ಕಾರಣವೇನು ! ಸರ್ಕಾರಿ ಆಸ್ಪತ್ರೆಗಳಲ್ಲಿ ತೊಂದರೆ ಹೆಚ್ಚಿದೆ. ಅಲ್ಲಿ ಯಾವಾಗಲೂ ಔಷಧಿಯಿರುವುದಿಲ್ಲ, ಅಲ್ಲಿನ ಡಾಕ್ಟರುಗಳು ಕೆಟ್ಟರೀತಿಯಿಂದ ರೋಗಿಗಳನ್ನು ನೋಡುವುದು ಮತ್ತು ಪ್ರತಿಫಲ ಅಪೇಕ್ಷಿಸುವುದು—ಇಂಥ ಕಾರಣಗಳಿಂದ ನಮ್ಮ ಪ್ರೈವೇಟ್ ಡಾಕ್ಟರುಗಳಲ್ಲಿಗೇ ಹೋದರೆ ಅವರು ಮಮತೆಯಿಂದ ನೋಡುತ್ತಾರೆ, ಮತ್ತು ಕಷ್ಟ ಸುಖಗಳನ್ನು ವಿಚಾರಿಸಿಕೊಳ್ಳುತ್ತಾರೆಂದು ಹೇಳಿ ಹಳ್ಳಿಯ ಜನರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಅಷ್ಟು ನಂಬಿಕೆಯಿಲ್ಲದೆ ಹೋಗಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ಸುಳ್ಳು ಲೆಕ್ಕಗಳನ್ನು ಬರೆಯುವ ಅಭ್ಯಾಸ ಬಂದಿದೆ. ಅವೆಲ್ಲಾ ತಪ್ಪಿ, ಅವು ಸರಿಯಾಗಿ ನಡೆಯುವಂತೆ ಪರಿವರ್ತನೆಮಾಡಬೇಕೆಂದು ಹೇಳಿ ನನಗೆ ಇಷ್ಟು ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೂ ವಂದಿಸಿ ಮುಗಿಸುತ್ತೇನೆ.

Sri G. B. SHANKAR RAO (Hirekerur).—Mr. Speaker, Sir, I rise to support the Budget Estimates for 1958-59 placed before this august House by the Hon'ble the Finance Minister. Last time, when the Hon'ble Minister for Finance presented the deficit Budget, we were afraid that we would meet with an economic stringency in the coming years. But thanks to the Finance Minister, this year he has been able to present before us a surplus budget.

The Hon'ble the Finance Minister has stated in his Budget Speech that he has been able to present this surplus budget by scaling down the unnecessary expenditure and by undertaking economy measures. This he would not have achieved if all his colleagues had not co-operated with him in cutting down or reducing unnecessary expenditure in the several stages of administration. The present Government needs special commendation for helping the Finance Minister in presenting a surplus budget by their efficient administration and by practising economy in managing the multifarious affairs of the State.

In all the integrated areas of our State we find that there are diverse systems of judicial set up upto the level of district courts. There are different cadres in the judicial service. Again, there are different levels of jurisdictional powers exercised by courts in different areas. There is no uniformity of procedure. For want of this uniformity, much hardship is being experienced by the Judicial Department in matters of transfer of judicial officers. Though 17 months have elapsed since this Ministry assumed office, still the Government is slow in bringing about uniformity in these matters. I, therefore, suggest that the Government should appoint a Law Commission to go into the question of suggesting ways and means of bringing about uniformity in respect of jurisdictional powers, etc., in the various types of courts, both civil as well as criminal. The last ten months have witnessed the unwholesome practice of clerks being recruited to the judicial cadre. This practice, so far as I know, is not followed in any progressive State. This practice should be condemned for the reasons to be explained further.

The practice of promoting clerks to the cadre of judicial officers is really deplorable. It affects not only the dignity and prestige of the judiciary but also reduces the efficiency. The clerks will have had no experience either at the Bar or at the Bench. Mere clerical experience is absolutely of no avail for dispensation of justice as judicial officers As these clerks are from the lowest cadre of administration, the requisite amount of independence and impartiality cannot be expected from them. The appointment of clerks to these posts is likely to introduce corruption. The sanctity attached to these judicial posts will be lost by recruiting clerks to high judicial offices. Sir, there is much clamour and complaint regarding the lack of library facilities in these courts. The strength of this High Court is doubled or trebled but so far there are no proper library facilities to the advocates coming from outside. Whatever little library that was there, is exclusively reserved for the use of the Judges. Therefore the advocates coming from the integrated areas have been denied the advantages for which they have a right to approach the library for any information required in their day-to-day practice.

Sir, the City of Bangalore is growing bigger. Its population is increasing and it is already over populated. Any attempt to start fresh industries or to develop the existing ones or to start fresh schemes under the Five-Year Plans

will have to be diverted to rural areas, so that the rural areas also might receive its due share of attention in the development plans of the Government. Otherwise, there is bound to be greater trouble and inconvenience about water supply and housing problem which is already very acute. I therefore request that henceforth Government should make their policy to decentralise industries and establish industries in the rural areas.

Sir, we are now in the third year of the Second Five-Year Plan. There are schemes sponsored under the First Five-Year Plan which continued in the Second Plan period. We are in a democracy and are responsible to the people of the country. The people are naturally interested to know what is going on in the State. To make our people feel and to make them know that their country is developing and that the Government is for them, we would see that these works which are in process of being completed should be made known to them by issuing publications and pamphlets giving in detail the several stages at which these works are under execution. The Five-Year Plan and the annual programmes which are more or less of the nature of statistical report, there are no publications giving details of the several works undertaken by the Government under the schemes. I would earnestly request the Government to publish not only in English but in Kannada also, the details of all the schemes and the progress so far achieved.

Sir, in the field of education, we require complete reorientation. Our colleges are already over-crowded. There is a great rush for admission to the degree courses. If this rush is not checked we will have to face an acute problem of unemployment. Very recently the University Grants Commission made certain recommendations to check these admissions. If admissions are restricted a large number of youngsters will be diverted to some other professional qualifications or some technical education. If the recommendations of the University Grants Commission are adopted, we will be able to solve the problem of unemployment in the country. To achieve this, we have however to see that technical education courses are opened early to fulfil the quota that is defined under the Five-Year Plan.

Lastly, Sir, there are complaints that injustice has been done to advocates coming from the integrated parts. In the appointment of Assistant Advocate-General and Government Pleaders, the case of advocates from the integrated areas has been neglected. Out of nine appointments, only two are given to those coming from outside areas. I urge upon the Government to see that henceforth no such injustice is done to advocates coming from the integrated areas. People of integrated areas that have come here should really feel that they are all citizens of one State.

Sir, many of our friends have suggested that much of our wealth is hidden unexplored and unexploited. The Government should as early as possible conduct the mineral survey of the State so that it would be easy for the Government to exploit the wealth, so that the State will be economically self-sufficient in the future and it will be able to maintain the economic stability.

Sir, I must also state that State revenues ought to be equitably distributed throughout the State districtwise. There ought to be districtwise break up in respect of the several items of expenditure of the different departments as far as possible except in the case of minor items. For instance, in the P.W. Department, this principle has not been strictly followed. The principle ought to be that all districts should be developed equally and Government should take care to see that the State revenues are equally expended in all the Districts.

With these observations I support the Budget placed before the House.

*ಶ್ರೀ ಆರ್. ಸಿ. ಪಾಟೀಲ್ (ಶಿಗ್ಗಾನ್).—ಅಧ್ಯಕ್ಷ ಮಹಾಶಯರೇ, ಈಗ ಈ 1958-59ನೆಯ ಸಾಲಿನ ಉಳಿತಾಯದ ಬಜೆಟ್ಟನ್ನು ಸ್ವಾಗತ ಮಾಡುತ್ತಾ ಕೆಲವು ಸೂಚನೆಗಳನ್ನು ಇಡ ಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ, ಹಳ್ಳಿಯ ಜನರಿಗೆ ತಮ್ಮ ಮನೆಕಟ್ಟುವ ಸಲುವಾಗಿ ಜಾಗದ ಅವಶ್ಯಕತೆ ಬಹಳವಿರುತ್ತದೆ. ಆ ಅವಶ್ಯಕತೆ ಪ್ರತಿಯೊಂದು ಹಳ್ಳಿಯಲ್ಲಿಯೂ ಕಂಡುಬರುತ್ತದೆ. ರೆವಿನ್ಯು ಡಿಪಾರ್ಟ್‌ಮೆಂಟಿಗೆ ಇದರ ಸಲುವಾಗಿ ಎಷ್ಟು ಅರ್ಜಿಗಳನ್ನು

(ಶ್ರೀ ಆರ್. ಸಿ. ಪಾಟೀಲ್)

ಹಾಕಿದರೂ ಎಷ್ಟು ವರ್ಷಗಳ ಕಾಲವಾದರೂ ಅವು ನಿರ್ಣಯವಾಗದೆ ಹೋಗುತ್ತವೆ. ನಮ್ಮ ಕಾನ್ಸ್ಟಿಟ್ಯುಯನ್ಸಿಯಲ್ಲಿ ಪ್ರತಿಯೊಂದು ಕಡೆಯೂ ಈ ತರಹದ ದೂರು ಕೇಳಿಬರುತ್ತಾ ಇದೆ. ಒಂದು ಉದಾಹರಣೆ ಇಡಬಯಸುತ್ತೇನೆ. ಬಿಜಾಪುರ ತಾಲ್ಲೂಕಿನಲ್ಲಿ ಕಂಗನ್ ಎಂಬ ಗ್ರಾಮವಿದೆ, ಅಲ್ಲಿ ಐದಾರು ವರ್ಷಗಳಾದರೂ, ತಮಗೆ ಮನೆ ಕಟ್ಟುವುದಕ್ಕೋಸ್ಕರ ಜಾಗದ ಸಲುವಾಗಿ ಅರ್ಜಿ ಕೊಟ್ಟರು, ಜಾಗ ಕೊಡಲಿಲ್ಲವೆಂದು ಅಪೀಲು ಕೊಟ್ಟರು. ಅದಕ್ಕೆ ಉತ್ತರವಾಗಿ, ನೀವು ಇಷ್ಟು ರೊಕ್ಕ ಜಮಾ ಮಾಡಿ ಎಂದು ನೋಟೀಸ್ ಕೊಟ್ಟರು. ಜನಗಳು ಹಣ ಜಮಾ ಮಾಡಿದರು. ಇಲ್ಲಿಯವರೆಗೂ ಭೂಮಿ ಸಿಕ್ಕಲಿಲ್ಲ. ಈಗ ಈ ಕೇಸ್ ನಿಕಾಲ್ ಮಾಡಿಬಿಟ್ಟಿದ್ದಾರೆ. ಈಗ ಕೇಳಿದರೆ ಜಾಗದ ಅವಶ್ಯಕತೆ ಇಲ್ಲ ಎಂದು ಉತ್ತರ ಬರೆಯುತ್ತಾರೆ. ಹಾಗಿದ್ದ ಪಕ್ಷದಲ್ಲಿ ರೈತರಿಂದ ದುಡ್ಡನ್ನು ಏಕೆ ಜಮಾ ಮಾಡಿಸಿಕೊಂಡಿರಿ, ನೋಟೀಸು ಏಕೆ ಕೊಟ್ಟಿರಿ ಎಂದು ಕೇಳಿದರೆ, ನಿಮ್ಮ ಹಣವನ್ನು ವಾಪಸು ತೆಗೆದುಕೊಳ್ಳಿ ಎಂದು ರೈತರಿಗೆ ಬರೆಯುತ್ತಾರೆ. ಭೂಮಾಲೀಕರಿಂದ ರೆವಿನ್ಯೂ ಡಿಪಾರ್ಟಮೆಂಟಿನವರು ಲಂಚ ತೆಗೆದುಕೊಂಡು ರೈತರ ಅವಶ್ಯಕತೆಯನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಇದರ ಕಡೆ ಯೋಗ್ಯ ಲಕ್ಷ್ಯ ಕೊಟ್ಟು, ಸರ್ಕಾರದವರು ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರಿಗೆ ತಿಳಿಸಬಯಸುತ್ತೇನೆ.

ಒಕ್ಕಲುತನದ ವಿಷಯದಲ್ಲಿ ಕೆಲವು ಲೋಪದೋಷಗಳನ್ನು ನಾವು ಕಣ್ಣಾರೆ ಕಂಡಿದ್ದೇವೆ. ಸರ್ಕಾರದ ಕಡೆಯಿಂದ ಬೀಜ, ಗೊಬ್ಬರ ಮತ್ತು ಅಮೋನಿಯಮ್ ಸಲ್‌ಫೇಟ್ ರೈತರ ಸಲುವಾಗಿ ಕೊಡುತ್ತಾರೆ. ಕೆಲವು ಫೀಲ್ಡ್‌ಮೆನ್ನರು ಮತ್ತಿತರು ಸೇರಿಕೊಂಡು ಸುಳ್ಳು ಬೆಟ್ಟುಗುರ್ತು ಒತ್ತಿಸಿ, ರೈತರ ಹೆಸರಿನಮೇಲೆ, ಗೊಬ್ಬರವನ್ನು ತೆಗೆದುಕೊಂಡು ಮಾರಾಟ ಮಾಡಿಕೊಳ್ಳುತ್ತಾರೆ. ಗುಲ್ಬರ್ಗ ತಾಲ್ಲೂಕಿನವರು ಮಾನ್ಯ ಮಂತ್ರಿಗಳಿಗೆ ಫಿರ್ಯಾದು ಕಳುಹಿಸಿಕೊಟ್ಟಿದ್ದಾರೆ. ತನಿಖೆಮಾಡಿ ಕೆಲವು ಫೀಲ್ಡ್‌ಮೆನ್ನರನ್ನು ಸಸ್‌ಪೆನ್‌ಷನ್ ಮಾಡಿದ್ದಾರೆ. ಇದಕ್ಕೆ ಬಣ ಫೀಲ್ಡ್‌ಮೆನ್ನರೇ ಕಾರಣರಲ್ಲ. ಮೇಲಿನ ಆಫೀಸರುಗಳೂ, ಅಂದರೆ ತಾಲ್ಲೂಕು ಆಫೀಸರು, ಡಿಸ್ಟ್ರಿಕ್ಟು ಆಫೀಸರು, ಇವರು ಎಲ್ಲಾ ಸೇರಿಕೊಂಡಿದ್ದಾರೆ. ಈ ಪ್ರಕಾರವಾಗಿ ಒಕ್ಕಲುತನವಾಯಿತೆಂದರೆ, ಇಂಥ ಪಂಚವಾರ್ಷಿಕ ಯೋಜನೆಗಳನ್ನು ಎಷ್ಟು ಮಾಡಿದರೂ, ಅವುಗಳಿಂದ ದೇಶದ ಸುಧಾರಣೆಯಾಗುವುದು ಕಷ್ಟ. ಬೇಲಿಯೇ ಎದ್ದು ಹೊಲ ಮೇದರೆ, ಹೊಲ ಗೇಯುವವನ ಸುಧಾರಣೆಯಾಗುತ್ತದೆಯೇ? ಈ ವಿಚಾರದಲ್ಲಿ ಲಕ್ಷ್ಯ ಕೊಟ್ಟು, ರೈತರಿಗೆ ಇನ್ನುಮುಂದೆ ಈ ತರಹದ ತೊಂದರೆಯಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಅಮೋನಿಯಮ್ ಸಲ್‌ಫೇಟ್ ಗೊಬ್ಬರವನ್ನು ತೆಗೆದುಕೊಂಡು, ಅದರೊಳಗೆ ಉಪ್ಪು ಕಲಸಿ ಲಾಭಕ್ಕೆ ಡಿಸ್ಟ್ರಿಬ್ಯೂಟ್ ಮಾಡುತ್ತಾರೆ. ಅದರಿಂದ ರೈತರಿಗೆ ಏನೂ ಪ್ರಯೋಜನವಾಗುವುದಿಲ್ಲ. ಇಂಥ ದೂರುಗಳು ಎಷ್ಟೋ ಬಂದಿವೆ. ಈ ಎಲ್ಲಾ ಕಡೆಗೂ ಯೋಗ್ಯ ಲಕ್ಷ್ಯ ಕೊಡುತ್ತೀರೆಂದು ಆಶೆ ಮಾಡುತ್ತೇನೆ.

ಒಕ್ಕಲಿನ ಅಭಿವೃದ್ಧಿಗಾಗಿ lift irrigationನ ಅವಶ್ಯಕತೆ ಬಹಳವಿದೆ. ನಮ್ಮ ಹೈದರಾಬಾದ್ ಕರ್ಣಾಟಕದಲ್ಲಿ ನೀರಿನ ಅಭಾವ ಜಾಸ್ತಿ ಇರುವುದರಿಂದ ಇದಕ್ಕೆ ಜಾಸ್ತಿ ಲಕ್ಷ್ಯ ಕೊಡಬೇಕು. ಇನ್ನು ಮುಂದಾದರೂ ಸಣ್ಣಸಣ್ಣ ಅಣೆಕಟ್ಟುಗಳನ್ನು ಕಟ್ಟಿಸಿ, ಮೈನರ್ ಇರಿಗೇಷನ್ ಅನುಕೂಲಮಾಡಿ ಕೊಡಬೇಕೆಂದು ಒಕ್ಕಲುತನದ ಮಂತ್ರಿಗಳಲ್ಲೂ ಮತ್ತು ಪಿ. ಡಬ್ಲ್ಯು. ಡಿ. ಮಂತ್ರಿಗಳಲ್ಲೂ ಕೇಳಿಕೊಳ್ಳುತ್ತೇನೆ.

ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ನಮ್ಮಲ್ಲಿ ಕಮ್ಯೂನಿಟಿ ಡೆವಲಪ್‌ಮೆಂಟಿನ ಎಷ್ಟೋ ಕಾರ್ಯಗಳು ನಡೆದಿವೆ. ಆದರೆ ಟೆಕ್ನಿಕಲ್ ಸ್ಯಾಂಕ್ಷನ್ ಸಲುವಾಗಿ ಎಷ್ಟೋ ರಸ್ತೆಗಳು ಹಾಗೆಯೇ ಬಿದ್ದಿವೆ. ಗುಲ್ಬರ್ಗ ತಾಲ್ಲೂಕಿನಲ್ಲಿ ಮೂರು ನಾಲ್ಕು ರಸ್ತೆಗಳು ರಾಯಚೂರ್‌ವರೆಗೆ ಬಂದು ಟೆಕ್ನಿಕಲ್ ಸ್ಯಾಂಕ್ಷನ್‌ಗೋಸ್ಕರ ಮುಂದುವರಿಯದೆ ಅಲ್ಲೇ ಉಳಿದಿವೆ. ಟೆಕ್ನಿಕಲ್ ಸ್ಯಾಂಕ್ಷನ್ ವರ್ಷಾವಧಿ ನೋಡುವುದೆಂದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಮೇಲಿನ ಅಧಿಕಾರಿಗಳು ಸ್ಯಾಂಕ್ಷನ್‌ಗೆ ಕಳುಹಿಸಿಯೇ ಕಳುಹಿಸುತ್ತಾರೆ. ಕಮಿಟಿ ಮೀಟಿಂಗ್‌ಗಳಲ್ಲಿ ನಾವು ಯಾವಾಗಲೂ ಈ ವಿಷಯಕ್ಕೆ ಲಕ್ಷ್ಯ ಕೊಡುತ್ತೇವೆ; ಆದರೆ ಟೆಕ್ನಿಕಲ್ ಸ್ಯಾಂಕ್ಷನ್ ಬಂದಿಲ್ಲ; ಬೇಕು ಎಂದು ಹೇಳಿಬಿಡುತ್ತಾರೆ. ಈ ಟೆಕ್ನಿಕಲ್ ಸ್ಯಾಂಕ್ಷನ್ ಕೊಡುವುದಕ್ಕೆ ಹೆಚ್ಚುವೇಳೆ ತೆಗೆದುಕೊಳ್ಳದಹಾಗೆ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಿಗೆ ತಿಳಿಯ ಬಯಸುತ್ತೇನೆ.

ಆರೋಗ್ಯ ಇಲಾಖೆಯ ವಿಷಯದಲ್ಲಿ ಎರಡು ಮಾತುಗಳನ್ನು ತಿಳಿಸಬಯಸುತ್ತೇನೆ. ನಮ್ಮ ಹೈದರಾಬಾದ್ ಕರ್ಣಾಟಕದಲ್ಲಿ ಹೆಚ್ಚು ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳಿವೆ. ಇಂಟಿಗ್ರೇಷನ್ ಆದಮೇಲೆ ಆ ಆಸ್ಪತ್ರೆಗಳಲ್ಲಿ ಔಷಧಿಗಳಿಗೆ ಬಂದವರಿಗೆ, ನಮ್ಮ ಸರ್ಕಾರದವರು ಇನ್ನೂ ಔಷಧಿಗಳನ್ನೂ ಒದಗಿಸಿಲ್ಲ. ಶುಂಠಿ ಕಷಾಯವನ್ನು ಕುಡಿಯಿರಿ, ಎಂದು ಉತ್ತರ ಹೇಳಿದ್ದಾರೆ. ಒಂದು ಆಶ್ಚರ್ಯದ ಸಂಗತಿ ಯೆಂದರೆ ಆಯುರ್ವೇದ ಆಸ್ಪತ್ರೆಗೆ ವರ್ಷಕ್ಕೆ ಔಷಧಿಗಾಗಿ ಇರುವ ಸ್ಯಾಂಕ್ಷನ್ ಆದ ಹಣ 400 ರೂಪಾಯಿ, ಡಾಕ್ಟರಿಗೆ ತಿಂಗಳ ಪಗಾರ 230 ರೂಪಾಯಿ ಇದೆ. ಇದು ನೋಡಿದರೆ ಈ ಆಸ್ಪತ್ರೆಗಳು ಡಾಕ್ಟರ ಸಲುವಾಗಿಯೇ ಇವೆಯೇ, ಅಥವ ರೈತರ ಸಲುವಾಗಿಯೇ ಇವೆಯೇ ಎನ್ನುವುದು ತಿಳಿಯದೆ ಹೋಗಿದೆ. ಬೊಂಬಾಯಿ ಪ್ರಾಂತದಲ್ಲಿ ಎಸ್. ಎಲ್. ಪಿ. ಸೆಂಟರುಗಳು ಎಂದು ಇವೆ. ಅವು ಜನಗಳಿಗೆ ಲಾಭದಾಯಕವಾಗಿ ಕಂಡುಬಂದಿವೆ; ಚಲೋ ಆಲೋಪೆತಿಕ್ ಡಾಕ್ಟರು ಅವುಗಳಲ್ಲಿ ಇರುತ್ತಾರೆ. ನಮ್ಮ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳನ್ನು ಆ ರೀತಿಯಾಗಿ ಚಲೋ ವ್ಯವಸ್ಥೆ ಮಾಡಿದರೆ ಅಡ್ಡಿ ಇಲ್ಲ. ಇಲ್ಲದೆ ಹೋದರೆ, ಅವುಗಳನ್ನು ಹಾಗೆ ಇಡುವುದರ ಬದಲು, ತೆಗೆದುಹಾಕಿ, ಎಸ್. ಎಲ್. ಪಿ. ಸೆಂಟರುಗಳಾಗಿ ಪರಿವರ್ತನೆ ಮಾಡಿದರೆ ಜನರಿಗೆ ಸಹಾಯವಾಗುತ್ತದೆ.

ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಸಹಕಾರ ಸಂಘಗಳ ವ್ಯಾಪ್ತಿ ಎಲ್ಲಾ ಹಳ್ಳಿಗಳಲ್ಲೂ ಆಗಬೇಕೆಂಬ ಸ್ಕೀಮ್ ಇದೆ. ಈ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟೋ large societies ಮತ್ತು small societies, ಆರು ಆರು ತಿಂಗಳಿಂದ ರಿಜಿಸ್ಟ್ರೇಷನ್ ಆಗಿಲ್ಲ.

5-30 P.M.

ಎಂದರೆ, ಒಂದು ಸಣ್ಣ ಪುಟ್ಟ ರೀತಿಯೊಳಗೆ ಕೆಲಸ ಆಗದಿದ್ದರೆ ಲೋನ್ ಡಿಸ್ಟ್ರಿಬ್ಯೂಷನ್ ಏನು ಆಗುತ್ತದೆ ಎಂಬುದು ನನಗೆ ತಿಳಿಯದಾಗಿದೆ. ಈ ಪ್ರಕಾರ ಆಗಿರುವುದರಿಂದಲೇ ಈ ಡಿಪಾರ್ಟ್‌ಮೆಂಟಿನಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಟಾರ್ಜೆಟ್ ಹೇಗೆ ಮುಟ್ಟುತ್ತಾರೆ ಎಂಬುದು ನನಗೆ ಸಂಶಯವಾಗಿದೆ. ಇದರ ಸಲುವಾಗಿ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿಗೆ ಹೆಚ್ಚು ಲಕ್ಷ್ಯ ಕೊಟ್ಟು ಅಲ್ಲಿ ಸರಿಯಾದ

ಸೌಕರ್ಯ ಒದಗಿಸಿ ಕೊಡಬೇಕು. ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನಲ್ಲಿ ಮೂಲಭೂತ ಸುಧಾರಣೆಗಳು ಆಗಬೇಕು ಎಂದು ಹೇಳುತ್ತೇನೆ. ಡಿಪಾರ್ಟ್‌ಮೆಂಟಿನವರು ಲೋನ್ ಡಿಸ್ಟ್ರಿಬ್ಯೂಟ್ ಸರಿಯಾಗಿ ಮಾಡಬೇಕು ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಎರಡನೆಯದು ಶಿಕ್ಷಣ. ನಮ್ಮಲ್ಲಿ ಎಷ್ಟೋ ಹಳ್ಳಿಗಳಲ್ಲಿ ಕಂಪಲ್‌ಸರಿ ಶಿಕ್ಷಣ ಬಂದಿದೆ. ಕಂಪಲ್‌ಸರಿ ಎಜುಕೇಷನ್ ನಿಮಿತ್ತಮಾತ್ರ ಜಾರಿಯಲ್ಲಿದೆಯೇ ಹೊರತು ಅದರಿಂದ ಏನೂ ಉಪಯೋಗವಿಲ್ಲ. ಆರು ವರ್ಷಗಳಿಂದ ಹಿಡಿದು ಹದಿನಾಲ್ಕು ವರ್ಷಗಳವರೆಗೆ ಇರುವ ಹುಡುಗರು ಶಾಲೆಗಳಿಗೆ ಬರಬೇಕೆಂಬ ನಿಯಮ ಇದೆ. ತಂದೆ ತಾಯಂದಿರು ಅಷ್ಟು ವಯಸ್ಸಿನೊಳಗಿರುವ ಹುಡುಗರನ್ನು ತಮ್ಮಲ್ಲಿ ದುಡಿಯುವುದಕ್ಕೆ ಇಟ್ಟುಕೊಂಡರೆ ಕಾಯಿದೆ ಪ್ರಕಾರ ಅವರಿಗೆ ಶಿಕ್ಷೆ ಮಾಡಬಹುದು ಎಂದು ಇದೆ. ಇಲ್ಲಿಯವರೆಗೆ ಅವರ ಮೇಲೆ ಹಾಗೆ ಶಿಕ್ಷೆ ಮಾಡಿದಹಾಗೆ ಇಲ್ಲ. ಹುಡುಗರನ್ನು ಶಾಲೆಗೆ ಕಳುಹಿಸದೆ ಇದ್ದ ತಂದೆ ತಾಯಂದಿರ ಮೇಲೆ ಕಾನೂನಿನ ಪ್ರಕಾರ ಶಿಕ್ಷೆ ಮಾಡಿದ್ದೇ ಆದರೆ ಈ ರೀತಿ ಕಂಪಲ್‌ಸರಿ ನಿಯಮವಿದೆ ಎಂದು ಜನರಿಗೆ ಎನ್ನಿಸಿ ಹೆಚ್ಚು ಹುಡುಗರನ್ನು ಅವರು ಶಾಲೆಗೆ ಕಳುಹಿಸಬಹುದು ಎಂದು ನಮಗೆ ಆಶೆ ಇದೆ. ನಮಗೆ ಮೊದಲಿಗಿಂತ ಹುಡುಗರು ಕಡಮೆ ಬರುವುದಕ್ಕೆ ಹತ್ತಿದೆ. ತತ್ರ್ಯಶಃ ಕಂಪಲ್ಸರಿ ಎಜುಕೇಷನ್ ಕಮಿಟಿ ಇದೆ. ಎಷ್ಟೋ ಇನ್‌ಸ್ಪೆಕ್ಟರ್ಸ್ ಇದ್ದಾರೆ. ಶಾಲೆಗೆ ಕಳುಹಿಸದೆ ಇದ್ದವರಿಗೆ ದೊಡ್ಡ ಶಿಕ್ಷೆ ಏನೂ ಮಾಡಬೇಕಾಗಿಲ್ಲ. ಹತ್ತು ರೂಪಾಯಿ ಫೈನ್ ಮಾಡಿ, ಎಲ್ಲರ ಮನಸ್ಸನ್ನು ಪರಿವರ್ತನೆಮಾಡಿ. ನಾವು ಮನಸ್ಸು ಪರಿವರ್ತನೆ ಮಾಡಿ ಎಂದು ಹೇಳಿದರೆ ಅದಕ್ಕೆ ಅವರು ಲಕ್ಷ್ಯ ಕೊಡುದಿಲ್ಲ. ಆದ್ದರಿಂದ ಕಂಪಲ್ಸರಿ ಎಜುಕೇಷನ್ ಕಾನೂನನ್ನು ಹೆಚ್ಚು ಅನುಸರಿಸಬೇಕು ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಈಗ ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಎಂದು ಪ್ರತಿಯೊಂದು ತಾಲ್ಲೂಕಿಗೂ ಒಬ್ಬರು ಇದ್ದಾರೆ. ಪ್ರತಿಯೊಂದು ಹಳ್ಳಿಗೂ ರೋಡು ಕನ್‌ವೀನಿಯನ್ಸ್ ನಮ್ಮ ಕಡೆ ಇಲ್ಲದೆ ಇರುವುದರಿಂದ, ಡೆಪ್ಯುಟಿ ಇನ್‌ಸ್ಪೆಕ್ಟರ್ ಅವರು ಸ್ಕೂಲನ್ನು ವರ್ಷಕ್ಕೆ ಒಂದುಸಾರಿಯಾದರೂ ನಿರೀಕ್ಷಣೆ ಮಾಡುತ್ತಾರೋ ಇಲ್ಲವೋ ಎಂದು ನನಗನ್ನಿಸುತ್ತದೆ. ಅದರ ಸಲುವಾಗಿ ಒಂದು ಸರ್ಕಲ್‌ಗೆ ಒಬ್ಬ ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲನ್ನು ಮಾಡಿದರೆ, ಅವರಿಂದ ಹೆಚ್ಚು ಕೆಲಸ ನಿರೀಕ್ಷಣೆಮಾಡುವುದಕ್ಕೆ ಅನುಕೂಲವಾಗುತ್ತದೆ. ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಒಂದೊಂದು ಡಿಸ್ಟ್ರಿಕ್ಟಿಗೆ ಒಬ್ಬರು ಇರುತ್ತಾರೆ. ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಸಾಧಾರಣವಾಗಿ 1,500 ರಿಂದ 2,000 ವರೆಗೆ ಸುತ್ತಮುತ್ತ ಶಾಲೆಗಳಿರುತ್ತವೆ. ಅವರಿಗೆ ಹೋಗಿ ಬರಲಿಕ್ಕೆ ಯಾವುದೂ ಕನ್‌ವೇಯನ್ಸ್ ಇಲ್ಲ ಒಂದು ಜೀಪ್ ವ್ಯವಸ್ಥೆಯನ್ನು ಪ್ರತಿಯೊಬ್ಬ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಅವರಿಗೆ ಮಾಡಿಕೊಟ್ಟರೆ ಅವರು ಸ್ಕೂಲುಗಳನ್ನು ನಿರೀಕ್ಷಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಳ್ಳಿಗಳ ಕಡೆ ಜೀಪ್ ಇಲ್ಲದೆ ಅಲ್ಲಿಗೆ ಹೋಗುವುದು ಸಾಧ್ಯವಿಲ್ಲ. ಇದು ಬಹಳ ಅವಶ್ಯಕವಿದೆ ಎಂದು ನಾನು ಹೇಳುತ್ತೇನೆ. ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿಗೆ ಕೊಟ್ಟಹಾಗೆ ಈ ಡಿಪಾರ್ಟ್‌ಮೆಂಟಿಗೂ ಜೀಪ್ಸ್ ವ್ಯವಸ್ಥೆ ಮಾಡಿಕೊಟ್ಟರೆ ಒಳ್ಳೆಯದು. ಶಿಕ್ಷಣ ಮೂಲ ಇದೆ. ಅದರ ಸಲುವಾಗಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್‌ಗಳವರಿಗೆ ಒಂದು ಜೀಪ್ ಅವಶ್ಯವಾಗಿ ಸರ್ಕಾರದವರು ಒದಗಿಸಬೇಕು ಅಥವಾ ಲೋನ್ ಮುಖಾಂತರವಾಗಲಿ ಈ ಸೌಕರ್ಯವನ್ನು ಪ್ರತಿಯೊಬ್ಬ ಇನ್‌ಸ್ಪೆಕ್ಟರಿಗೂ ಕೊಟ್ಟರೆ ಅವರು ಸ್ಕೂಲುಗಳನ್ನು ಹೆಚ್ಚು ನಿರೀಕ್ಷಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಶಾಲೆಯ ಶಿಕ್ಷಕರಿಗೆ ಯಾವಾಗ ಆಫೀಸರು ಬರುತ್ತಾರೋ ಎಂದು ಭಯ ಇರುತ್ತದೆ. ಅದರಿಂದ ಎಷ್ಟೋ ಸುಧಾರಣೆ ಆಗಬಹುದು ಎಂದು ನನ್ನ ಸ್ವಂತ ಅಭಿಪ್ರಾಯ ಇದೆ. ಸರ್ಕಾರ ಈ ಕಡೆ ಲಕ್ಷ್ಯ ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಸೇಲ್ಸ್ ಟ್ಯಾಕ್ಸ್ ವಿಷಯ ಇದೆ. ಸೇಲ್ಸ್ ಟ್ಯಾಕ್ಸ್ ಸಲುವಾಗಿ ಲೈಸೆನ್ಸ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಲೈಸನ್ಸ್ ಇಲ್ಲದೆ ಹಳ್ಳಿಯಲ್ಲಿ ಒಬ್ಬ 50 ರೂಪಾಯಿ ಬಂಡವಾಳ ಹಾಕಿ ಕಿರಾಣಿ ಅಂಗಡಿಯನ್ನು ನಡೆಸಿದರೆ ಸೇಲ್ಸ್ ಟ್ಯಾಕ್ಸ್ ಆಫೀಸರ್ ಎಲ್ಲೂ ಇಲ್ಲದ ತೊಂದರೆಯನ್ನು ಕೊಡುತ್ತಾನೆ. ಮಾಮೂಲು ವಸೂಲುಮಾಡಿಕೊಂಡು ಹೋಗಿ ಟ್ಯಾಕ್ಸ್ ಹಾಕುತ್ತಾನೆ. ಮಾಮೂಲು ಕೊಡದಿದ್ದಲ್ಲಿ, ಹಿಂದಿನದು, ಮುಂದಿನದು ಸೇಲ್ಸ್ ಟ್ಯಾಕ್ಸ್‌ಗೆ ಸೇರಿಸಿ ಕಷ್ಟಕ್ಕೆ ಈಡು ಮಾಡುತ್ತಾನೆ. ಇದನ್ನು ನಾವು ಕಂಡಿದ್ದೇವೆ. ಇದರಕಡೆ ಹೆಚ್ಚು ನಿಯುಕ್ತ ಕಾನೂನುಮಾಡಿ ಹಳ್ಳಿಯೊಳಗೆ ಸಣ್ಣ ಬಂಡವಾಳದಿಂದ ಏನು ತಮ್ಮ ಉಪಜೀವನಕ್ಕೆ ಅಂಗಡಿಯೋ ಅಥವಾ ಏನೋ ಒಂದು ಕಸಬು ಮಾಡಿಕೊಂಡಿರುತ್ತಾರೋ ಅವರ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕದೇ ಇರುವುದನ್ನು ತಾವು ಯೋಚಿಸಬೇಕೆಂದು ನಾನು ತಿಳಿಸಬಯಸುತ್ತೇನೆ.

ಇನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಹೈದರಾಬಾದ್ ಕರ್ಣಾಟಕದೊಳಗೆ ಯಾವನ ಹೊಲದೊಳಗೆ ಸೇಂದಿ ಗಿಡಗಳು ಇವೆಯೋ, ಅಂಥ ಕಡೆ ಮಹಜರ್ ಕ್ರಮ ನಡೆಸಿ ಅದಕ್ಕೆ 1ರೂ. 10ಆ. ಕೊಡಬೇಕು ಎಂಬ ನಿಯಮ ಇದೆ. ಎಕ್ಸೈಜ್ ತೆಗೆಯಿರಿ ಆ ಮಾತು ಬೇರೆ. ಅದಕ್ಕೆ ನಮ್ಮದೂ ಒಪ್ಪಿಗೆ ಇದೆ. ಒಮ್ಮತದಿಂದ ತೆಗೆದುಹಾಕಿ. ಇದು ಇಲ್ಲದಿದ್ದರೆ ಎರಡನೆಯ ಪಂಚವಾರ್ಷಿಕ ಯೋಜನೆ ಆಗುವಹಾಗಿಲ್ಲ ಎಂದು ಹೇಳುವುದಾದರೆ ಸದ್ಯಕ್ಕೆ ಕಾನೂನಿನಲ್ಲಿ ಏನು ಕುಂದು ಕೊರತೆ ಇದೆಯೋ, ಅದನ್ನು ತಿಳಿಸಬಯಸುತ್ತೇನೆ. ಗೌಡ, ಕುಲಕರ್ಣಿ, ಇವರು ಅಮಲ್ದಾರರಿಗೆ ಸುಳ್ಳು ಲೆಖ್ಖ ಬರೆದು ರೈತರನ್ನು ಕಷ್ಟಕ್ಕೆ ಈಡು ಮಾಡುತ್ತಾರೆ.

ಇನ್ನು ರೂರಲ್ ಇಂಡಸ್ಟ್ರೀಸ್ ವಿಷಯ. ಈ ರೂರಲ್ ಇಂಡಸ್ಟ್ರೀಸ್ ನಮ್ಮ ಕಡೆ ಹಳ್ಳಿಗಳಲ್ಲಿ ಕೆಲವು ಪ್ರಾರಂಭವಾಗಿವೆ. N.E.S. ಬ್ಲಾಕ್‌ನೊಳಗೆ ಯೋಗ್ಯ ಆರ್ಟಿಸಾನ್ಸ್ ಇಲ್ಲ. ಅವು ಸುಮ್ಮನೆ ನಿಮಿತ್ತಕ್ಕೆ ಮಾತ್ರ ಇವೆ. ಆರ್ಟಿಸಾನ್ಸ್ ಇಲ್ಲದಕಡೆ ಇಂತಹ ಕೈಗಾರಿಕೆಗಳಿಂದ ಏನು ಉಪಯೋಗ? ಯೋಗ್ಯ ಆರ್ಟಿಸಾನ್ಸ್ ಅಲ್ಲಿ ಒದಗಿಸಿ ಕೊಡಬೇಕು. ಆಗ ಇಂತಹ ಕಾಟೇಜ್ ಇಂಡಸ್ಟ್ರೀಸ್‌ನಿಂದ ಹೆಚ್ಚು ಲಾಭವಾಗುತ್ತದೆ ಎಂದು ಹೇಳಬಯಸುತ್ತೇನೆ. ಕಾಳಗೀ ಕಾನ್‌ಸ್ಟಿಟ್ಯೂಯೆನ್ಸಿಯೊಳಗೆ ಗುಲ್ಬರ್ಗ ಜಿಲ್ಲೆಯಲ್ಲಿ ಕಾಗಣಾತ್ರಿಯಲ್ಲಿ ನಾಲೆಗಳು ಹರಿಯುತ್ತವೆ. ಈ ನಾಲೆಗಳ ಸುತ್ತಮುತ್ತ ಎಷ್ಟೋ ಹಳ್ಳಿಗಳಿವೆ. ಹಳ್ಳಿಗಳ ಕಡೆಯಲ್ಲಿ ನೀರಿನ ಅಭಾವವಿರುವುದರಿಂದ ಈ ನಾಲೆಗಳ ನೀರು ತಂದು ಕಾಲರಾ ಬ್ಯಾನೆಗೆ ತುತ್ತಾಗುತ್ತಿದ್ದಾರೆ. ಆದ್ದರಿಂದ ಅಲ್ಲಿ ಕುಡಿಯುವ ನೀರಿನ ಬಾವಿಗಳ ವ್ಯವಸ್ಥೆ ಮಾಡಬೇಕು. ನನಗೆ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ಆಭಾರಿಯಾಗಿದ್ದೇನೆ.

ಶ್ರೀ ಜಿ. ವೆಂಕಟಪ್ಪ (ಸಿಡ್ಲಘಟ್ಟ).—ಅಧ್ಯಕ್ಷ ಮಹಾಶಯರೇ, ನಮ್ಮ ಮುಂದೆ ಪರಿಶೀಲನೆಗಾಗಿ ಮಂಡಿಸಿರುವ 1958-59 ನೆಯ ಸಾಲಿನ ಆಯವ್ಯಯ ಪಟ್ಟಿ ಕೇಂದ್ರದಿಂದ ಬಂದಿರುವ ಒಂದು ಆದೇಶದ ಪ್ರಕಾರ ಮತ್ತು ಫೈನಾನ್ಸ್ ಕಮೀಷನ್‌ನವರ ಅಭಿಪ್ರಾಯವನ್ನನುಸರಿಸಿ ತಯಾರುಮಾಡಲ್ಪಟ್ಟಿರುವ ಅನೇಕ ಲೋಪದೋಷಗಳಿಂದ ಕೂಡಿರತಕ್ಕ ಆಯವ್ಯಯದ ಅಂದಾಜಾಗಿದೆ. ನಿಜವಾಗಿಯೂ ಇದು ಕೇವಲ ಕಾಲ್ಪನಿಕ. ಅವಶ್ಯಕತೆಯಿರತಕ್ಕ ಬಾಬುಗಳಿಗೆ ನ್ಯಾಜ ರೀತಿಯಲ್ಲಿ ಹಣ ಹಂಚಿಕೆಯಾಗಬೇಕಾದ ಪ್ರಮಾಣದಲ್ಲಿ ಹಂಚಿಕೆಯಾಗಿಲ್ಲ. ಹಾಗೂ ಸಕಾಲದಲ್ಲಿ ಮಳೆ ಇಲ್ಲದೆ ಬೆಳೆಗಳು ನಷ್ಟಹೊಂದಿರುವಾಗ ಅನೇಕ ಅಭಾವ ಪ್ರದೇಶಗಳಿಗೆ ಅವಶ್ಯಕತೆಗಳಿಗನುಗುಣವಾಗಿ, ಅಲ್ಲಿನ ವಿಶಿಷ್ಟ ಕಾರಣಗಳನ್ನನುಸರಿಸಿ ಹಣ ಹಂಚಲ್ಪಟ್ಟಿಲ್ಲ. ಈ ಲೋಪದೋಷಗಳಿಂದ ನಮ್ಮ ಆಯವ್ಯಯ ಪಟ್ಟಿ ಕೂಡಿದೆ. ಹಾಗೆಯೇ ಅದರ ಉತ್ಪನ್ನದ ಭಾಗದಲ್ಲಿ ಹಾಕಿಕೊಂಡಿರತಕ್ಕ ಅಂದಾಜೂ ಸಹ ಉತ್ಪ್ರೇಕ್ಷಕರವಾದುದಾಗಿದೆ. ಅವರ ರೆವಿನ್ಯೂ ಬಾಬಿನಿಂದ ಸಾಧಾರಣವಾಗಿ ವರ್ಷೇ ವರ್ಷೇ ಬರುತ್ತಾಯಿರುವಂಥ ಉತ್ಪನ್ನದಲ್ಲಿ ಈ ವರ್ಷದ ಅಂಕಿ ಅಂಶಗಳಲ್ಲಿ ಬಹಳ ಅಂತರವಿದೆ. ಈ ಒಂದು ಉತ್ಪ್ರೇಕ್ಷಕರವಾದ, ಬಹಳ ಉತ್ಪ್ರೇಕ್ಷೆಯಿಂದ ಕೂಡಿದ ಬಾಬುಗಳನ್ನು ತೋರಿಸಿ ಅಲ್ಪ ಉಳಿತಾಯದ ಬಡ್ಜೆಟ್ಟನ್ನು ನಮ್ಮ ಮುಂದೆ ಅಂಗೀಕಾರ ಮಾಡಲಿಕ್ಕೆ ಇಟ್ಟಿದ್ದೀರಿ. ಇವರ ಆಡಳಿತದಿಂದಾಗಿ ದೇಶದಲ್ಲಿ ಸಾಧಾರಣ ಹಾಗೂ ಕೆಳಮಟ್ಟದ ಕೂಲಿಗಾರರಿಗೆ ನಂಬಿಕೆ ಇಲ್ಲ ಎಂದು ತೋರಿಸಿಕೊಳ್ಳಲು 1957 ರಲ್ಲಿ ಹಾಕಿಕೊಂಡಿರತಕ್ಕ ಸಣ್ಣ ಉಳಿತಾಯದ ಯೋಜನೆ ಒಂದೇ ಸಾಕಾಗಿದೆ. ರಾಜಪ್ರಮುಖರ ಭಾಷಣದಲ್ಲಿ ಸಾಲಕ್ಕೆ ಮೂರು ಕೋಟಿ ರೂಪಾಯಿಗಿಂತಲೂ ಹೆಚ್ಚಿನ ಹಣ ಜನತೆಯಿಂದ ಬಂತು ಎಂದು ಹೇಳಿದ್ದಾರೆ. ಇದು ಬಂದಿರುವುದು ಯಾರಿಂದ? ಧನಿಕರಿಂದ, ಸಾಹುಕಾರರಿಂದ, ಬ್ಯಾಂಕುಗಳಿಂದ ಬಂದಿದೆ. ಪರ್ಸೆಂಟೇಜ್ ತೆಗೆದುಕೊಳ್ಳಿ. ಮೂರುಕೋಟಿ ರೂಪಾಯಿ ಸಾಲಕ್ಕೆ ಸಾಮಾನ್ಯ ಜನ ಎಷ್ಟು ಜನ ಕೊಟ್ಟಿದ್ದಾರೆ? ಸಣ್ಣ ಉಳಿತಾಯದ ಈ ಯೋಜನೆ ಖಂಡಿತವಾಗಿಯೂ ಯಶಸ್ವಿಯಾಗಬೇಕಾದರೆ ಕೂಲಿಗಾರರ, ಮಧ್ಯಮವರ್ಗದವರ ಉತ್ತೇಜನ, ಸಹಕಾರ ನಿಮಗೆ ಬೇಕು. ಅವರ ಸಹಕಾರವಿಲ್ಲದೆ ನಿಮ್ಮ ಸಣ್ಣ ಉಳಿತಾಯ ಯೋಜನೆಗೆ ನಾಲ್ಕು ಕೋಟಿ ರೂಪಾಯಿಗಳನ್ನು ಖಂಡಿತ ಗಳಿಸಲಾರಿರಿ. ಹೋದ ವರ್ಷದ ಒಂದು ಪ್ರಯತ್ನದಿಂದ ಬಂದಿರುವುದು 110.29 ಲಕ್ಷ ರೂಪಾಯಿಗಳು. ಇನ್ನು ಉಳಿದ ಹಣವನ್ನು ಮೂರು ವರ್ಷಗಳೊಳಗಾಗಿ ಖಂಡಿತವಾಗಿಯೂ ಗಳಿಸಲಾರಿರಿ. ಹಿಂದೆ ನಾನು ಹೇಳಿದ ಹಾಗೆ ಸರ್ಕಾರದಲ್ಲಿ ಜನತೆಗೆ ಎಷ್ಟುಮಟ್ಟಿನ ನಂಬಿಕೆ ಇದೆ ಎಂಬುದನ್ನು ತೋರಿಸಲಿಕ್ಕೆ ಇದು ಒಂದೇ ಸಾಕು. ಹೀಗೆಯೇ ರೆವಿನ್ಯೂ ಇಲಾಖೆಯಲ್ಲಿ ಒಂದೆರಡು ನಿದರ್ಶನಗಳಿಂದ ದಕ್ಷತೆ ಹೇಗೆ ಕುಂದಿದೆ ಎಂಬುದನ್ನು ತೋರಿಸುತ್ತೇನೆ. ಒಂದು ವರ್ಷದ ಹಿಂದೆ ಶಿಡ್ಲಘಟ್ಟ ತಾಲ್ಲೂಕು ಅಪ್ಪೇಗೌಡನಹಳ್ಳಿಯ ಒಬ್ಬ ರೈತ ಸರ್ಕಾರದಿಂದ ಎಂಟು ನೂರು ರೂಪಾಯಿ ಕೊಟ್ಟು 1½ ಎಕರೆ ಜಮೀನನ್ನು ತನ್ನ ಸುಪರ್ದಿಗೆ ತೆಗೆದುಕೊಂಡ. ಆ ಜಮೀನಿನಲ್ಲಿ ಬಾವಿ ತೆಗೆಸಿ ಹೆಚ್ಚಿನ ವ್ಯವಸಾಯ ಮಾಡತಕ್ಕ ಶಕ್ತಿಯನ್ನು ಪಡೆದುಕೊಳ್ಳಲಿಕ್ಕೆ ಇದುವರೆಗೂ ಕೂಡ ಅವನಿಗೆ ಅವಕಾಶ ಮಾಡಿಕೊಟ್ಟಿಲ್ಲ.

ಹೀಗೆಯೇ ವ್ಯವಸಾಯ, ಹಾಗೂ ಅರಣ್ಯ ಇಲಾಖೆಗೆ ಬಂದರೆ, ಅರಣ್ಯ ಸಂಪತ್ತಿನಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಖಂಡಿತವಾಗಿಯೂ ಬರಬೇಕಾದ ಮೊಬಲಗು ಬರುತ್ತಿಲ್ಲ. ಬಹಳ ಉತ್ತಮ ಬೆಳೆಯಾದ ಶ್ರೀಗಂಧದ ಚೆಕ್ಕೆ ಎಷ್ಟುಮಟ್ಟಿಗೆ ಕಳ್ಳತನದಿಂದ ಸಾಗುತ್ತಾ ಇದೆ ಎಂಬುದಕ್ಕೆ ಅನೇಕ ನಿದರ್ಶನಗಳು ನಿಮ್ಮ ಮುಂದೆ ಇದೆ. ಒಂದು ಸುವ್ಯವಸ್ಥಿತವಾದ ಸರ್ಕಾರ ಇಲ್ಲದೆ ಅರಣ್ಯ ಶಾಖೆಯಲ್ಲಿ ಲೋಪ ದೋಷಗಳಿದ್ದು, ಬಹು ಅಮೂಲ್ಯವಾದ ವಸ್ತು ಪರದೇಶಕ್ಕೆ ಸಾಗಿಹೋಗುತ್ತಾ ಇದೆ.

ಸುಮಾರು ಒಂದೂವರೆ ಕೋಟಿ ಜನ ನಿರತರಾಗಿ ತಕ್ಕ ವ್ಯವಸಾಯದ ಇಲಾಖೆಗೆ ಕೇವಲ ಎರಡು ಕೋಟಿ ರೂಪಾಯಿ ಒದಗಿಸಿರುವುದು ನೋಡಿದರೆ ಎಷ್ಟು ಮಟ್ಟಿಗೆ ಹೀನಸ್ಥಿತಿಯಲ್ಲಿರುವ ರೈತರಿಗೆ ಸಕಾಲದಲ್ಲಿ ಬಿತ್ತನೆ, ಗೊಬ್ಬರ ಒದಗಿಸುತ್ತೀರಿ ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಕೇವಲ ಇವತ್ತಿನ ದಿವಸ ವ್ಯವಸಾಯದ ಇಲಾಖೆಗೆ ಈ ಬಡ್ಜೆಟ್‌ನಲ್ಲಿ ಹತ್ತನೆಯ ಒಂದು ಭಾಗ ಹಣವನ್ನು ಕೂಡ ಒದಗಿಸಿಲ್ಲ. ಹೋದ ಅಧಿವೇಶನದ ಕಾಲದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ದೇಶದ ಭೂಮಿಯ ಪರಿಸ್ಥಿತಿ ಈಗೇನಿದೆ ಅದು ಸರ್ವೇ ಆಗಬೇಕು ಎಂದು ಹೇಳಿದರು. ಅವರು ಮಾಡತಕ್ಕ ರೀ ಸರ್ವೇ, ರೀಕ್ಲಾಸಿಫಿಕೇಷನ್‌ನಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಸ್ವಲ್ಪ ವ್ಯತ್ಯಸ್ತವಾಗಬಹುದೇ ಹೊರತು ಮತ್ತೇನೂ ಆಗುವುದಿಲ್ಲ. ಆದ್ದರಿಂದ ನಮ್ಮ ದೇಶದಲ್ಲಿ ಭೂ ಪರಿಸ್ಥಿತಿ ಹೇಗಿದೆ ಎಂಬುದನ್ನು ಅರಿತು ಯಾರಿಗೆ ಹಂಚಬೇಕು, ಯಾವ ರೀತಿ ಹೆಚ್ಚು ಉತ್ಪನ್ನ ಬರಲಿಕ್ಕೆ ದಾರಿ ಮಾಡಿಕೊಳ್ಳಬೇಕು ಎಂಬುದನ್ನು ಪರಿಶೀಲನೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ದೇಶದಲ್ಲಿ ಎಷ್ಟು ಭೂಮಿ ಖರಾಬು ಇದೆ, ಎಷ್ಟು ಭೂಮಿ ಅರಣ್ಯ ಇದೆ, ಎಷ್ಟು ಭೂಮಿ ಬಂಜರು ಇದೆ, ಸಾಗುವಳಿಗೆ ಉಪಯುಕ್ತವಾದ ಬಂಜರು ಎಷ್ಟು ಇದೆ ಎಂಬುದನ್ನು ಅರಿತುಕೊಳ್ಳಲಿಕ್ಕೆ ನಾವು ಸಂಪೂರ್ಣವಾಗಿ ಸರ್ವೇ ಮಾಡಿದ ಹೊರತು ಸಾಧ್ಯವಾಗುವುದಿಲ್ಲ. ಹೀಗೆಯೇ ಅನೇಕ ಭಾಗಗಳಲ್ಲಿ ಬಾಗಾಯ್ತು, ಖುಷ್ಕಿ ಹಾಗೂ ತರೀ ಜಮೀನಿನ ಅಸೆಸ್‌ಮೆಂಟಿನಲ್ಲೂ ಸಹ ನ್ಯೂನತೆ ಇದೆ. ಕೆಲವು ಭಾಗಗಳಲ್ಲಿ ಬಹಳ ಉಪಯುಕ್ತವಾದ ಭೂಮಿಗೆ ನಾಲ್ಕು ಆಣೆಯಿಂದ ಎಂಟು ಆಣೆವರೆಗೂ ತೆರಿಗೆ ಇರತಕ್ಕದ್ದು ಇದೆ. 3ನೆಯ ತರಗತಿಯ ಭೂಮಿಗೆ 5ನೆಯ ತರಗತಿಯ ಕಂದಾಯ, 5ನೆಯ ತರಗತಿಯ ಭೂಮಿಗೆ 3ನೆಯ ತರಗತಿಯ ಕಂದಾಯ ಇರುವುದೂ ಇದೆ. ಇದರಿಂದ ನಷ್ಟವಾಗುತ್ತ ಇದೆ. ಇದನ್ನು ನಿಃತೂಗಿಸಬೇಕಾದರೆ ಎಲ್ಲಾ ಭೂಮಿಯನ್ನೂ ಸರ್ವೇ ಮಾಡಿ ರೀಕ್ಲಾಸಿಫೈ ಮಾಡಬೇಕು. ಅದಕ್ಕೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಪೋಲೀಸ್ ಶಾಖೆಯ ವಿಷಯ. ನಮ್ಮ ಈ ಸಭೆಯ ಯಾವ ಸದಸ್ಯರೂ ಸಹಿತ ಈ ಪೋಲೀಸ್ ಶಾಖೆಯ ಮೇಲೆ ಮಾತನಾಡದೆ ಬಿಟ್ಟಿಲ್ಲ. ಯಾವ ಒಂದು ಜೂಜುಕಟ್ಟೆ ನೋಡಲಿ, ಯಾವ ಒಂದು ಕಳ್ಳಭಟ್ಟಿ ತಯಾರುಮಾಡತಕ್ಕ ಜಾಗ ನೋಡಲಿ ಅಲ್ಲಿ ಪೋಲೀಸ್‌ನವರು ಇರುತ್ತಾರೆ. ಅವರ ಸಹಕಾರದಿಂದಲೇ ಇವೆಲ್ಲಾ ನಡೆಯುತ್ತವೆ ಎಂದು ನಾನು ಹೇಳಿದರೆ ತಪ್ಪೇನೂ ಇಲ್ಲ. ಈ ಒಂದು ಪರಿಸ್ಥಿತಿ ದೇಶದಲ್ಲಿ ಇರುವಾಗ ಯಾವ ಒಂದು ಸುವ್ಯವಸ್ಥಿತವಾದ ಆಡಳಿತ ನಡೆಯುತ್ತದೆ? ಆದ್ದರಿಂದ ನನ್ನ ಒಂದು ಸಲಹೆ ಇಷ್ಟೇ. ಈಗ ಇರತಕ್ಕ ಪೋಲೀಸ್‌ನವರನ್ನು ಕಡ್ಡಾಯವಾಗಿ ರಿಟೈರ್ ಮಾಡಿದರೂ ಚಿಂತೆ ಇಲ್ಲ. ವಿದ್ಯಾವಂತರಾದವರನ್ನು, ನೈತಿಕ ಮಟ್ಟದಲ್ಲಿ ಮುಂದುವರಿದವರನ್ನು ನೇಮಕಮಾಡಿಕೊಂಡು ಒಂದೆರಡು ವರ್ಷ ಅವರಿಗೆ ಮಿಲಿಟರಿ ಶಿಕ್ಷಣವನ್ನು ಕೊಟ್ಟು ಅಂತಹ

ವರಿಂದ ಕೆಲಸ ಮಾಡಿಸಿಕೊಂಡರೆ ಖಂಡಿತವಾಗಿಯೂ ಪ್ರಯೋಜನವಾಗುತ್ತದೆ. ಅಂತಹವರು ನಮಗೆ ಸಿಕ್ಕುವಾಗ ಹೆಚ್ಚಾಗಿರತಕ್ಕ ಸಂಖ್ಯೆಯನ್ನು ಕಡಮೆ ಮಾಡಿ ಅವರನ್ನು ನೇಮಕ ಮಾಡಿಕೊಳ್ಳುವುದು ಒಳ್ಳೆಯದು. 100 ಜನ ಕೆಲಸಕ್ಕೆ ಬಾರದವರಿಗಿಂತಲೂ 10 ಜನ ನಿಷ್ಕರ್ಷದವರು ಸಾಕು. ಆ ರೀತಿ ಮಾಡುವುದರಿಂದ ಆಡಳಿತ ಸ್ವಲ್ಪಮಟ್ಟಿಗೆ ಸುಧಾರಿಸುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಎಕ್ಸೈಜು ಇಲಾಖೆಯ ವಿಚಾರ ನೋಡಿದರೆ ಸರ್ಕಾರದ ಪಾನ ನಿರೋಧ ನೀತಿ ಎಷ್ಟು ಮಟ್ಟಿಗೆ ಜಾರಿಗೆ ಬಂದಿದೆಯೆಂಬುದಕ್ಕೆ ದಿನದಿನವೂ ನಡೆಯುತ್ತಿರುವ ತಕ್ಸೀರುಗಳ ಉದಾಹರಣೆಯೇ ಸಾಕಾಗಿದೆ. ಇದರಿಂದ ಸರ್ಕಾರದ ನೀತಿಯ ಬಗ್ಗೆ ಎಷ್ಟೋ ಜನರಿಗೆ ಆಸಕ್ತಿ, ಪ್ರೀತಿ ಕಡಮೆಯಾಗಿದೆ, ಸರ್ಕಾರದಲ್ಲಿ ನಂಬಿಕೆ ಕಡಮೆಯಾಗಿದೆ. ಅಧಿಕಾರಿಗಳನ್ನು ಕಂಡರೆ ಜನರಿಗೆ ಭೀತಿಯಿಲ್ಲದಂತಾಗಿದೆ. ಪಾನ ನಿರೋಧ ಯಶಸ್ವಿಯಾಗಿಲ್ಲ. ಜನರಿಗೆ ಬೇಕಿಲ್ಲದ ಈ ನಿರೋಧ ನೀತಿಯನ್ನು ಆಚರಣೆಯಲ್ಲಿ ತರುವುದಕ್ಕೆ ಬದಲಾಗಿ, ದೇಶಕ್ಕೆ ಬರುವ ಆದಾಯವನ್ನು ಕಳೆದುಕೊಳ್ಳುವುದಕ್ಕೆ ಬದಲಾಗಿ ಮೊದಲು ಪಾನನಿರೋಧವನ್ನು ತೆಗೆಯುವುದು ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಮುಂದೆ ಆಡಳಿತದ ವಿಚಾರವಾಗಿ ಕೆಲವಾರು ಮಾತುಗಳನ್ನು ಹೇಳಬೇಕಾಗಿದೆ ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಕೇವಲ ಕೆಲವು ಸಾಹುಕಾರರು, ಪ್ರಭಾವಶಾಲಿಗಳು ಹಾಗೂ ರಾಜಕೀಯ ಧುರೀಣರ ಕೈಲಿ ಇಂದಿನ ಸರ್ಕಾರ ಸಿಕ್ಕಿದೆ. ಕೆಲವರು ಸ್ವಾರ್ಥಿಗಳು ಹಾಗೂ ವಂಚಕರ ಆರೋಪಣೆಗಳಿಂದ ಅನೇಕ ಯೋಗ್ಯರು ಶಿಕ್ಷೆಗೆ ಒಳಗಾಗುತ್ತಿದ್ದಾರೆ. ಸರಿಯಾಗಿ ಪರಿಶೀಲಿಸದೆ ಒಂದು ಅರ್ಜಿ, ಆರೋಪಣೆ ಬಂದ ಮಾತ್ರಕ್ಕೇ ಅದರ ಆಧಾರದ ಮೇಲೆ ಅಧಿಕಾರಿಗಳ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದು ತಪ್ಪು.

ಹೋದ ವರ್ಷ ಅಭಾವ ಪ್ರದೇಶಗಳಿಗೆ ಸ್ವಲ್ಪ ಹಣ ಕೊಡಲಾಯಿತು. ಆದರೆ ಅದು ಸದುಪಯೋಗವಾಗುವುದಕ್ಕೆ ಅವಕಾಶವಾಗಲಿಲ್ಲ. ಮಳೆ ಸಕಾಲದಲ್ಲಿ ಬರಲಿಲ್ಲ. ಇದರಿಂದ ಭೂಮಿ ಗಟ್ಟಿಯಾಗಿ ಕೆಲಸ ಪೂರ್ಣವಾಗಲಿಲ್ಲ. ಹಣ ಸಕಾಲದಲ್ಲಿ ಒದಗಲಿಲ್ಲ. ಹಣ ಲ್ಯಾಪ್ಸ್ ಆಯಿತು. ಈ ವರ್ಷ ಸಕಾಲದಲ್ಲಿ ಹಣ ಒದಗಿಸಿದರೆ ಮಳೆ ಬಂದ ನಂತರ ಬೆಳೆಯುಟ್ಟು ಅದು ಬರುವವರೆಗೆ ಬೇರೆ ಕೆಲಸಮಾಡಿ ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ಮಾಡಬೇಕೆಂದು ಸೂಚಿಸುತ್ತೇನೆ.

ರೇಷ್ಮೆ ವ್ಯವಸಾಯಕ್ಕೆ ಬಂದರೆ ಕೇಂದ್ರ ಸರ್ಕಾರದವರು ಉದಾರವಾಗಿ 43ಲಕ್ಷ ರೂಪಾಯಿಗಳನ್ನು ನಾಲ್ಕುವರ್ಷ ಕೊಟ್ಟರೂ ಕೂಡ 12ಲಕ್ಷ ರೂಪಾಯಿಗಳ ಒಂದು ರಿಸರ್ಚ್ ಇನ್‌ಸ್ಟಿಟ್ಯೂಟ್ ಕನ್‌ಸ್ಟ್ರಕ್ಟ್ ಮಾಡುವುದಕ್ಕೆ ಪ್ರಾರಂಭಿಸಿ ನಾಲ್ಕು ವರ್ಷಗಳಾದರೂ ಇನ್ನೂ ಪೂರೈಸಲು ಸಾಧ್ಯವಾಗಿಲ್ಲ. ಎಷ್ಟು ಮಟ್ಟಿಗೆ ಸರ್ಕಾರದ ಅಂಗ ಕೆಲಸಮಾಡುತ್ತಿದೆಯೆಂಬುದಕ್ಕೆ ಇದೊಂದು ಉದಾಹರಣೆಯೇ ಸಾಕು. ಹೊರ ದೇಶಗಳಿಗೆ ಉಚ್ಚ ಶಿಕ್ಷಣಕ್ಕಾಗಿ ಕಳುಹಿಸಿ ತರಪೇತು ಹೊಂದಿ ಬಂದಿರುವ ಅಧಿಕಾರಿಗಳು ಕೆಲವರಿದ್ದಾರೆ. ಅವರನ್ನು ಲೋನ್ ಸೆಕ್ಷನ್ ಗುಮಾಸ್ತೆಯಾಗಿಯೂ, ಆಫೀಸ್ ಅಸಿಸ್ಟೆಂಟಾಗಿಯೂ ಉಪಯೋಗಿಸುತ್ತಿದ್ದಾರೆ.

ಶ್ರೀ ಸಿ. ಎಂ. ಪೂಣಚ್ಚ.—ಲೋನ್ ಸೆಕ್ಷನ್‌ನಲ್ಲಿಲ್ಲ. ಪ್ಲಾನ್ ಸೆಕ್ಷನ್‌ಗೆ ಒಬ್ಬರನ್ನು ಕೊಟ್ಟಿದ್ದೇವೆ. ಇನ್ನೊಬ್ಬರು ಡೈರೆಕ್ಟರಿಗೆ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಆಗಿದ್ದಾರೆ.

ಶ್ರೀ ಜೆ. ವೆಂಕಟಪ್ಪ.—ಉಚ್ಚ ಶಿಕ್ಷಣ ಕೊಟ್ಟಮೇಲೆ ಅವರನ್ನು ತಕ್ಕ ಸ್ಥಾನಗಳಲ್ಲಿಡಬೇಕು. ಹಾಗಿಲ್ಲದೆ ಈಗ ಅವರನ್ನು ಹಾಕುತ್ತಿರುವ ಜಾಗಗಳು ಸೂಕ್ತವಾದುವಲ್ಲ. ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಹಾಗೆಯೇ ಸಿರಿಕಲ್ಚರ್ ಫಿಲೇಚರ್ ಎಂಬ ಅಂಗಗಳಿವೆ. ಅಲ್ಲೂ ಕೂಡ ಉಚ್ಚ ಶಿಕ್ಷಣ ಪಡೆದು ಬಂದಿರುವ ಒಬ್ಬರನ್ನು ಯಾವುದೋ ಕೆಲಸಕ್ಕೆ ನೇಮಿಸಿ ಅಭಿವೃದ್ಧಿಪಡಿಸದೆ ಹೀಗೆ ಮಾಡುವುದಾದರೆ ಅವರೇಕೆ ಉನ್ನತ ಶಿಕ್ಷಣ ಪಡೆಯಬೇಕು ? ಪರದೇಶಗಳಿಗೆ ತರಬೇತಿಗಾಗಿ ಕಳುಹಿಸಿದ ಉದ್ದೇಶ ಸಾರ್ಥಕವಾಗುತ್ತದೆಯೇ ? ಡೆವಲಪ್‌ಮೆಂಟ್ ಸ್ಕೀಮ್ಸ್ ಸ್ಪಾನ್ಸರ್ ಮಾಡಿ ಇಂಪ್ಲಿಮೆಂಟ್ ಮಾಡುವುದಕ್ಕೆ ಅಂಥವರನ್ನು ಉಪಯೋಗಿಸಿಕೊಳ್ಳದೆ ಲೋನ್ ಸೆಕ್ಷನ್ ಮುಂತಾದ್ದಕ್ಕೆ ಹಾಕಿದರೇನು ಪ್ರಯೋಜನ ? ಹೀಗೆ ಮಾಡುವುದಾದರೆ ಹೆಚ್ಚು ಶಿಕ್ಷಣಕ್ಕೆ ಕಳಿಸುವ ಅವಶ್ಯಕತೆಯೇ ಇಲ್ಲ.

ಶಿಡ್ಲಘಟ್ಟದಲ್ಲಿರುವ ಫಿಲೇಚರ್ ಷೇರು ಹೋಲ್ಡರುಗಳಿಗೆ ಒಂದು ಲಕ್ಷ ರೂಪಾಯಿಗಳ ಸಾಲಕೊಟ್ಟು ಅದನ್ನು ನಡೆಸುವಂತೆ ಒಪ್ಪಂದ ಮಾಡಿಕೊಂಡಿದ್ದಾರೆ. ಇದಾಗಿ ಎರಡು ವರ್ಷಗಳಾದುವು, ಫಿಲೇಚರ್ ನಿಂತು ಏಳು ವರ್ಷಗಳಾದುವು. ಆದರೆ ಅದರ ಕಾರ್ಯ ಇನ್ನೂ ಪ್ರಾರಂಭಿಸುವುದಕ್ಕೆ ಸಾಧ್ಯವಾಗಿಲ್ಲ. ಹೀಗೆ ಸರ್ಕಾರದವರು ನಡೆಸಲು ಸಾಧ್ಯವಿಲ್ಲದಿದ್ದರೆ ದೇಶದಲ್ಲಿ ಪ್ರೈವೇಟ್ ಎಂಟರ್‌ಪ್ರೈಸ್‌ನವರು ನಡೆಸುವುದಾಗಿ ಕೇಳಿರುವಾಗ ಅವರಿಗೆ ಒಂದು ನಿಗದಿಯಾದ ಲೀಸ್ ಮೇಲೆ ಏಕೆ ಒಪ್ಪಿಸಬಾರದು ? ಹಾಗೆ ಮಾಡಿದರೆ ಆ ಭಾಗದಲ್ಲಿರುವ ಜನರಿಗೂ ಕೆಲಸ ಸಿಕ್ಕಿದ ಹಾಗಾಗುತ್ತದೆ. ಹಾಗಾದರೂ ಮಾಡಿ ಎಂದು ಸಲಹೆ ಮಾಡುತ್ತೇನೆ.

ಇಷ್ಟು ಹೇಳಿ ಕಾಲಾವಕಾಶ ಹೆಚ್ಚಾಗಿಲ್ಲದಿರುವುದರಿಂದ ನನ್ನ ಮಾತನ್ನು ಇಲ್ಲಿಗೆ ಮುಗಿಸುತ್ತೇನೆ.

*ಶ್ರೀ ಎಫ್. ಎಚ್. ಮೊಹಸೀನ್ (ಹುಬ್ಬಳ್ಳಿ ಸಿಟಿ).—ಸಭಾಪತಿಗಳೇ, ಮಾನ್ಯ ಶ್ರೀ ಮರಿಯಪ್ಪನವರು ಮಂಡಿಸಿದಂಥ ಬಡ್ಜೆಟ್ ಬಗ್ಗೆ ಕೆಲವರು ಆನಂದವನ್ನು ಸೂಚಿಸಿದ್ದಾರೆ. ಮತ್ತೆ ಕೆಲವರು ವಿಷಾದವನ್ನು ಸೂಚಿಸಿದ್ದಾರೆ. ನನಗೆ ಮಾತ್ರ ಆನಂದವೂ ಅದೇ ಪ್ರಕಾರ ವಿಷಾದವೂ ಆಗುತ್ತದೆ. ಆನಂದದ ಕಾರಣವೇನೆಂದರೆ, ಎಲ್ಲರೂ ಹೇಳಿದಹಾಗೆ ಇದು ಉಳಿತಾಯ ಬಡ್ಜೆಟ್. ಮತ್ತೆ ಹೆಚ್ಚಿನ ತೆರಿಗೆಗಳನ್ನು ಹಾಕಿದ್ದಾರೆಂದು ಜನರು ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಆದರೆ ನಮ್ಮ ರಾಜ್ಯ ಹೊಸದಾಗಿ ನಿರ್ಮಾಣವಾದ ರಾಜ್ಯ. ಎಷ್ಟೋ ಅಭಿವೃದ್ಧಿಕಾರ್ಯ ನಡೆಯಬೇಕಾಗಿದ್ದಿದೆ. ಹೊಸ ರಾಜ್ಯ ಅಭಿವೃದ್ಧಿಯಾಗಬೇಕಾದರೆ ಎಷ್ಟೋ ಹೊಸ ಹೊಸ ಯೋಜನೆ ಮಾಡಬೇಕಾಗುತ್ತದೆ. ಒಂದು ಉತ್ಸಾಹಭರದಿಂದ ರಾಷ್ಟ್ರೀಯ ಜೀವನ ವ್ಯವಸ್ಥೆ ಮಾಡಬೇಕಾಗುತ್ತದೆ. ಅದರಿಂದ ಹೊಸದಾಗಿ ತೆರಿಗೆ ಹಾಕಬೇಕಾಗುತ್ತದೆ ಎಂದು ಹೇಳಬಹುದು. ಆದರೆ ಆ ಹೆದರಿಕೆಯಿಂದ ಈ ತರಹ ಬಡ್ಜೆಟ್ಟನ್ನು ತಯಾರಿಸುವುದು ನಿಜವಾಗಿಯೂ ಸರಿಯಲ್ಲ. ಇದು ಪೂರ್ಣವಾಗಿ ರೋಗಿ ಮನುಷ್ಯನ ಬಡ್ಜೆಟ್ ಎಂದರೆ ಅತಿಶಯೋಕ್ತಿಯಲ್ಲ. This is a sick man's budget as I call it. ಒಂದು ಸಮಾಜ ನಿರ್ಮಾಣ ಮಾಡಬೇಕಾದರೆ, ಸಮಾಜವಾದಿ ಸಮಾಜ ನಿರ್ಮಾಣ ಮಾಡಬೇಕಾದರೆ, ಸಮಾಜವಾದಿ ರಾಷ್ಟ್ರ ನಿರ್ಮಾಣ ಮಾಡಬೇಕಾದರೆ ಸಿರಿವಂತರು ಕೆಲವೊಂದು ತೆರಿಗೆ ಕೊಡಲೇಬೇಕು. ಇದೊಂದು ಸಮಾಜವಾದಿ ರಾಷ್ಟ್ರ ನಿರ್ಮಾಣದ ಅಂಗ, ಒಂದು ಹೆಜ್ಜೆ ಎಂದು ತೆರಿಗೆ ಕೊಡುತ್ತಿದ್ದೇವೆ. ದೇಶದ ಅಭಿವೃದ್ಧಿಗೆ, ಬೇಕಾದ ಅನುಕೂಲ ಮಾಡುವುದಕ್ಕೆ

(ಶ್ರೀ ಎಫ್. ಎಚ್. ಮೊಹಸೀನ್)

ತೆರಿಗೆ ಕೊಡಲು ಯಾರೂ ಹಿಂತೆಗೆಯುವುದಿಲ್ಲವೆಂಬ ಅಭಿಪ್ರಾಯವಿದೆ.

ಇನ್ನೊಂದು ವಿಷಯ. ನಮ್ಮ ಸರ್ಕಾರ ಯಾವೊಂದು ಯೋಜನೆಯನ್ನೂ ದೃಢ ಮನಸ್ಸಿನಿಂದ ಕೈಕೊಂಡಿಲ್ಲವೆಂದು ವಿಷಾದವಾಗುತ್ತಿದೆ. ಪಾನ ಪ್ರತಿಬಂಧದ ವಿಷಯದಲ್ಲಿ ನಮ್ಮ ಅಭಿಪ್ರಾಯ ಹೇಳಿದ್ದೇವೆ. ಕೆಲವು ಕಡೆ ಪಾನಪ್ರತಿಬಂಧವಿರುವುದು ಕೆಲವು ಕಡೆ ಇಲ್ಲದಿರುವುದು ಶೋಚನೀಯ. ಇದಕ್ಕೆ ನಮ್ಮ ಸರ್ಕಾರ ಉತ್ಪನ್ನದ ಒಂದು ದೊಡ್ಡ ಬಾಬು ಕಡಮೆಯಾಗಬಹುದೆಂದು ಒಳ್ಳೆಯ ಯೋಚನೆ ಮಾಡಿದಹಾಗೆ ಕಾಣುತ್ತದೆ. ಸರ್ಕಾರ ನಿಯಮಬದ್ಧವಾಗಿ ತಾನು ಹಾಕಿರುವ ನೀತಿಯನ್ನು ಪಾಲಿಸಬೇಕಾದದ್ದು ಅದರ ಕರ್ತವ್ಯ. ಇಲ್ಲಿ ಯಾವ ಸದಸ್ಯರೂ ಕೂಡ ಪಾನಪ್ರತಿಬಂಧಕ್ಕೆ ವಿರುದ್ಧವಾಗಿ ಮಾತನಾಡಿಲ್ಲ. ಸರ್ಕಾರ ತನ್ನ ತತ್ವಕ್ಕೆ ವಿರೋಧವಾಗಿ, ಧರ್ಮಕ್ಕೆ ವಿರುದ್ಧವಾಗಿ ನಡೆಯುವುದು ಸರಿಯಲ್ಲ. ಪಾನ ಪ್ರತಿಬಂಧವನ್ನು ಬೇಗ ಜಾರಿಗೆ ತರಲು ಯಾವ ಅತಂಕವಿದೆ ಎಂದು ನಮ್ಮ ಮಿತ್ರರನೇಕರು ಹೇಳಿದರು. ಈ ಸಂಬಂಧವಾಗಿ ಅವರ ಬಜಾವಣೆ ಸರಿಯಾಗಿಲ್ಲ, ಯಶಸ್ವಿಯಾಗಿ ಪಾನಪ್ರತಿಬಂಧ ಜಾರಿ ಮಾಡುತ್ತಿಲ್ಲ ಎಂಬ ಕಾರಣದಿಂದ ಪಾನ ನಿರೋಧವನ್ನು ರದ್ದುಮಾಡಿ ಎಂದು ಹೇಳಿದರೇ ಹೊರತು ತತ್ವಕ್ಕೆ ವಿರುದ್ಧವಾಗಿ ಏನೂ ಹೇಳಲಿಲ್ಲ.

6 P.M.

ಪಾನನಿರೋಧವನ್ನು ಜಾರಿಗೆ ತರುವ ವಿಷಯದಲ್ಲಿ ನಾವು ಒಮ್ಮನಸ್ಸಿನಿಂದ, ಒಮ್ಮತದಿಂದ ಇಲ್ಲಿಗೆ ಚುನಾಯಿತರಾಗಿ ಬಂದುಬಿಟ್ಟಿರುವುದರಿಂದ ಒಮ್ಮೆಲೆ ಪಾನನಿರೋಧವನ್ನು ಜಾರಿಗೆ ತರಲು ಯಾವ ನಿರ್ಬಂಧವೂ ಇಲ್ಲ ಮತ್ತು ಯಾವ ಅತಂಕವೂ ಇಲ್ಲ. ನಮ್ಮ ಮುಂಬಯಿ ಪ್ರದೇಶದಲ್ಲಿ "Home guards" ಎಂದರೆ ಗೃಹರಕ್ಷಕ ಪಡೆ ಇತ್ತು. ಇದು ಪೋಲೀಸರಿಗೆ ಸಹಾಯ ನೀಡುವ ಒಂದು ಸಂಸ್ಥೆಯಾಗಿದೆ. ಇವರು ಪೋಲೀಸರೊಡನೆ ಸೇರಿಕೊಂಡು ಅವರ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಾರೆ. ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಎರಡು ಲಕ್ಷದ ಹದಿನಾರು ಸಾವಿರ ರೂಪಾಯಿಗಳಷ್ಟು ಇಟ್ಟಿರುವಂತೆ ಕಾಣುತ್ತದೆ. ಈ ಗೃಹರಕ್ಷಕ ಪಡೆಯನ್ನು ಬೇರೆ ಕಡೆಗೂ ವಿಸ್ತಾರ ಮಾಡಬೇಕು. ಮುಂದೆ ಸರಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ ಮತ್ತು ಇದನ್ನು ಹೇಗೆ ಮುಂದುವರಿಸಿಕೊಂಡು ಹೋಗುತ್ತದೆ ಎನ್ನುವುದನ್ನು ಸೂಚಿಸಿಲ್ಲ. ಹೀಗೆ ಒಂದು ಅನಿಶ್ಚಿತ ಪರಿಸ್ಥಿತಿ ಕಾಣಬರುತ್ತದೆ.

ಇದೇ ಪ್ರಕಾರ ಶಿಕ್ಷಣದಲ್ಲಿ ಒಂದೊಂದು ಪ್ರದೇಶದಲ್ಲಿ ಒಂದೊಂದು ವಿಧವಾದ ಶಿಕ್ಷಣ ಪದ್ಧತಿಯಿದೆ ; ಮತ್ತು ಅಭ್ಯಾಸ ಕಾರ್ಯಕ್ರಮಗಳು ಬೇರೆ ಬೇರೆಯಿದೆ. ಒಂದು ಕಡೆ ಪ್ರೈಮರಿ ಶಾಲೆಗಳಲ್ಲಿ ಫೀಸನ್ನು ವಸೂಲು ಮಾಡುತ್ತಾರೆ, ಮತ್ತೊಂದು ಕಡೆ ಪುಕ್ಕಟೆಯಾಗಿ ಶಿಕ್ಷಣ ಕೊಡುತ್ತಾರೆ, ಕೆಲವು ಕಡೆ ಸರಕಾರದವರೇ ಶಿಕ್ಷಣವನ್ನೆಲ್ಲ ವಹಿಸಿಕೊಂಡಿರುತ್ತಾರೆ. ಕೆಲವು ಕಡೆ ಮುನಿಸಿಪಾಲಿಟಿ, ಡಿಸ್ಟ್ರಿಕ್ಟು ಬೋರ್ಡು ಈ ರೀತಿ ಸ್ಥಾನಿಕ ಸಂಸ್ಥೆಗಳು ವಹಿಸಿಕೊಂಡು ಶಾಲೆಗಳನ್ನು ನಡೆಸುತ್ತಿವೆ. ಇಂತಹ ಒಂದು ಅನಿಶ್ಚಿತ ಪರಿಸ್ಥಿತಿ ಇದೆ. ನಮ್ಮ ಮುಂಬಯಿ ಪ್ರದೇಶದಲ್ಲಿ ಜಿಲ್ಲಾ ಬೋರ್ಡುಗಳು ಮತ್ತು ಲೋಕಲ್ ಬೋರ್ಡುಗಳು ಐದನೆಯ ಇಯತ್ತೆಯ ಮೇಲೆ ಪ್ರಾಥಮಿಕ ಶಾಲೆಗಳಲ್ಲಿ ಫೀಸನ್ನು ವಸೂಲು ಮಾಡುತ್ತಿದ್ದಾರೆ. ಮಾನ್ಯ ಡೆಪ್ಯುಟೀ ಮಿನಿಸ್ಟರವರು ಅಲ್ಲಿಗೆ ಬಂದ ಸಂದರ್ಭದಲ್ಲಿ ಈ ವಿಚಾರದಲ್ಲಿ ಅವರಿಗೆ ಎಷ್ಟೋ ರೆಪ್ರೆಸೆಂಟೇಷನ್ನುಗಳನ್ನು ಕೊಟ್ಟಾಗ, ಅವರು "ನೀವು ದುಡ್ಡು ಕೊಟ್ಟು ಕಲಿಯುತ್ತಿದ್ದರೆ ಅದು ಬಹಳ ಒಳ್ಳೆಯದೇ" ಎಂದು ಹೇಳಿದರು. ಹಿಂದುಳಿದಿರುವ ಭಾಗಗಳಲ್ಲಿ ಒಂದೇ ಸಮನಾದ ಶಿಕ್ಷಣ ಪದ್ಧತಿಯನ್ನು ತರಲಿಕ್ಕೆ ಪ್ರಯತ್ನ ಮಾಡಿಲ್ಲ. ಕೊಡಗಿನಲ್ಲಿ ಎಲ್ಲ ಕಡೆಗಳಲ್ಲೂ ಸರಕಾರಿ ಶಾಲೆಗಳಿವೆ ; ಮತ್ತು ಅಲ್ಲಿ A.C.C. ಮತ್ತು N.C.C. ಗಾಗಿ ಕಾಲೇಜುಗಳಲ್ಲಿ ಶಿಕ್ಷಣವನ್ನು ಕೊಡುತ್ತಿದ್ದಾರೆ. ಇದರಿಂದ ಯುವಕರಲ್ಲಿ ಒಂದು ರೀತಿಯ ಸಂಘಟನಾ ಶಕ್ತಿಯು ಬೆಳೆಯಲನುಕೂಲವಾಗಿದೆ. ಇದೇ ರೀತಿ ಮದರಾಸು ಕಡೆಗಳಲ್ಲಿಯೂ ಮುಂಬಯಿ ಕಡೆಗಳಲ್ಲಿಯೂ A.C.C. ಮತ್ತು N.C.C. ಶಿಕ್ಷಣಕ್ಕೆ ಅವಕಾಶವಿದೆ. ಮೈಸೂರಿನಲ್ಲಿ ಸ್ಕೌಟ್ಸ್ ಸಂಸ್ಥೆಯೂ ಇದೆ. ಆದುದರಿಂದ A.C.C. ಮತ್ತು N.C.C. ಶಿಕ್ಷಣವನ್ನು ದೇಶದಲ್ಲೆಲ್ಲ ಜಾರಿಗೆ ತರುವುದು ಅಗತ್ಯ ಎಂದು ನಾನು ಇಲ್ಲಿ ಸಲಹೆ ಮಾಡಬೇಕಾಗಿದೆ.

ಇಷ್ಟೇ ಅಲ್ಲ, ನಮ್ಮ ಮುಂಬಯಿ ಭಾಗಗಳಲ್ಲಿ ಪ್ರಾಥಮಿಕ ಶಿಕ್ಷಣದಿಂದ ಕಾಲೇಜು ಶಿಕ್ಷಣದವರೆಗೂ ಖಾಸಗೀ ಸಂಸ್ಥೆಗಳೇ ಶಿಕ್ಷಣದ ಕಡೆಗೆ ಮಹತ್ವ ಕೊಟ್ಟು ಹೊಸ ಹೊಸ ಕಾಲೇಜುಗಳನ್ನು ನಿರ್ಮಾಣ ಮಾಡಲಿಕ್ಕೆ ಹೊರಟಿವೆ. ನಮ್ಮ ಹಳೆಯ ಮೈಸೂರಿನ ಭಾಗಗಳಲ್ಲಿ ಖಾಸಗೀ ಶಾಲಾ ಸಂಸ್ಥೆಗಳು ಹೆಚ್ಚಾಗಿಲ್ಲ. ಸರ್ಕಾರದ ಶಾಲೆಗಳೇ ಹೆಚ್ಚಾಗಿವೆ. ಇಲ್ಲಿಯೂ ಸಹ ಖಾಸಗೀ ಸಂಸ್ಥೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಟ್ಟು ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಅನುಕೂಲ ಮಾಡಿ ಕೊಡುವುದು ಅಗತ್ಯ. ಸರಕಾರ ಈ ರೀತಿಯಾದ ಪ್ರೋತ್ಸಾಹವನ್ನು ತೋರಿಸದಿರುವುದು ವಿಷಾದವೆನಿಸುತ್ತದೆ. ಈ ರೀತಿ ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದು ಅತ್ಯಾವಶ್ಯಕ.

ಕ್ರಿಮಿನಲ್ ಇನ್‌ವೆಸ್ಟಿಗೇಷನ್ನಿಗಾಗಿ 6,21,000 ರೂಪಾಯಿಗಳು ಅಂದಾಜು ಪತ್ರಿಕೆಯಲ್ಲಿ ಕಾಣಿಸಲಾಗಿದೆ. ಇದೇನೋ ಒಳ್ಳೆಯದು. ಆದರೆ ಇದರಲ್ಲಿ ಹೆಚ್ಚು ವ್ಯತ್ಯಾಸ ಏನೂ ಕಂಡುಬರುವುದಿಲ್ಲ. ಈ ವಿಚಾರದಲ್ಲಿ ಈಗಾಗಲೇ ಎಷ್ಟೋ ಸದಸ್ಯರು ಮಾತನಾಡುವಾಗ ಈಗ ಜಾರಿಯಲ್ಲಿರುವ ಕಾನೂನುಗಳಲ್ಲಿ ತಪ್ಪುಗಳಿರುವುದರಿಂದ ಒಂದು ಸಮಗ್ರ ಕಾನೂನನ್ನು ತರುವುದು ಅವಶ್ಯಕವೆಂದು ತಿಳಿಸಿದರೆ ಇದರಿಂದ ಹೆಚ್ಚಿನ ಸೌಕರ್ಯಗಳು ದೊರೆಯಲು ಅನುಕೂಲವಾಗುತ್ತದೆ ಎಂದು ನಾನು ಸೂಚನೆ ಮಾಡಬಯಸುತ್ತೇನೆ.

ಇನ್ನು ನಮ್ಮ ಮುಂಬಯಿ ಕರ್ನಾಟಕದ ಭಾಗಗಳಲ್ಲಿ Mobile courts ಎಂದರೆ ತಿರುಗಾಡುವ ಕೋರ್ಟುಗಳಿವೆ. ವಾರಕ್ಕೊಂದಾವರ್ತಿ ಒಬ್ಬರು ಮುನ್ಸೀಫರು ಮತ್ತು ಒಬ್ಬರು ಮ್ಯಾಜಿಸ್ಟ್ರೇಟರು ಹಳ್ಳಿಗಳಿಗೆ ಹೋಗಿ ಅಲ್ಲಿ ಬರುವ ವ್ಯವಹಾರಗಳನ್ನೆಲ್ಲಾ ವಿಚಾರಮಾಡಿ ತೀರ್ಮಾನ ಮಾಡುತ್ತಾರೆ. ಇದರಿಂದ ಸಾಕಷ್ಟು ಕೆಲಸವಾಗುತ್ತಿಲ್ಲ ಎನ್ನುವುದು ಕಂಡುಬರುತ್ತಿದೆ. ಇದರ ಉದ್ದೇಶವೇನು, ಹೀಗೆ ಕೋರ್ಟುಗಳನ್ನು ಮಾಡುವುದರಿಂದ ಜನಗಳಿಗೆ ಬಹಳ ಅನುಕೂಲವಾಗುತ್ತದೆಂದು. ಆದರೆ ಮುನ್ಸೀಫ್ ಮ್ಯಾಜಿಸ್ಟ್ರೇಟರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಿ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ಕೆಲಸವನ್ನು ಇನ್ನೂ ಚೆನ್ನಾಗಿ ಮಾಡುವ ಉದ್ದೇಶದಿಂದ ನಾನು ಒಂದು ಹೊಸ ಸೂಚನೆಯನ್ನು ಹೇಳಬಯಸುತ್ತೇನೆ. ಹಿಂದೆ ಆನರೆರಿ ಮ್ಯಾಜಿಸ್ಟ್ರೇಟರನ್ನು ನೇಮಿಸುತ್ತಿದ್ದರು. ಆ ರೀತಿ ಪುನಃ ಆನರೆರಿ ಮ್ಯಾಜಿಸ್ಟ್ರೇಟರುಗಳನ್ನು ನೇಮಿಸುವ ಪದ್ಧತಿಯನ್ನು ಜಾರಿಗೆ ತರುವುದು ಒಳ್ಳೆ

ಯದು. ಈ ಕ್ರಿಮಿನಲ್ ಕೇಸುಗಳನ್ನು ತೀರ್ಮಾನ ಮಾಡುವುದರಲ್ಲಿ ಇಂತಹ ಮ್ಯಾಜಿಸ್ಟ್ರೇಟರುಗಳಿಂದ ಅನುಕೂಲವಾಗುತ್ತದೆ.

ಈಗ ಡಿವಿಜನಲ್ಲು ಕಮೀಷನರುಗಳ ಆಫೀಸನ್ನು ತೆರೆದಿದ್ದಾರೆ. ಬೇರೆ ಬೇರೆ ಪ್ರದೇಶಗಳ ಭಾಗಗಳು ನಮ್ಮಲ್ಲಿಗೆ ಬಂದಿವೆ. ಮುಂಬಯಿ ಪ್ರದೇಶದ ಕಡೆಯಿಂದ ಬಂದಿರುವ ಭಾಗಗಳಲ್ಲಿ ಒಂದು ರೀತಿಯಾದ ಕಾಯಿದೆಗಳಿವೆ. ಹೈದರಾಬಾದಿನಿಂದ ಬಂದಿರುವ ಭಾಗಗಳಲ್ಲಿ ಒಂದು ರೀತಿಯಾದ ಕಾಯಿದೆಗಳಿವೆ; ಮತ್ತು ಮೈಸೂರು ಭಾಗದಲ್ಲಿ ಒಂದು ರೀತಿಯ ಕಾಯಿದೆಗಳಿವೆ. ಆಯಾಯಾ ಡಿವಿಜನ್ನು ಕಮೀಷನರುಗಳ ಕೈಕೆಳಗೆ ಡೆಪ್ಯುಟೀ ಕಮೀಷನರುಗಳನ್ನೂ ಅಸಿಸ್ಟೆಂಟು ಕಮೀಷನರುಗಳನ್ನೂ ನೇಮಿಸಿದ್ದಾರೆ. ನಮ್ಮ ಬೆಳಗಾಂವಿ ಕಡೆಗೆ ಒಂದು ಡಿವಿಜನಲ್ ಕಮೀಷನರ ಆಫೀಸಿದೆ. ಈ ಆಫೀಸನ್ನು ಇಲ್ಲಿಯೇ ಮುಂದುವರಿಸಬೇಕೆಂದಿದ್ದಾರೆ. ಆದರೆ ಇಂತಹ ಡಿವಿಜನಲ್ ಕಮೀಷನರ ಆಫೀಸನ್ನು ನಾಲ್ಕು ಜಿಲ್ಲೆಗಳಿಗೂ ಅನುಕೂಲವಾಗುವಂತಹ ಕಡೆ ಸ್ಥಾಪಿಸಿದರೆ ಇದರಿಂದ ಜನತೆಗೆ ಹೆಚ್ಚಿನ ಸೌಕರ್ಯ ದೊರೆಯಲಿಕ್ಕೆ ಸಾಧ್ಯವಿದೆ. ಅಂತಹ ಒಂದು ಸ್ಥಳದಲ್ಲಿ ಈ ಆಫೀಸನ್ನು ತೆರೆಯುವುದು ಸೂಕ್ತವಾಗಿದೆ. ಈಗ ಹುಬ್ಬಳ್ಳಿಯಲ್ಲಿ ಈ ರೀತಿಯಾದ ಡಿವಿಜನಲ್ ಕಮೀಷನರಿನ ಆಫೀಸನ್ನು ತೆರೆಯಲು ಸ್ಥಳವಿದೆ. ಆದ್ದರಿಂದ ಅಲ್ಲಿ ಆ ಆಫೀಸನ್ನು ತೆರೆಯಬೇಕು ಎಂದು ನಿವೇದನೆ ಮಾಡುತ್ತೇನೆ.

ಹುಬ್ಬಳ್ಳಿ ನಗರ ಉತ್ತರ ಕರ್ಣಾಟಕದಲ್ಲೇ ಬಹಳ ಪ್ರಾಮುಖ್ಯವಾದಂಥ ಸ್ಥಳ. ದೊಡ್ಡ ನಗರ, ದೊಡ್ಡ ವ್ಯಾಪಾರ ಕೇಂದ್ರ, ದೊಡ್ಡ ರೈಲ್ವೆ ಜಂಕ್ಷನ್ ಇರುವ ಸ್ಥಳ. ಅನೇಕ ರಸ್ತೆಗಳು ಸೇರುವಂಥ ಸ್ಥಳ. ದೊಡ್ಡ ದೊಡ್ಡ ವಿದ್ಯಾ ಸಂಸ್ಥೆಗಳೂ, ರೈಲ್ವೆ ವರ್ಕ್‌ಷಾಪ್ ಇತ್ಯಾದಿಗಳಿಂದ ಕೂಡಿದ್ದಾಗ್ಯೂ ಇಂಥ ಒಂದು ದೊಡ್ಡ ನಗರದಲ್ಲಿ ಸರ್ಕಾರದವರು ಇಲ್ಲಿಯವರೆಗೂ ಏತಕ್ಕಾಗಿ ಒಂದು ಅಸಿಸ್ಟೆಂಟ್ ಕಮಿಷನರ ಹೆಡ್‌ಕ್ವಾರ್ಟರ್ಸ್ ಇರುವಂಥ ಒಂದು ಆಫೀಸನ್ನಾದರೂ ತೆರೆಯಲಿಲ್ಲ ಎಂದು ನಾನು ಕೇಳಬೇಕಾಗಿದೆ. ಈ ವಿಚಾರದ ಕಡೆಗೆ ಸರ್ಕಾರದವರು ಮನಸ್ಸನ್ನು ಕೊಟ್ಟು ಈ ಸ್ಥಳದಲ್ಲಿ ಆ ಆಫೀಸುಗಳನ್ನೆಲ್ಲ ನಡೆಸುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯದ ವಿಚಾರ ಹೇಳುವುದಾದರೆ ನಮ್ಮ ದೇಶದಲ್ಲಿ ವಿಶಾಲವಾದ ಅರಣ್ಯಸಂಪತ್ತಿದೆ. ಈ ಬಾಬಿನಿಂದ ಬರತಕ್ಕ ಉತ್ಪತ್ತಿ ಬಹಳ ದೊಡ್ಡದು. ಈ ಬಾಬಿನಿಂದ ಬರತಕ್ಕ ಉತ್ಪತ್ತಿಯನ್ನು ಇನ್ನೂ ಉತ್ತಮಗೊಳಿಸಲು ಅವಕಾಶವಿದೆ. ಈ ದಿವಸ ರೇಂಜರು ಮತ್ತು ಇನ್ನೂ ಕೆಲವು ಫಾರೆಸ್ಟ್ ಆಫೀಸರುಗಳು ಲಂಚರುಷುವತ್ತುಗಳಿಗೆ ಬಲಿಬಿದ್ದಿದ್ದಾರೆ. ಇದರಿಂದ ಬಹಳ ಮಟ್ಟಿಗೆ ಅರಣ್ಯ ಬಾಬಿನ ಉತ್ಪತ್ತಿ ಕಳುವಿನ ಮೂಲಕವಾಗಿ ಸಾಗಿ ಹೋಗುತ್ತಿದೆ. ಇದರ ಕಡೆಗೆ ಸರ್ಕಾರದವರು ಲಕ್ಷ್ಯ ಕೊಡಬೇಕು. ಕನ್ಸರ್ವೇಟರುಗಳನ್ನು ಬಹಳ ವರ್ಷಕಾಲ ಒಂದೇ ಸ್ಥಳದಲ್ಲಿಟ್ಟರೆ ಈರೀತಿ ಆಗುತ್ತದೆ. ಆದುದರಿಂದ ಈ ಕನ್ಸರ್ವೇಟರುಗಳನ್ನು ಬಹಳ ದಿನಗಳವರೆಗೂ ಒಂದು ಕಡೆ ನಿಲ್ಲಲು ಅವಕಾಶವಿಲ್ಲದಂತೆ ಬದಲಾವಣೆ ಮಾಡುತ್ತ ಹೋದರೆ ಈ ಅರಣ್ಯ ಬಾಬಿನಿಂದ ಇನ್ನೂ ಹೆಚ್ಚಿನ ಆದಾಯ ಬರಬಹುದೆಂದು ಹೇಳುತ್ತೇನೆ.

ಇನ್ನು ರೆಜಿಷ್ಟ್ರೇಷನ್ ವಿಚಾರ. ರಾಜ್ಯಗಳ ಪುನರ್ವಿಂಗಡಣೆಯಾದ ಮೇಲೆ ಸಬ್‌ರಿಜಿಸ್ಟ್ರಾರ್ಸ್‌ಗಳ ಕಛೇರಿಯಲ್ಲೆಲ್ಲ ಒಂದು ಕೋಲಾಹಲವೇ ಎದ್ದಿದೆ. ಕೆಲವು ಸಬ್‌ರಿಜಿಸ್ಟ್ರಾರ್‌ಗಳಿಗೆ ಮೂರು ತಿಂಗಳಲ್ಲಿ ಎರಡು ಸಾರ್ತಿ ವರ್ಗಗಳಾಗಿದೆ. ಕೆಲವರಿಗೆ ವರ್ಷದಲ್ಲಿ ಒಂಬತ್ತು ಸಾರ್ತಿ ವರ್ಗಗಳಾಗಿರುತ್ತದೆ. ಇದಕ್ಕೆ ಕಾರಣ ಈ ಕಛೇರಿಯಲ್ಲಿ ಅಷ್ಟರಮಟ್ಟಿಗೆ ಲಂಚರುಷುವತ್ತುಗಳ ಹಾವಳಿ ಜಾಸ್ತಿಯಾಗಿದೆ. ಕೆಲವು ಸೀನಿಯರ್ ಆಗಿದ್ದಂಥವರನ್ನು ಅವರ ಸೀನಿಯಾರ್ಟಿಗೆ ಧಕ್ಕೆ ಬರುವಂತೆ ವರ್ಗ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಇತ್ತಕಡೆಗೆ ತಮ್ಮ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಆ ಹುಬ್ಬಳ್ಳಿ ಟೌನ್ ಮುನಿಸಿಪಾಲಿಟಿಯ ಬಗ್ಗೆ ಸರ್ಕಾರ ಸಾಕಷ್ಟು ಗಮನ ಕೊಟ್ಟಿಲ್ಲ. ಅಲ್ಲಿರತಕ್ಕ ಜನರ ಆರೋಗ್ಯದ ಕಡೆಗೆ, ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಒದಗಿಸತಕ್ಕ ಸೌಲತ್ತುಗಳ ವಿಚಾರದಲ್ಲಿ ಆ ಮುನಿಸಿಪಾಲಿಟಿ ಸಾಕಷ್ಟು ಆಸಕ್ತಿ ವಹಿಸುತ್ತಿಲ್ಲ. ಸರ್ಕಾರದವರಿಂದಲೂ ಸಹ ಅದರ ಬಗ್ಗೆ ಒಂದು ಯೋಗ್ಯ ಸಹಾಯ ದೊರೆಯುತ್ತಿಲ್ಲವೆಂದು ಅವರು ಹೇಳುತ್ತಿದ್ದಾರೆ. ಸರ್ಕಾರದಿಂದ ಸಾಲಕ್ಕೆ ಈ ವರ್ಷ ಅರ್ಜಿ ಹಾಕಿದರೆ ಅದು ಮಂಜೂರಾಗಲು ಮತ್ತೊಂದು ವರ್ಷದ ಮೇಲೆ ಹಿಡಿಯುತ್ತದೆ. ಹೀಗೆ ಸಾಲ ದೊರೆಯುವುದೂ ಕೂಡ ಬಹಳ ನಿಧಾನವಾಗುತ್ತಿದೆಯೆಂದು ಹೇಳುತ್ತಿದ್ದಾರೆ. ಹೀಗಾಗಿ ಈ ನಗರವನ್ನು ಅಭಿವೃದ್ಧಿಗೆ ತರಲು ಸಾಧ್ಯವೇ ಇಲ್ಲವೆಂದು ಅವರು ಹೇಳುತ್ತಿದ್ದಾರೆ. ಈ ದಿವಸ ಈ ಬೆಂಗಳೂರು ನಗರವನ್ನು ಒಂದು ಸುಂದರ ನಗರವನ್ನಾಗಿ ಮಾಡುವುದಕ್ಕಾಗಿ ಇಲ್ಲಿ ಲಾಲ್‌ಬಾಗ್, ಒಳ್ಳೆ ರಸ್ತೆ, ಉತ್ತಮ ನೀರಿನ ಸರಬರಾಯಿ ಸೌಕರ್ಯ, ದೀಪ, ಅಂಡರ್‌ಗ್ರೌಂಡ್ ಇತ್ಯಾದಿ ಸೌಕರ್ಯಗಳನ್ನೆಲ್ಲಾ ಒದಗಿಸಲಾಗಿದೆ. ಆ ಹುಬ್ಬಳ್ಳಿ ನಗರವೂ ಕೂಡ ಇಡೀ ಉತ್ತರ ಕರ್ನಾಟಕದಲ್ಲಿ ಒಂದು ದೊಡ್ಡ ನಗರವಾಗಿರುವುದರಿಂದ ಅದನ್ನೂ ಈ ಬೆಂಗಳೂರು ನಗರದಂತೆ ಒಂದು ಸುಂದರನಗರವನ್ನಾಗಿ ಮಾಡಲು ಸೂಕ್ತ ಏರ್ಪಾಡುಗಳನ್ನು ಮಾಡಬೇಕಾಗಿದೆ. ಆದರೆ ಆ ಮುನಿಸಿಪಾಲಿಟಿಗೆ ಅಷ್ಟು ಆದಾಯವಿಲ್ಲ. ಈ ವರ್ಷ ಮುನಿಸಿಪಾಲಿಟಿಗಳಿಗೆ ಸಾಲ ಮಂಜೂರು ಮಾಡತಕ್ಕ ಬಗ್ಗೆ 65 ಲಕ್ಷ ರೂಪಾಯಿಗಳನ್ನೊದಗಿಸಲಾಗಿದೆ. ಆದರೆ ಇದರಲ್ಲಿ ಆ ಹುಬ್ಬಳ್ಳಿ ಮುನಿಸಿಪಾಲಿಟಿಗೆ ಎಷ್ಟನ್ನು ಕೊಟ್ಟಿದ್ದಾರೆಂಬ ವಿಚಾರ ಗೊತ್ತಾಗಲಿಲ್ಲ. ಅಷ್ಟೇ ಅಲ್ಲದೆ ಈ ಸಾಲಗಳೂ ಕೂಡ ಆ ಸಂಸ್ಥೆಗಳಿಗೆ ಸಕಾಲದಲ್ಲಿ ದೊರೆಯುತ್ತಿಲ್ಲವೆಂಬ ದೂರುಗಳಿರುತ್ತವೆ. ಈ ದಿವಸ ಆ ಹುಬ್ಬಳ್ಳಿ ಮುನಿಸಿಪಾಲಿಟಿಗೆ ಅಂಥ ವರಮಾನವಿಲ್ಲದೆ ಇದ್ದರೂ ಕೂಡ ಆ ಮುನಿಸಿಪಾಲಿಟಿಯ ಮೇಲೆ ಪ್ರಾಥಮಿಕ ಶಾಲೆಯ ಹೊರೆ ಬಿದ್ದಿದೆ, ಹೈಸ್ಕೂಲನ್ನು ನಡೆಸತಕ್ಕ ಹೊರೆ ಅವರ ಮೇಲೆ ಬಿದ್ದಿದೆ. ಆದುದರಿಂದ ಈ ದಿವಸ ಈ ಶಿಕ್ಷಣ ಶಾಲೆಗಳ ಹೊರೆಯನ್ನಾದರೂ ಸರ್ಕಾರದವರು ತಮ್ಮ ಕಡೆಗೆ ತೆಗೆದುಕೊಂಡರೆ ಆ ಮುನಿಸಿಪಾಲಿಟಿಗೆ ಒಂದು ದೊಡ್ಡ ಅನುಕೂಲಮಾಡಿದಂತಾಗುತ್ತದೆ. ಅಂತೂ ಈ ದಿವಸ ಆ ಹುಬ್ಬಳ್ಳಿ ಮುನಿಸಿಪಾಲಿಟಿಯ ಆಡಳಿತ ಅಷ್ಟು ಅಸಮಾಧಾನಕರವಾಗಿರುವುದರಿಂದ ಸರ್ಕಾರದವರು ಅದನ್ನು ಸೂಪರ್‌ಸೀಡ್ ಆದರೂ ಮಾಡಿ ತಮ್ಮ ಕಡೆಗೆ ತೆಗೆದುಕೊಳ್ಳಬೇಕೆಂದು ನಾನು ನಿವೇದನೆ ಮಾಡಿಕೊಳ್ಳುತ್ತೇನೆ. ಈ ದಿವಸ ಆ ನಗರದ ನಿವಾಸಿಗಳ ತೊಂದರೆಯನ್ನು ಹೇಳತೀರದಾಗಿದೆ. ಜನರು ಅಲ್ಲಿ ವಾಸ ಮಾಡುವುದೇ ಒಂದು ದೊಡ್ಡ ದುಸ್ತರವಾಗಿದೆ. ಸರಿಯಾದ ಡ್ರೈನೇಜ್ ವ್ಯವಸ್ಥೆಯಿಲ್ಲ, ನೀರಿನ ಸೌಲತ್ತಿಲ್ಲ, ಬೆಳಕಿಲ್ಲ. ಆದರೆ ಈ ದಿವಸ ಅವರೂ ಕೂಡ ನಮ್ಮ ಬಂಧುಗಳಾಗಿದ್ದಾರೆ. ಅವರ ಸ್ಥಿತಿಗತಿಗಳನ್ನೂ ಅವರ ಆಗುಹೋಗುಗಳನ್ನೂ ಉತ್ತಮ ಪಡಿಸಬೇಕು ಮತ್ತು

(ಶ್ರೀ ಎಫ್. ಎಚ್. ಮೊಹಸೀನ್)

ಸರಿಪಡಿಸಬೇಕಾಗಿದೆ. ಇನ್ನು ಕಡೆಯದಾಗಿ ಶ್ರೀ ಮಹಮದ್ ಸೇಟ್‌ರವರು ಭಾಷಾ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿ ಅಲ್ಪ ಸಂಖ್ಯಾತರ, ಕಡಮೆ ಜನಸಂಖ್ಯೆ ಇತರಕ್ಕ ಜಾತಿ ಮತಗಳವರ ಹಿತಚಿಂತನೆಯ ಕಡೆಗೆ ಸರ್ಕಾರ ಗಮನ ಕೊಡಬೇಕಾದ್ದು ಅಗತ್ಯ. ಅಲ್ಪ ಮತೀಯರಲ್ಲಿ ಮಹಮದೀಯರಿದ್ದಾರೆ, ಕ್ರೈಸ್ತರಿದ್ದಾರೆ, ಕುರುಬರಿದ್ದಾರೆ, ಬೇಡರಿದ್ದಾರೆ; ಹೀಗೆಯೇ ಇನ್ನೂ ಅನೇಕ ಮತಗಳವರಿದ್ದಾರೆ. ಈ ಎಲ್ಲ ಮತಗಳ ಹಿತರಕ್ಷಣೆಗಾಗಿ ಒಂದು ಸಮಿತಿಯನ್ನು ರಚನೆ ಮಾಡಬೇಕಾಗಿದೆ. ಅವರ ಆಗು-ಹೋಗುಗಳನ್ನು, ಅವರ ಕುಂದು ಕೊರತೆಗಳನ್ನು ನಿವಾರಣೆ ಮಾಡುವುದಕ್ಕೆ ಒಂದು ಏರ್ಪಾಡನ್ನು ಮಾಡಲೇಬೇಕು. ಆ ರೀತಿ ಮಾಡದೆ ಹೋದರೆ ಒಂದು ದೊಡ್ಡ ಪ್ರಮಾದವೇ ಆದೀತು. ಒಂದು ಸಮಾಜವೇ ಆಗಲಿ ಅಥವಾ ಒಂದು ದೇಶವೇ ಆಗಲಿ ಅಭಿವೃದ್ಧಿಯಾಗಬೇಕಾಗಿದ್ದರೆ ಮನುಷ್ಯನ ಅವಯವಗಳೆಲ್ಲ ಸರಿಯಾಗಿ ಕೆಲಸ ಮಾಡುತ್ತಿದ್ದರೆ ಆ ಮನುಷ್ಯ ಹೇಗೆ ಆರೋಗ್ಯವಂತನಾಗಿರುತ್ತಾನೋ ಹಾಗೆ ದೇಶದ ಎಲ್ಲ ಜನರ ಎಲ್ಲ ಜಾತಿಗಳ ಒಂದು ಸರ್ವತೋಮುಖವಾದ ಅಭಿವೃದ್ಧಿ ಆದರೆ ಆಗ ಆ ದೇಶ ಅಭಿವೃದ್ಧಿಯಾಯಿತೆಂದು ಹೇಳಬಹುದು. ಎಲ್ಲ ಜನರೂ ಸಂತೋಷದಿಂದ ದೇಶದ ಏಳಿಗೆಗೆ ದುಡಿಯಲು ಮನಸ್ಸು ಮಾಡುವಂತೆ ಮಾಡಬೇಕೆಂದು ನಿವೇದನೆ ಮಾಡಿಕೊಂಡು ನನಗಿಷ್ಟು ವಿಚಾರಗಳನ್ನು ಹೇಳಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

[Sri BALWANT RAO (Bhalki) spoke in Urdu.]

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೆ, ಈ ಸಾರಿ ಖೋತಾಯ ಬಜೆಟ್ಟನ್ನು ನಮ್ಮ ಮಾನ್ಯ ಹಣಕಾಸಿನ ಸಚಿವರು ಬಹಳ ಶ್ರಮಪಟ್ಟು ನಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕಾಗಿ ಈ ಸಭೆ ಮತ್ತು ಮೇಲ್ಮನೆಯ ಸದಸ್ಯರೂ ಅಲ್ಲದೆ ಎರಡು ಕೋಟಿ ಪ್ರಜಾಸಂಖ್ಯೆ ಇರತಕ್ಕ ಕರ್ಣಾಟಕ ಪ್ರದೇಶದ ಪ್ರತಿಯೊಬ್ಬರ ಕೃತಜ್ಞತೆಗೂ ಪಾತ್ರರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ಬಜೆಟ್ಟಿನಲ್ಲಿ ಕೋಟಿಗಟ್ಟಲೆ ರೂಪಾಯಿ ಖರ್ಚು ತೋರಿಸಿದ್ದಾರೆ. ಕೋಟಿಗಟ್ಟಲೆ ರೂಪಾಯಿ ಸರಿಯಾಗಿ ಯಾವ ಯಾವ ಬಾಬುಗಳಿಗೆ ಯಾವ ಯಾವ ಅಂದಾಜುಗಳಿಗೆ ಎಷ್ಟೆಷ್ಟು ದುಡ್ಡು ನಾವು ಅಲಾಟ್ ಮಾಡುತ್ತೇವೋ ಆ ದುಡ್ಡು ಸರಿಯಾಗಿ ಖರ್ಚಾಗುತ್ತದೆಯೋ ಇಲ್ಲವೇ ಎನ್ನುವ ವಿಚಾರದಲ್ಲಿ ಸರ್ಕಾರದವರು ಹೆಚ್ಚಿಗೆ ನಿಗಾ ಕೊಟ್ಟರೆ ಸರ್ಕಾರಕ್ಕೆ ಬಹಳ ಕೀರ್ತಿಬರುತ್ತದೆ ಎಂದು ನನ್ನ ಅಭಿಪ್ರಾಯ. ಒಬ್ಬ ಪೋಸ್ಟ್‌ಮಾಸ್ಟರಿಗೆ ಮನಿ ಆರ್ಡರ್ ಕೊಟ್ಟರೆ, ತಕ್ಷಣ ಸಂಬಂಧಪಟ್ಟ ಪಾರ್ಟಿಗೆ ಅದು ತಲುಪುತ್ತದೆ. ಆದರೆ ನಮ್ಮ ಸರ್ಕಾರದಲ್ಲಿ ಬಜೆಟ್ಟಿನಲ್ಲಿ ಮುಂಜೂರು ಆಗಿರತಕ್ಕ ದುಡ್ಡು ಆಯಾ ಬಾಬಿಗೆ ಹೋಗಿ ಸೇರುವ ಹೊತ್ತಿಗೆ ಅವುಗಳಿಗೆ ನಡುವೆ ಎಷ್ಟೋ ಕತ್ತರಿಗಳು ಆಗಿರುತ್ತವೆ. ಅದನ್ನು ನೋಡಿಕೊಳ್ಳಬೇಕು. ಸೆಕ್ರೆಟೇರಿಯಟ್ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಹಿಂದೆ ಸೆಕ್ರೆಟರಿಗಳು ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದರು. ಅವರು ನಿವೃತ್ತಿ ಆದಮೇಲೆ ರಾಜಾಸ್ಥಾನ, ಹೈದ್ರಾಬಾದ್, ಇಂದೂರ್ ಮುಂತಾದ ಅನೇಕ ಸಂಸ್ಥಾನಗಳಲ್ಲಿ ಅವರ ಸೇವೆ ತೆಗೆದುಕೊಂಡು, ಮೈಸೂರಿನ ಕೀರ್ತಿ ಘನತೆ ಗೌರವಗಳನ್ನು ಕಾಪಾಡುತ್ತಿದ್ದರು. ಈಗಿನ ಸೆಕ್ರೆಟರಿಗಳ ವಿಷಯ ಹೇಳಿದರೆ, ಯಾರೂ ತಪ್ಪುಭಾವನೆ ಭಾವಿಸಿಕೊಳ್ಳಬಾರದು. ಈಗಿನ ಸೆಕ್ರೆಟರಿಯವರು ಮೈಸೂರು ದೇಶಕ್ಕೆ ಮಾನತರುವುದಿಲ್ಲ, ಮಂತ್ರಿಗಳಿಗೆ ಗೌರವತರುವುದಿಲ್ಲ ಎಂದು ಅಭಿಪ್ರಾಯಪಡುತ್ತೇನೆ. ಪ್ರತಿಯೊಂದು ಆಫೀಸಿನಲ್ಲೂ ಸಂಬಳ, ಸ್ಕೇಲು ಸೀನಿಯಾರಿಟಿ ವಿಚಾರ ಮತ್ತು ಜಾತಿ, ಮತಗಳ ವೈಷಮ್ಯ ತಾಂಡವವಾಡಿಕೊಂಡು ಪ್ರತಿಯೊಂದು ಆಫೀಸಿನಲ್ಲಿ ನೋಡಿದರೂ ದ್ರಾವಿಡ ಕಜಗಂ ಆಗಿಹೋಗಿಬಿಟ್ಟಿದೆ. ಗಾಂಧಿ ಹೆಸರಿನ ಮೇಲೆ ಸರ್ಕಾರನಡೆಯುತ್ತಾ ಇರತಕ್ಕಂಥ ಕಾಲದಲ್ಲಿ ಶೇಕಡ 75 ರಷ್ಟು ಕಮ್ಯುನಿಸ್ಟ್ ಅಧಿಕಾರಿಗಳು ಇದ್ದಾರೆ. ಎಂದು ಹೇಳುತ್ತೇನೆ. ಆ ಅಧಿಕಾರಿಗಳನ್ನು ಸರಿಮಾಡದೆ ಇದ್ದರೆ ಕಾಂಗ್ರೆಸ್ ಸರ್ಕಾರಕ್ಕೆ ಗೌರವ ಬರುವುದಿಲ್ಲ. ಕಾಂಗ್ರೆಸ್ ಮಂತ್ರಿಗಳಿಗೆ ಮರ್ಯಾದೆ ಬರುವುದಿಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಕೋಲಾರದಲ್ಲಿ ಬಹಳ ಇದ್ದಾರೆಯೇ?

ಶ್ರೀ ಎ. ಮುನಿಯಪ್ಪ.—ಜಮೀನು ಹಂಚಿಕೆಯ ವಿಚಾರದಲ್ಲಿ ಒಂದು ಮಾತುಹೇಳುತ್ತೇನೆ. ಕರ್ಣಾಟಕವಾಗುತ್ತದೆ, ಹರಿಜನರಿಗೆ ಬೇಕಾದ ಅನುಕೂಲಗಳೆಲ್ಲಾ ಒದಗುತ್ತವೆ ಎಂದಿದ್ದೆವು. ಆದರೆ ರೆವಿನ್ಯೂ ಮಂತ್ರಿಗಳು ಬಂದ ತಕ್ಷಣ ಸ್ಟೇಆರ್ಡರು ಕೊಟ್ಟರು. ಅಷ್ಟು ಇಷ್ಟು ಜಮೀನು ಹರಿಜನರಿಗೆ ಸಿಕ್ಕುತ್ತದೆ, ಅವರಿಗೆ ಹಣದ ಸಹಾಯ ಸರ್ಕಾರದವರು ಒದಗಿಸುತ್ತಾರೆ ಎಂದಿದ್ದೆವು; ಅದಾಗಲಿಲ್ಲ. ಯಾರು ಪ್ರತಿಭಾಶಾಲಿಗಳೋ, ಯಾರು ಪುಣ್ಯವಂತರೋ ಅವರಿಗೇ ಜಮೀನೆಲ್ಲಾ ಸೇರಿಹೋಗಿದೆ. ಅಲ್ಪಸ್ವಲ್ಪ ಉಳಿದಿರುವ ಜಮೀನನ್ನು ಹರಿಜನರಿಗೆ ಕೊಡಬೇಕಾದರೆ ಪಟೇಲ ಶ್ಯಾನುಭೋಗರು ಬರಬೇಕು, ಊರಿನಲ್ಲಿರುವ ರೈತರ ಮಹಜರು ವಗೈರೆ ಆಗಬೇಕು. ಹೀಗಾಗಿ ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎಂಬಂತೆ ಆಗಿ ಹರಿಜನರಿಗೆ ಜಮೀನಿಲ್ಲದಂತಾಗಿದೆ. ಜತ್ತಿ ಸಮಿತಿ ವರದಿ ನೋಡಿದರೆ ಎಷ್ಟೋ ಜಾಗ್ರತೆ ಬಂತು. ರಾಜ್ಯಾಂಗದ ಪ್ರಕಾರ ಹರಿಜನರಿಗೆ ಅನುಕೂಲವಾಡಿ ಕೊಡಬೇಕೆಂದು ಹೇಳಿರುವ ಬಗ್ಗೆ ಕೆಲವೇವರ್ಷಗಳ ಅವಕಾಶಮಾತ್ರ ಇದೆ. ಜತ್ತಿ ಸಮಿತಿ ವರದಿ ಬಂದು ಈ ಸಭೆಯಲ್ಲಿ ಅದರ ಮೇಲೆ ಚರ್ಚೆಕೂಡ ಆಗಿದೆ. ತೋಟಿ ತಳವಾರರಿಗೆ ಸಂಬಂಧಪಟ್ಟ ವರದಿಯನ್ನು ಹೋದವರ್ಷ ಮೂರು ತಿಂಗಳಲ್ಲಿ ತರಿಸುತ್ತೇವೆಂದು ಹೇಳಿದ್ದರು. ಅದು ಬರುವುದು ಯಾವಾಗ? ಊರೆಲ್ಲಾ ಹೋದಮೇಲೆ ಊರುಬಾಗಿಲು ಹಾಕಿದರು ಎಂಬಂತಾದರೆ ಪ್ರಯೋಜನವೇನು?

ಅಧ್ಯಕ್ಷರು.—ಬಂದಿದೆ ಯೆಂದು ಮೊನ್ನೆ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎ. ಮುನಿಯಪ್ಪ.—ಸರ್ಕಾರ ಅದನ್ನು ಪರಿಶೀಲಿಸಿ ಜಾಗ್ರತೆ ತಕ್ಕವ್ಯವಸ್ಥೆ ಮಾಡಬೇಕು. ರೆವಿನ್ಯೂ ಅಧಿಕಾರಿಗಳು ಏನೇನು ಕೆಲಸ ಮಾಡುತ್ತಿದ್ದಾರೆಂಬುದನ್ನು ಅರಣ್ಯಶಾಖೆ ಮಂತ್ರಿಗಳು ಚೆನ್ನಾಗಿಹೇಳಿದರು. ಮಂಚೇನಹಳ್ಳಿ ಹತ್ತಿರ ಗೌಡಗೆರೆ ಎಂಬ ಊರಿದೆ. ಅಲ್ಲಿ ಸರ್ಕಾರಿ ಮರವನ್ನು ಒಬ್ಬ ಶ್ಯಾನುಭೋಗರು ಕಡಿದರು. ಪೋಲೀಸಿನವರು ಅಮಾನತ್ತು ಮಾಡಿದರು. ಆದರೆ ಆ ಶ್ಯಾನುಭೋಗರ ಮೇಲೆ ಕೇಸು ಹಾಕಲಿಲ್ಲ, ರಾತ್ರಿ ಸಬ್ ಡಿವಿಜನ್ ಆಫೀಸರ ಹತ್ತಿರ ಹೋಗಿ ಏನು ಹೇಳಿದರೋ ಏನೋ, ಅದರ ಮೇಲೆ ಸಬ್‌ಡಿವಿಜನ್ ಆಫೀಸರು ಈ ವಿಚಾರದಲ್ಲಿ ಕ್ರಮತೆಗೆದು

ಕೊಳ್ಳಬೇಡಿ, ನಾನೇಬಂದು ಎಂಕ್ವೈರಿ ಮಾಡುತ್ತೇನೆ ಎಂದು ತಿಳಿಸಿದರು. ಪರಿಶೀಲನೆಮಾಡಿ ಏನುಮಾಡು ತ್ತಾರೋ ಎಂದು ನಿರೀಕ್ಷಣೆಮಾಡುತ್ತಿದ್ದರೆ ಶ್ಯಾನು ಭೋಗರನ್ನು ಬಿಟ್ಟು ಬಿಟ್ಟು ಗೌಡಗೆರೆ ಅಧಿಕಣಾಟಕರ ರಾಮಯ್ಯ ಎಂಬವರಿಗೆ ಇಪ್ಪತ್ತೈದು ರೂಪಾಯಿಗಳ ಜುರ್ಮಾನೆಹಾಕಿ ಕೇಸು ಫೈಸಲುಮಾಡಿದರು. ಹೀಗಾದರೆ ಸರ್ಕಾರಿ ಕೆಲಸ ಎಷ್ಟುಮಟ್ಟಿಗೆ ನಡೆಯುತ್ತದೆ? ಆಮೇಲೆ ನಬ್ಬಿಡಿ ಬಾಬನ್ನು ನೋಡೋಣ. ನನ್ನ ಕ್ಷೇತ್ರಕ್ಕೆ ಬೇಗ ಹಣ ಕೊಟ್ಟರೆ, ಉದ್ಧಾರವಾಗುತ್ತೇವೆ ಎಂದು ರೈತರು ತಿಳಿದುಕೊಂಡಿದ್ದರು. ಆದರೆ ಅದನ್ನು ಕೊಟ್ಟ ಸ್ವಲ್ಪ ಕಾಲದೊಳಗೇ 'ಕಾಲಕ್ಕೆಸರಿಯಾಗಿ ಕೆಲಸಮಾಡಿಲ್ಲ, ಆದ್ದರಿಂದ ವಾಪಸು ಕೊಡಬೇಕು' ಎಂದು ನೋಟೀಸು ಕೊಟ್ಟರು. ಅದೇನಬ್ಬಿಡಿ ನುಂಗಿ ಹಾಯಾಗಿ ಕಾಲಮೇಲೆ ಕಾಲುಹಾಕಿಕೊಂಡು ಇರುವ ಮಹಾನುಭಾವರಿಗೆ ಒಂದು ನೋಟೀಸು ಕೂಡ ಇಲ್ಲ. ಇದು ನನಗೆ ಗೊತ್ತಿದೆ. ಈಗಲೂ ಕೂಡ ಅವರು ಹಾಯಾಗಿದ್ದಾರೆ. ಇದನ್ನೆಲ್ಲಾ ಸರ್ಕಾರ ನಿಗಾಕೊಟ್ಟು ನೋಡಬೇಕು.

ಜೋಡಿಗ್ರಾಮದ ವಿಚಾರ ಎಲ್ಲರಿಗೂ ತಿಳಿದೇ ಇದೆ. ಮಂತ್ರಿಗಳಿಗೂ ಸಹ ಗೊತ್ತಿದೆ. 1948ನೆಯ ಇಸವಿಯಲ್ಲೇ ಜಿಲ್ಲಾಧಿಕಾರಿಗಳ ಅಪ್ಪಣೆಯಿಲ್ಲದೆ ಜೋಡಿದಾರರು ಜಮೀನನ್ನು ಮಾರಕೂಡದು, ಮನೆ ಮಾರಕೂಡದು ಎಂದು ಕಾನೂನು ಮಾಡಿದ್ದರೂ ಅದರಂತೆ ಆಚರಣೆಗೆ ತಂದಿಲ್ಲ. ಕಾನೂನು ಬರೀ ಕಾಗದದ ಮೇಲೆ ಮಾತ್ರ ಇದೆ. ನಾಲ್ಕು ದಿವಸಗಳ ಕೆಳಗೆ ಮುದ್ದಲೋಡು ಗ್ರಾಮದಲ್ಲಿ ಜೋಡಿದಾರರು ಒಬ್ಬ ಹರಿಜನದವನ ಕೈ ಕತ್ತರಿಸಿದರು. ಅಂತಹ ಅನೇಕ ಜೋಡಿದಾರರು ರೈತರುಗಳಿಗೆ ಕಿರುಕುಳ ಕೊಡುತ್ತಾಯಿರುವುದು ಮಾನ್ಯ ಮಂತ್ರಿಗಳಿಗೆ ಚೆನ್ನಾಗಿ ಗೊತ್ತು. ಈ ಅಧಿಕಾರಿಗಳು ತಪ್ಪು ದಾರಿಯಲ್ಲಿ ಮಂತ್ರಿಗಳನ್ನು ಎಳೆದುಕೊಂಡು ಹೋದರೆ ಸರ್ಕಾರದವರಿಗೆ ಅಗೌರವ ಬರುತ್ತದೆ ಎಂದು ಅವರ ಮನಸ್ಸಿನಲ್ಲಿದೆ. ಆ ಕುಟಿಲ ಪ್ರಯತ್ನವನ್ನು ಕತ್ತರಿಸಬೇಕು, ಆಗಲೇ ನಮ್ಮ ದೇಶಕ್ಕೆ ಕ್ಷೇಮ.

ನನಗೆ ಹೆಚ್ಚು ಕಾಲಾವಕಾಶ ಇಲ್ಲ, ಸಂಕ್ಷೇಪವಾಗಿ ಅರಣ್ಯ ಶಾಖೆಯ ಮಂತ್ರಿಗಳಿಗೆ ಹೇಳುತ್ತೇನೆ. ಗಂಧದ ಮರ ರಾತ್ರಿ ಹಗಲು ನಮ್ಮ ದೇಶದಿಂದ ಕಳ್ಳತನದಲ್ಲಿ ಸಾಗಿಹೋಗುತ್ತದೆ. ನಾನು ಎಷ್ಟೋವೇಳೆ ಈ ರೀತಿ ಆಗುತ್ತಿದ್ದುದನ್ನು ಪತ್ತೆ ಹಚ್ಚಿ ಪೋಲೀಸ್ ಸ್ಟೇಷನ್ನಿಗೆ ದೂರುಕೊಟ್ಟಿದ್ದೇನೆ. 500, 600 ರೂಪಾಯಿ ಲಂಚ ಕೊಟ್ಟು ಬಿಡಿಸಿಕೊಂಡು ಹೋಗಿದ್ದಾರೆ. ಮಂತ್ರಿಗಳಿಗೆ ಚೆನ್ನಾಗಿ ಗೊತ್ತು.

ಇನ್ನೊಂದು ವಿಷಯ. ಪಟೇಲ್ ಶ್ಯಾನಭೋಗರು, ರೆವಿನ್ಯೂ ಇನ್ಸ್‌ಪೆಕ್ಟರ್ ಈ ಮೂರು ಜನರೂ ಸೇರುವುದು, ಮರಗಳನ್ನೆಲ್ಲಾ ಕತ್ತರಿಸುವುದು, ಬೆಂಗಳೂರಿಗೆ ಸಾಗಿಸುವುದು ಈ ರೀತಿ ಮಾಡುತ್ತಿದ್ದಾರೆ. ಯಾರು ಸ್ವಾಮಿ, ಕೇಳುವವರು? ಊರಿಗೆ ತಾಯಿ, ತಂದೆಯಂತೆ ಇರುವವರು ಪಟೇಲ ಶ್ಯಾನುಭೋಗರು. ಇವರಿಬ್ಬರ ಕೈಯಿಂದ ತಪ್ಪಿಸಿಕೊಳ್ಳುವುದಕ್ಕೆ ಯಾರಿಂದಲೂ ಆಗುವುದಿಲ್ಲ. ಈ ಶ್ಯಾನುಭೋಗರ ಕಾಟ ಶ್ಮಶಾನಕ್ಕೆ ಹೋಗುವವತನಕ ತಪ್ಪುವುದಿಲ್ಲ. ಪಟೇಲರ ಕಾಟ ಎಂದರೆ ಚಟ್ಟಕಟ್ಟುತ್ತಾರೆ ನೋಡಿ, ಆ ಚಟ್ಟ ಕಟ್ಟಿ ಅದರ ಮೇಲೆ ಇಡುವವತನಕ ತಪ್ಪುವುದಿಲ್ಲ. ಹೀಗಾಗಿದೆ. (ನಗು!). ಫಾರೆಸ್ಟ್‌ನಲ್ಲಿ ಮರಗಳನ್ನು ಕತ್ತರಿಸುವುದು, ಅದನ್ನು ಸುಡುವುದು ಇದೆಲ್ಲಾ ಮಾಡುತ್ತಾ ಇದ್ದಾರೆ. ಮಾನ್ಯ ಮಂತ್ರಿಗಳಿಗೆ ಗೊತ್ತಿದೆ.

7 P.M.

ಪೋಲೀಸು ಖಾತೆಯ ವಿಚಾರದಲ್ಲಿ ಬಹಳ ಸದಸ್ಯರು ಮಾತನಾಡಿದ್ದಾರೆ. ಬಾಕೀ ಡಿಪಾರ್ಟ್‌ಮೆಂಟುಗಳ ವಿಚಾರದಲ್ಲಿಯೂ ಮಾತನಾಡಿದ್ದಾರೆ; ಆದರೆ ಈ ಡಿಪಾರ್ಟ್‌ಮೆಂಟುಗಳ ವಿಚಾದಲ್ಲಿ ಒಬ್ಬರಲ್ಲ ಒಬ್ಬರು ಅಸ್ತು ಎಂದಿದ್ದಾರೆ. ಆದರೆ ಪೋಲೀಸ್ ಇಲಾಖೆಯ ವಿಚಾರದಲ್ಲಿ ಎಷ್ಟೋ ಸದಸ್ಯರು ಮಾತನಾಡಿದರು; ಅವರಲ್ಲಿ ಒಬ್ಬರಾದರೂ ಆ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ಒಂದು ಒಳ್ಳೆಯ ಮಾತನ್ನಾಡಲಿಲ್ಲ. ಅಸ್ತು ಎಂದು ಈ ಇಲಾಖೆಯ ವಿಚಾರದಲ್ಲಿ ಒಬ್ಬರೂ ಹೇಳಲಿಲ್ಲ. ಆದ್ದರಿಂದ ಆ ಪೋರ್ಟ್‌ಫೋಲಿಯೋ ಮಂತ್ರಿಗಳು ಈ ವಿಚಾರ ಆಲೋಚನೆ ಮಾಡಿ ಪರಿಹಾರ ಒದಗಿಸಿಕೊಡಬೇಕು. ಜಂಟಿಜವಾಬ್ದಾರಿ ಮಂತ್ರಿಮಂಡಲ ಮಾಡಿಕೊಂಡಿರುವುದರಿಂದ, ಮಂತ್ರಿಮಂಡಲದವರು ಈ ಇಲಾಖೆ ಏಕೆ ಹೀಗಾಯಿತು ಎನ್ನುವುದನ್ನು ಯೋಚಿಸಿ, ಸರಿಯಾದ ಪರಿಹಾರ ಮಾಡಿಕೊಡಬೇಕು. ನಮ್ಮ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಆಂಧ್ರ ಬಾರ್ಡರ್‌ನಲ್ಲಿ ಎರಡು ಕೋಟಿ ರೂಪಾಯಿ ಬೆಲೆ ಬಾಳುವ ಗಂಧದ ಕಟ್ಟಿಗೆ ಇದೆ. ಅಲ್ಲಿಗೆ ಒಂದು ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್ ಕೊಡಿ, ಎರಡು ಕೋಟಿ ರೂಪಾಯಿ ಆಸ್ತಿ ಹೋಗಿ ನಷ್ಟವಾಗುತ್ತಿದೆ ಎಂದು ಸ್ಥಳದ ಡಿ.ಎಸ್.ಪಿ. ಯವರ ಹತ್ತಿರ ಹೋಗಿ ಹೇಳಿದರೆ, ಅವರು ಉತ್ತರ ಕೊಟ್ಟರು, "ನಿಮ್ಮ ಸರ್ಕಾರ ಇದೆ, ಅಲ್ಲಿಹೋಗಿ ಆರ್ಡರ್ ಮಾಡಿಸಿಕೊಳ್ಳಿ" ಎಂದರು. ಇದೇನು, ಸ್ವಾಮಿ, ಉತ್ತರ? ನಾನು ಹೇಳಿದೆ, "ಸ್ವಾಮಿ ನಮ್ಮ ಮೈಸೂರು ಸರ್ಕಾರದಿಂದ ಸಂಬಳ ತೆಗೆದುಕೊಳ್ಳುತ್ತೀರೋ, ಕೇರಳ ಸರ್ಕಾರದಿಂದ ತೆಗೆದುಕೊಳ್ಳುತ್ತೀರೋ? ಕೇರಳ ಸರ್ಕಾರದಿಂದ ಸಂಬಳ ತೆಗೆದುಕೊಳ್ಳುತ್ತಿದ್ದರೆ ನಿಮಗೆ ಇಲ್ಲಿ ಕೆಲಸವಿಲ್ಲ" ಎಂದೆ. ಆದ್ದರಿಂದ ಪೋಲೀಸಿನವರಲ್ಲಿ ಎಷ್ಟು ದಕ್ಷತೆ ಇದೆಯೆಂದು ಆಲೋಚನೆ ಮಾಡಬೇಕು. ಹಗಲು ಹೊತ್ತಿನಲ್ಲಿ ಖೂನಿಗಳಾಗುತ್ತಿವೆ ನಮ್ಮ ಜಿಲ್ಲೆಯಲ್ಲಿ. ಪಾನನಿರೋಧದ ವಿಚಾರ ಹೇಳುವುದಾದರೆ, ಕಳ್ಳಬಟ್ಟಿ ಇಳಿಸುವವರನ್ನು ಮಾತನಾಡಿಸುವವರೇ ಇಲ್ಲ. ಕೇಸುಗಳನ್ನು ಹಾಕುವಾಗ ಏನು ಮಾಡುತ್ತಾರೆಂದರೆ, ಬಡವರನ್ನು ಕರೆದು ಕೊಂಡು ಬಂದು ಸುಮ್ಮನೆ ಕೇಸುಹಾಕುತ್ತಾರೆ. ಬಟ್ಟಿ ಇಳಿಸುವುದರಲ್ಲಿ ಮಾಮೂಲು ತೆಗೆದುಕೊಳ್ಳುತ್ತಾರೆ. ನಮ್ಮ ಊರಿನಲ್ಲಿರುವ ಮ್ಯಾಜಿಸ್ಟ್ರೇಟರು ಬಹಳ ಸತ್ಯವಂತರು. ಅವರು ಎಷ್ಟು ಕೇಸುಗಳನ್ನು ಡಿಸ್‌ಮಿಸ್ ಮಾಡಿದ್ದಾರೆಂಬ ಅಂಕಿ ಅಂಶಗಳನ್ನು ತರಿಸಿಕೊಳ್ಳಿ. ನಮ್ಮೂರಿನ ಲಾಯರುಗಳಲ್ಲಿ ಏನು ಒಳತಂತ್ರ ಇದೆಯೋ ಗೊತ್ತಿಲ್ಲ. ಲಾಯರ್ ಇಟ್ಟರೆ, ಕೇಸ್ ಡಿಸ್‌ಮಿಸ್. ಏನಾದರೂ ಲಾಯರ್ ಇಲ್ಲ ಎಂದು ಅಂದರೆ, ಜೈಲ್. ಯಾವ ನ್ಯಾಯ ಸ್ವಾಮಿ? ಈ ಸತ್ಯವಂತರ ವಿಚಾರವನ್ನು ಸ್ವಲ್ಪ ವಿಚಾರಮಾಡಿ, ನಾನು ಚೀಫ್ ಮಿನಿಸ್ಟರಿಗೆ ಬರೆದುಕೊಟ್ಟಿದ್ದೇನೆ. "ನೀವು ಎಷ್ಟು ಕೇಸುಗಳು ತೆಗೆದುಕೊಂಡು ಬರುತ್ತೀರೋ, ತೆಗೆದುಕೊಂಡುಬನ್ನಿ ಡಿಸ್‌ಮಿಸ್ ಮಾಡುತ್ತೇನೆ" ಎಂದು ಓಪನ್ ಕೋರ್ಟಿನಲ್ಲಿ ಪೋಲೀಸಿನವರಿಗೆ ಮ್ಯಾಜಿಸ್ಟ್ರೇಟರು ಹೇಳಿದರು. ಹೀಗಾದರೆ ಪೋಲೀಸಿನವರು ಹೇಗೆ ಕೆಲಸ ಮಾಡುವುದು? ಇದಕ್ಕೆ ಬೇಗ ನಿಗಾ ಕೊಡಬೇಕು, ಸ್ವಾಮಿ. ಈ ವಿಚಾರದಲ್ಲಿ ಇನ್ನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ.

ನಮ್ಮ ಪಿ. ಡಬ್ಲ್ಯು. ಡಿ. ಮಂತ್ರಿಗಳ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಅವರು ನುಗು, ತುಂಗಭದ್ರ ಮುಂತಾದ ದೊಡ್ಡ ದೊಡ್ಡ ಪ್ರಾಜೆಕ್ಟು

(ಶ್ರೀ ಎ. ಮುನಿಯಪ್ಪ)

ಗಳನ್ನು ಹಾಕಿದ್ದೇವೆ, ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟುತ್ತಾ ಇದ್ದೇವೆ ಎಂದು ಹೇಳುತ್ತಾರೆ. ಇದೇ ತರಹ ಭಾಷಣವನ್ನು ನಮ್ಮ ಜನಗಳಲ್ಲಿ ಮಾಡುತ್ತಾ ದಾಮೋದರ್‌ವ್ಯಾಲಿ, ತುಂಗಭದ್ರ ಪ್ರಾಜೆಕ್ಟುಗಳನ್ನು ಮಾಡಿದ್ದಾರೆ ಎಂದು ಹೇಳಿದರೆ, ಅಲ್ಲಿ ಕಟ್ಟಿದರೆ ತಕ್ಷಣ ರೈತನಿಗೆ ಪರಿಹಾರ ಸಿಕ್ಕುತ್ತದೆಯೆ ಎಂದು ಅವರು ಕೇಳುತ್ತಾರೆ. ಅದಕ್ಕೋಸ್ಕರ ಸಣ್ಣ ನೀರಾವರಿ ಕೆಲಸಗಳ ಮೇಲೆ ಗಮನ ಕೊಡಬೇಕು. ತಕ್ಷಣ ಜನಗಳಿಗೆ ರಿಲೀಫ್ ಕೊಡಬೇಕು. ಇದು ಸಿಕ್ಕಬೇಕಾದರೆ, ಒಡೆದುಹೋದ ಕೆರೆಗಳ ರಿಪೇರಿಯಾಗಬೇಕು. ತೂಬುಗಳ ರಿಪೇರಿಯಾಗದೆ, ನೀರು ಸರಿಯಾಗಿ ಹೋಗುತ್ತಿಲ್ಲ. ಇಷ್ಟಾಗಿಯೂ ಕಂದಾಯ ಸರಿಯಾಗಿ ತೆಗೆದುಕೊಳ್ಳುತ್ತಾರೆ. ತೂಬುಗಳು ಒಡೆದುಹೋಗಿರುವ ಕೆರೆಗಳಲ್ಲಿ, ನೀರು ಹತ್ತುವುದಿಲ್ಲ. ಇವುಗಳನ್ನು ಸರಿಮಾಡಿ ಕೊಟ್ಟರೆ, ತಕ್ಷಣ ರಿಲೀಫ್ ಸಿಕ್ಕುತ್ತದೆ.

ರೋಡುಗಳ ವಿಚಾರದಲ್ಲಿ ನಮ್ಮ ಪಿ. ಡಬ್ಲ್ಯು. ಡಿ. ಮತ್ತು ಎಲ್. ಎಸ್ ಜಿ. ಮಿನಿಸ್ಟರು ವಿಶೇಷವಾಗಿ ರಿಲೀಫ್‌ವರ್ಕ್ಸ್ ಎಂದು ಚೆನ್ನಾಗಿ ಮಾಡುತ್ತಿದ್ದಾರೆ. ಆದರೆ ಗ್ರಾಮಾಂತರಗಳಲ್ಲಿ ಹೆಚ್ಚಿನ ರಸ್ತೆಗಳ ಸೌಕರ್ಯವಿಲ್ಲ. ಅದಕ್ಕೆ ಸರಿಯಾದ ಮತ್ತು ಹೆಚ್ಚಿನ ರೋಡುಗಳನ್ನು ಗ್ರಾಮಾಂತರಗಳಲ್ಲಿ ಮಾಡುವಂತೆ ಏರ್ಪಡಿಸಬೇಕು.

ಇನ್ನು ಹರಿಜನರ ಮನೆಗಳಿಗಾಗಿ, ಎಕ್ಸ್ ಕ್ರಿಮಿನಲ್ಸ್ ಗಳಿಗಾಗಿ ಲಕ್ಷಾಂತರ ರೂಪಾಯಿಗಳು ಮತ್ತು ಸಾವಿರಾರು ರೂಪಾಯಿಗಳಷ್ಟು ಹಣವನ್ನು ಖರ್ಚುಮಾಡಲಾಗುತ್ತಿದೆ. ಅದರಲ್ಲೂ ಇವರು ಮನೆಗಳನ್ನು ಕಟ್ಟುವುದಕ್ಕಾಗಿ 200-350 ರೂಪಾಯಿಗಳಷ್ಟು ಸಹಾಯವನ್ನು ಕೊಡುತ್ತಿದ್ದಾರೆ. ಆದರೆ ಹೀಗೆ ಕೊಡುವ ಹಣವು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿಲ್ಲ. ಇದನ್ನು ಸರಕಾರ ಪರಿಶೀಲಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾದುದು ಅಗತ್ಯ. ಹೀಗೆ ಮನೆಗಳಿಗಾಗಿ ಹಣ ತೆಗೆದುಕೊಂಡು ಅದರ ಉದ್ದೇಶವನ್ನು ಯಾರೂ ಸರಿಯಾಗಿ ಪಾಲಿಸುತ್ತಿಲ್ಲ. ತಾಲ್ಲೂಕು ಆಫೀಸಿನಲ್ಲೇನೋ ಮನೆಗಳಿಗಾಗಿ ಎಂದು ಹಣ ತೆಗೆದುಕೊಂಡು ಮನೆಗಳನ್ನೇ ಕೆಲವರು ಕಟ್ಟುತ್ತಿಲ್ಲ. ಹೀಗಾಗಿ ಹಣ ದುರುಪಯೋಗವಾಗುತ್ತಿರುವುದನ್ನು ತಪ್ಪಿಸುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ನನ್ನ ಭಾವನೆ.

ನಮಗೆ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದುವು. ಆದರೆ ನಮ್ಮ ಕೋಲಾರ ಜಿಲ್ಲೆಯಲ್ಲಿರುವ ಕೆಲವು ಪ್ರದೇಶಗಳಲ್ಲಿ ಈಗಲೂ ನಮ್ಮ ಹರಿಜನ ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯ ಬಂದಿವೆಯೇ ಎಂದು ನಾನು ಕೇಳಬೇಕಾಗಿದೆ. ಈ ಹರಿಜನರ ಹೆಣ್ಣು ಮಕ್ಕಳು ಕುಂಕುಮ ಮತ್ತು ಅರಿಸಿನವನ್ನು ಉಪಯೋಗಿಸುವುದಕ್ಕೆ ಅವರಿಗೆ ಸ್ವಾತಂತ್ರ್ಯವಿಲ್ಲ. ಹೂಮುಡಿಯಲಿಕ್ಕೆ ಸ್ವಾತಂತ್ರ್ಯವಿಲ್ಲ. ಹೂ ಏನಾದರೂ ಮುಡಿದರೆ ಆ ಊರಿನ ಜನಗಳು ಅವರನ್ನು ಜಜ್ಜಿಬಿಡುತ್ತಾರೆ. ಪೋಲೀಸಿಗೆ ಕಂಪ್ಲೇಂಟು ಕೊಟ್ಟರೆ 'ಅವರ ಪ್ರಾಣ ಹೋಗಲಿಲ್ಲವಲ್ಲ' ಎಂದು ಕೇಳುತ್ತಾರಲ್ಲ, ಇದೇನು ಸ್ವಾಮಿ? ಆಡಳಿತ ಹೀಗಾದರೆ ಏನುಮಾಡುವುದು?

ಈಚೆಗೆ ಗೌರಿಬಿದನೂರು ತಾಲ್ಲೂಕಿನಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆಗಾಗಿ ಎಂದು ಪ್ರತಿಯೊಂದು ಹರಿಜನರ ಮನೆಯಲ್ಲೂ V.G.D ಮತ್ತು ಮಹಿಳಾ ಸಮಾಜಗಳಿಗಾಗಿ ಗ್ರಾಂಟುಹಂಚಿಕೆ ಎಂದು ಐದು ಹತ್ತು ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಈಗ ನಮ್ಮ ಬಂಗಾರುಪೇಟೆ ತಾಲ್ಲೂಕಿನಲ್ಲಿ ಒಬ್ಬ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರಿದ್ದಾರೆ. ಹಳ್ಳಿಗಳಲ್ಲಿ ಅವರು ಹರಿಜನರ ಮನೆಕಟ್ಟುವುದಕ್ಕಾಗಿ ಬಡ ಹರಿಜನರ ಹಳೆಯ ಮನೆಗಳಿಗೆ ಸರ್ಟಿಫಿಕೇಟನ್ನು ಕೊಡಬೇಕು. ಹೀಗೆ ಒಂದು ಸರ್ಟಿಫಿಕೇಟನ್ನು ಕೊಡುವಾಗ 300 ರೂಪಾಯಿಗಳಿಗೆ ಕಡಮೆ ಇಲ್ಲದೆ ವಸೂಲು ಮಾಡಿ 150 ರೂಪಾಯಿಗಳಷ್ಟು ಅಲ್ಲಿಯ ಆಫೀಸಿನವರಿಗೆ ಹಂಚಿ ಹೀಗೆ ಬಡವರಿಗೆ ತುಂಬ ತೊಂದರೆಯಾಗುತ್ತಿದೆ. ಇದೇರೀತಿ ಕೋಲಾರದಲ್ಲಿರುವ ರೆವೆನ್ಯೂ ಇನ್ಸ್‌ಪೆಕ್ಟರು ಸಹ ಮಾಡುತ್ತಾರೆ. ರಿಕಾರ್ಡು ಮಾಡುವುದಕ್ಕಾಗಿ ಹೀಗೆ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರರು ಹಿಂಸೆ ಮಾಡುತ್ತಿದ್ದಾರೆ. ಒಂದು ಸಲ ಒಬ್ಬ ಬಡ ಹರಿಜನದವನು ಮನೆಯ ಒಂದು ರಿಕಾರ್ಡನ್ನು ಮಾಡಿಸಲು ಅವನಲ್ಲಿ ದುಡ್ಡಿಲ್ಲದೆ ಅವನ ಮನೆಯಲ್ಲಿ ಹೆಂಗಸರ ಕಾಲಿನ ಬೆಳ್ಳಿ ಚೈನನ್ನು ಈ ಇನ್ಸ್‌ಪೆಕ್ಟರಲ್ಲಿ ಇಟ್ಟು ಅನಂತರ ದುಡ್ಡು ಬಂದ ಮೇಲೆ ಇವರಿಗೆ ಕೊಟ್ಟು ವಾಪಸು ಚೈನನ್ನು ತೆಗೆದುಕೊಂಡು ಹೋಗಬೇಕಾಯಿತು. ಹೀಗೆ ಇರುವ ನ್ಯೂನತೆಗಳನ್ನೆಲ್ಲ ಸರಕಾರ ಕೂಡಲೆ ತಪ್ಪಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.

ನಮ್ಮ ಮೈಸೂರು ರಾಜ್ಯದಲ್ಲಿ ರಾಜ್ಯಾಂಗದ 17ನೇ ಸೆಕ್ಷನ್ನಿನ ರೀತಿಯಾಗಿ ಸರಿಯಾದ ಕಾರ್ಯಕ್ರಮವನ್ನು ಕಾರ್ಯಗತ ಮಾಡಬೇಕಾಗಿದ್ದರೆ, ನಮ್ಮ ಹರಿಜನರನ್ನು ಮುಂದಕ್ಕೆ ತರಬೇಕಾಗಿದ್ದರೆ, ನಮ್ಮ ಮಾನ್ಯ ಎಲ್. ಎಸ್. ಜಿ. ಮಿನಿಸ್ಟರು ಬಹಳ ತಾಕತ್ತಿನಿಂದ ಕೆಲಸ ಮಾಡಬೇಕು. ಆ ತಾಕತ್ತಿಲ್ಲದಿದ್ದರೆ ನಮ್ಮನ್ನು ಚಟ್ನಿಯಂತೆ ಅರೆದು ಬಿಡುತ್ತಾರೆ. ಈಗ ಸರಕಾರದಲ್ಲಿ ಹರಿಜನರಿಗಾಗಿ ಏನನ್ನು ಮಾಡಬೇಕಾಗಿದೆ, ಮತ್ತು ಯಾವ ರೀತಿಯಾದ ಕೆಲಸಗಳನ್ನು ಮಾಡಿ ಅವರನ್ನು ಉತ್ತಮಸ್ಥಿತಿಗೆ ತರುತ್ತಾರೆಂಬುದಕ್ಕೆ ಸರಿಯಾದ ಪ್ರಚಾರವೇ ಇಲ್ಲ. ಈ ಹರಿಜನರಿಗಾಗಿ ಎಂದು ಒಬ್ಬ Special officerನ್ನೇ ನೇಮಕ ಮಾಡಿದ್ದಾರೆ. ಆದರೆ ಈ ಅಧಿಕಾರಿಯಿಂದ ಸರಿಯಾಗಿ ಕೆಲಸವಾಗುತ್ತಿಲ್ಲ. ಎಷ್ಟೋ ಮೈಲಿಗಳ ದೂರದಲ್ಲಿ ಈ ಅಧಿಕಾರಿಯಿರುತ್ತಾರೆ. ಆದರೆ ಊರಿಂದೂರಿಗೆ ಹೋಗಿ ಅಲ್ಲಿರುವ ಹರಿಜನರ ಸ್ಥಿತಿಗತಿಗಳನ್ನರಿತು ಅವರಿಗೆ ತಕ್ಕ ಪ್ರೋತ್ಸಾಹವನ್ನು ಕೊಡುತ್ತಿಲ್ಲ. ಮತ್ತು ಅಸ್ಪೃಶ್ಯತಾ ನಿವಾರಣೆಯನ್ನು ದೇಶದಲ್ಲಿ ನಿರ್ಮೂಲ ಮಾಡಲು ಈ ಸ್ಪೆಷಲ್ ಆಫೀಸರಿಗೆ ತಕ್ಕ ಯೋಗ್ಯತೆಯೂ ಇಲ್ಲ. ಎಲ್ಲೆಲ್ಲಿ ಯಾವ ತರಹವಾದ ಅಸ್ಪೃಶ್ಯತೆ ಇದೆ, ಇದಕ್ಕೆ ಪರಿಹಾರವೇನು ಎಂದು ಕೆಲಸ ಮಾಡುತ್ತಿಲ್ಲ. ಹೀಗೆ ಟೀ.ಬಿ.ಗಳಲ್ಲಿರೋದು, ಮೈಲೇಜ್ ಗುರುತು ಹಾಕಿಕೊಳ್ಳುವುದು, ಟಿ. ಎ. ಮತ್ತು ಡಿ. ಎ. ಹೊಡೆಯುವುದು, ಅನಂತರ ಮೂರು ನಾಲ್ಕು ತಿಂಗಳ ತರುವಾಯ ಎಂದೋ ಒಂದು ದಿವಸ ಬಂದು 'ಏನಯ್ಯಾ! ನೀನು ನಿನ್ನ ಮನೆಯನ್ನು ಕಟ್ಟಿದ್ದೀಯೋ' ಎಂದು ಕೇಳಿ ಬಿಡುತ್ತಾರೆ. ಇದೇ ಏನು ನಮಗೆ ಆ ಸ್ಪೆಷಲ್ ಆಫೀಸರುಗಳಿಂದ ಆಗತಕ್ಕ ಪ್ರಯೋಜನ? ಅಸ್ಪೃಶ್ಯತೆ ಹಿಂದೂ ಧರ್ಮಕ್ಕೆ ಒಂದು ಕ್ಷಯರೋಗದಂತಿದೆ. ಅಸ್ಪೃಶ್ಯತೆ ಎನ್ನುವುದು ಒಬ್ಬೊಬ್ಬರಿಂದೊಬ್ಬರಿಗೆ ಕ್ಷಯ ರೋಗದ ಮಾದರಿಯಲ್ಲಿ ಮುಂದುವರಿಯುತ್ತಿದೆ. ಆದುದರಿಂದ ಅಸ್ಪೃಶ್ಯತೆಯ ನಿವಾರಣೆ ಕೇವಲ ನಮ್ಮ ಒಬ್ಬ ಹರಿಜನ ಮಂತ್ರಿಗಳಿಂದಲೇ ಆಗಲಾರದು. ಇದಕ್ಕೆ ಮಂತ್ರಿ ಮಂಡಲದಲ್ಲಿರತಕ್ಕ ಎಲ್ಲ ಮಂತ್ರಿಗಳೂ ಭುಜಕ್ಕೆ ಭುಜಕೊಟ್ಟು ದೇಶದ ಕಲ್ಯಾಣಕ್ಕಾಗಿ ಈ ಅಸ್ಪೃಶ್ಯತೆಯನ್ನು ನಿರ್ಮೂಲಮಾಡಬೇಕೆಂದು ಕೇಳಿಕೊಂಡು ನನಗೆ ಈ ಎರಡು ಮಾತನಾಡಲು ಅವಕಾಶ

ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(*Sri K. L. Narasimhaiya rose*)

ಅಧ್ಯಕ್ಷರು.—ಶ್ರೀ ನರಸಿಂಹಯ್ಯನವರೇ, ತಾವು ಸ್ವಲ್ಪ ಕುಳಿತುಕೊಳ್ಳಿ. ನಾನೀಗ ನಾಳೆ ದಿವಸ ಮಂತ್ರಿಗಳಿಗೆ ಬಡ್ಜೆಟ್ ಭಾಷಣಗಳ ಬಗ್ಗೆ ಉತ್ತರ ಕೊಡಲು ಅವರಿಗೆಷ್ಟು ವೇಳೆ ಬೇಕಾಗಿರುತ್ತೆಂಬುದನ್ನು ತಿಳಿಯಬೇಕಾಗಿದೆ. ಯಾವ ಯಾವ ಮಂತ್ರಿಗಳು ಮಾತನಾಡುತ್ತಾರೆ, ಯಾರುಯಾರಿಗೆ ಎಷ್ಟೆಷ್ಟು ಕಾಲಾವಕಾಶ ಬೇಕಾಗಿರುತ್ತೆಂಬುದನ್ನು ಮಂತ್ರಿಗಳು ತಿಳಿಸಿದರೆ ಅನುಕೂಲವಾಗುತ್ತದೆ.

ಶ್ರೀ ವಿ. ವೆಂಕಟಪ್ಪ (ವಿದ್ಯಾಮಂತ್ರಿಗಳು).— ಎಲ್ಲ ಮಂತ್ರಿಗಳೂ ನಾಳೆ ಮಾತನಾಡುತ್ತಾರೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಯೋಜನಾಶಾಖೆಯ ಉಪ-ಮಂತ್ರಿಗಳು).—ನಾಳೆ ಇಡೀ ದಿನ ನಮಗೆ ಬೇಕಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಇಷ್ಟೊಂದು ಜನರು ಕೇಳಿರತಕ್ಕ ವಿಷಯಗಳಿಗೆಲ್ಲ ಉತ್ತರ ಕೊಡಬೇಕಾದರೆ ಸುಮಾರು ಐದು ಘಂಟೆಗಳ ಕಾಲವಾದರೂ ಬೇಕಾಗಬಹುದು.

ಅಧ್ಯಕ್ಷರು.—ಮೂರು ಘಂಟೆಗಳ ಕಾಲ ಸಾಲದೆ!

ಶ್ರೀ ವಿ. ವೆಂಕಟಪ್ಪ.—ಅಷ್ಟಾದರೆ ನಾವು ಸದಸ್ಯರು ಕೇಳಿರತಕ್ಕ ಎಲ್ಲ ವಿಚಾರಗಳಿಗೂ ಉತ್ತರಕೊಡಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಹಾಗೆ ಮಂತ್ರಿಗಳು ಸದಸ್ಯರು ಕೇಳಿರತಕ್ಕ ವಿಷಯಗಳಿಗೆಲ್ಲ ಉತ್ತರ ಒದಗಿಸದೆ ಹೋದರೆ ನಾವು ಇಷ್ಟು ಮಾತನಾಡಿದ್ದಕ್ಕಾದರೂ ಏನು ಪ್ರಯೋಜನ!

ಅಧ್ಯಕ್ಷರು.—ಆ ರೀತಿ ಹೇಳಿದರೆ ಏನು ಪ್ರಯೋಜನ! ಸದಸ್ಯರುಗಳಿಗೆ ಅವರು ಕೇಳಿರತಕ್ಕ ಅಂಶಗಳಿಗೆಲ್ಲ ಮಂತ್ರಿಗಳು ಉತ್ತರ ಕೊಡಬೇಕಾಗಿದ್ದರೆ ಅವರಿಗೆ ತಾವೆಲ್ಲರೂ ಸಾಕಷ್ಟು ಕಾಲಾವಕಾಶ ಒದಗಿಸಿಕೊಡಬೇಕು. ತಾವೂ ಮಾತನಾಡಬೇಕು ಮಂತ್ರಿಗಳೂ ಉತ್ತರಕೊಡಬೇಕೆಂದರೆ ಎರಡೂ ನಮಗೆ ಇರತಕ್ಕ ಕಾಲದಲ್ಲಿ ನಡೆಯಲು ಸಾಧ್ಯವಿಲ್ಲ. ಆದುದರಿಂದ ಒಬ್ಬೊಬ್ಬ ಮಂತ್ರಿಗಳಿಗೆ ಬಹುಶಃ ಎಷ್ಟು ವೇಳೆ ಬೇಕಾಗಬಹುದೆಂಬುದನ್ನು ತಿಳಿದುಕೊಳ್ಳೋಣ.

ಶ್ರೀ ಜಿ. ಅಣ್ಣಾರಾವ್ (ಅಫ್‌ಜಲಪುರ).–ಅಧ್ಯಕ್ಷರೇ, ಬಡ್ಜೆಟ್ ಭಾಷಣಗಳ ಮೇಲಿನ ಉತ್ತರವನ್ನು ಮಾನ್ಯ ಹಣಕಾಸಿನ ಸಚಿವರೊಬ್ಬರು ಕೊಟ್ಟರೆ ಸಾಕು. ಇನ್ನುಳಿದ ವಿಚಾರಗಳ ಬಗ್ಗೆ ಇತರ ಮಂತ್ರಿಗಳು ಅದನ್ನೆಲ್ಲ ಡಿಮ್ಯಾಂಡ್‌ಗಳ ಮೇಲೆ ಚರ್ಚೆ ನಡೆಯುವಾಗ ತಿಳಿಸಬಹುದು. ಈ ರೀತಿಯ ಒಂದು ಸಂಪ್ರದಾಯ ಬೇರೆ ವಿಧಾನ ಸಭೆಗಳಲ್ಲೂ ನಡೆಯುತ್ತಿದೆ. ಈ ರೀತಿ ಮಾಡಿದರೆ ಅನುಕೂಲವಾಗುತ್ತದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.- ತಾವು ಹೇಳುವ ಪ್ರಕಾರ ಕೆಲವು ಕಡೆಗಳಲ್ಲಿ ಆ ಪ್ರೊಸೀಜರ್ ಇದೆ. ಫೈನಾನ್ಸ್ ಮಂತ್ರಿಗಳೊಬ್ಬರು ಮಾತ್ರ ಬಡ್ಜೆಟ್ ಚರ್ಚೆಗಳಿಗೆ ಉತ್ತರ ಕೊಟ್ಟ ನಂತರ ಉಳಿದ ಮಂತ್ರಿಗಳು ಡಿಮ್ಯಾಂಡ್‌ಗಳ ಚರ್ಚೆಕಾಲದಲ್ಲಿ ಉಳಿದ ವಿಚಾರಗಳಿಗೆ ಉತ್ತರ ಕೊಡಬಹುದು. ಆದರೆ ಬಡ್ಜೆಟ್ ಚರ್ಚೆಯ ಮೇಲೆ ಪ್ರತಿಯೊಬ್ಬ ಮಂತ್ರಿಗಳೂ ಉತ್ತರ ಕೊಡಲು ಇಷ್ಟಪಟ್ಟರೆ ಅವರಿಗೂ ಅವಕಾಶಕೊಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಧ್ಯಕ್ಷರೇ, ಕೆಲವು ಸದಸ್ಯರು ಬಹಳ ಡೀಟೇಲಾಗಿ ಅಟ್ಯಾಕ್ ಮಾಡಿದ್ದಾರೆ. ಅಂಥವರ ಪಾಯಿಂಟ್‌ಗಳಿಗೆಲ್ಲ ನಾವೂ ಸಹ ಡೀಟೇಲಾಗಿ ಉತ್ತರ ಕೊಡಬೇಕಾಗಿರುತ್ತದೆ. ಆದುದರಿಂದ ನಮಗೆ ಸಾಕಷ್ಟು ಕಾಲಾವಕಾಶವನ್ನು ತಾವು ಕೊಡಲೇಬೇಕಾಗಿದೆ.

ಅಧ್ಯಕ್ಷರು.—ಹೀಗೆ ಮಾಡೋಣ : ನಾಳೆ ದಿವಸ ಪ್ರಶ್ನೋತ್ತರಗಳ ಚರ್ಚೆಯನ್ನು ಮನ್ನಮಾಡಿ ಒಂದು ಘಂಟೆಯಿಂದ ಮೂರು ಘಂಟೆಯತನಕ ಬಡ್ಜೆಟ್ಟಿನ ಮೇಲಿನ ಸಾಮಾನ್ಯ ಚರ್ಚೆಯನ್ನು ಮುಂದುವರಿಸಿ ಅನಂತರ ನಾಲ್ಕು ಘಂಟೆಗಳಕಾಲ ಎಂದರೆ ಮಧ್ಯಾಹ್ನ ಮೂರು ಘಂಟೆಗಳಿಂದ ಸಾಯಂಕಾಲ ಏಳು ಘಂಟೆಗಳ ವರೆಗೂ ಮಂತ್ರಿಗಳಿಗೆ ಉತ್ತರಕೊಡಲು ಅವಕಾಶ ಮಾಡೋಣ. ಸಲ್ಪ ಹೆಚ್ಚು ಕಡಮೆ ಈ ಒಂದು ತೀರ್ಮಾನದಂತೆ ನಾಳಿನ ಕಾರ್ಯ ನಡೆಸೋಣ.

*ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ಸ್ವಾಮಿ, 1958-59ನೇ ಸಾಲಿನ ಈ ಸರ್ಪ್ಲಸ್ ಬಡ್ಜೆಟ್ಟನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ಮೊದಲನೆಯದಾಗಿ, ವ್ಯವಸಾಯದ ವಿಚಾರದಲ್ಲಿ ಅನೇಕ ಮಾನ್ಯ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ಅದನ್ನೇ ಪುನಃ ಹೇಳುವದಕ್ಕೆ ನಾನು ಇಷ್ಟಪಡುವದಿಲ್ಲ. ವ್ಯವಸಾಯದ ವಿಚಾರದಲ್ಲಿ ಸರಕಾರ ಸಾಕಷ್ಟು ಗಮನಕೊಟ್ಟಿಲ್ಲವೆಂದು ಮಾತ್ರ ಹೇಳಿದರೆ ಸಾಕು ಎಂದು ನನಗೆ ಅನಿಸುತ್ತದೆ. ವ್ಯವಸಾಯ ಇಲಾಖೆಯ ನೌಕರರು ಸುಮ್ಮನೆ ಬುಷ್ ಕೋಟು ಹಾಕಿಕೊಂಡು ಹಳ್ಳಿಯಿಂದ ಹಳ್ಳಿಗೆ ತಿರುಗಾಡಿದರೆ ಅದರಿಂದ ರೈತರಿಗೆ ಏನೂ ಲಾಭವಾಗಿಲ್ಲ. ಆಹಾರ ಉತ್ಪತ್ತಿಯೂ ಹೆಚ್ಚಾಗಿಲ್ಲ. ವ್ಯವಸಾಯ ಇಲಾಖೆಯವರು ನಿಜವಾಗಿ ರೈತನಿಗೆ ಬೇಕಾಗತಕ್ಕ ಒಳ್ಳೆಯ ಬೀಜ, ಗೊಬ್ಬರ, ವ್ಯವಸಾಯ ಉಪಕರಣ ಮುಂತಾದವುಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಬೇಕಾದದ್ದು ಅಗತ್ಯವಾಗಿದೆ. ಈ ಅಂಶವನ್ನು ಸರಕಾರ ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಬೇಕಾಗಿದೆ.

ವ್ಯವಸಾಯ ಇಲಾಖೆಯಲ್ಲಿ ಈ field workers ಎಲ್ಲಿದ್ದಾರೋ ನನಗೆ ಗೊತ್ತಿಲ್ಲ. ಸ್ವತಃ ಬೇಸಾಯ ಮಾಡುವವರಿಗೆ ಯಾವ ತರದ ಸಹಾಯವೂ ದೊರೆಯುತ್ತಿಲ್ಲ. ಸೊಸೈಟಿಯ ಮುಖಾಂತರ ರೈತರಿಗೆ ಗೊಬ್ಬರ ಸರಿಯಾಗಿ ದೊರಯುತ್ತಿಲ್ಲ. ವ್ಯವಸಾಯ ಇಲಾಖೆಯ ಅಧಿಕಾರಿಗಳು ರೈತನಿಗೆ ಸರಿಯಾಗಿ ಸಹಾಯವನ್ನು ಒದಗಿಸುತ್ತಿಲ್ಲವೆಂದು ನಾನು ಹೇಳುವುದನ್ನು ಕಟುವಾಗಿ ನಾನು ಟೀಕೆ ಮಾಡುತ್ತಿದ್ದೇನೆಂದು ಯಾರೂ ತಿಳಿಯಬಾರದು. ನಾನು ಹೇಳುತ್ತಿರುವುದು ಬಹಳ ಕಡಮೆಯಾಗಿದೆ; ವಸ್ತುಸ್ಥಿತಿ ಏನಿದೆ ಎಂಬುದನ್ನು ಹೇಳಲು ನಾನು ಇಚ್ಛೆ ಪಡುತ್ತೇನೆ. ರೈತನಿಗೆ ದೊರೆಯಬೇಕಾದ ಸಹಾಯ ನಿರೀಕ್ಷಣೆ ಮಾಡಿದ್ದರಲ್ಲಿ ಒಂದು ರೂಪಾಯಿಯಲ್ಲಿ ಒಂದು ಕಾಸು ಸಹ ಸಹಾಯ ದೊರೆಯುತ್ತಿಲ್ಲ.

ಇನ್ನು ಎರಡನೆಯದಾಗಿ, ವೆಟೆರಿನರಿ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳಬೇಕಾಗಿದೆ. ಮೊದಲು ರೆವೆನ್ಯೂ ಡಿಪಾರ್ಟ್‌ಮೆಂಟು ಕೆರೆಗಳ ಮೀನು ಹರಾಜು ಹಾಕಿ ಅದರಿಂದ ಹೆಚ್ಚು ದುಡ್ಡು ಬರುತ್ತಿತ್ತು; ಈಗ ಅದನ್ನು ವೆಟೆರಿನರಿ ಡಿಪಾರ್ಟ್‌ಮೆಂಟಿಗೆ ಕೊಟ್ಟಿದ್ದಾರೆ. ಎರಡು ಮೂರು ವರ್ಷಗಳ ಲೆಕ್ಕ ತೆಗೆದುಕೊಂಡು ನೋಡಿದರೆ, ಕೆರೆಗಳ ಮೀನುಗಳನ್ನು ಹರಾಜು ಮಾಡಿದ್ದರೆ ಎಷ್ಟು ದುಡ್ಡು ಬರಬಹುದಾಗಿತ್ತು ಎಂಬುದನ್ನು ಹೇಳಲು ಆಗುವದಿಲ್ಲ. ಈ ಕೆರೆಗಳಲ್ಲಿಯ ಮೀನುಗಳನ್ನು ಹಿಡಿದು ಮಾರಾಟ ಮಾಡತಕ್ಕ ವಿಚಾರದಲ್ಲಿ ವೆಟೆರಿನರಿ ಡಿಪಾರ್ಟ್‌ಮೆಂಟಿನಲ್ಲಿ ಒಂದು ಕೋಆರ್ಡಿನೇಷನ್

(ಶ್ರೀ ಕೆ. ಎಲ್. ನರಸಿಂಹಯ್ಯ.)

ಇಲ್ಲ. ಮೀನುಗಳ ಬಾಬಿನಲ್ಲಿ ಸರಕಾರಕ್ಕೆ ದುಡ್ಡು ಸರಿಯಾಗಿ ಬರುತ್ತಿಲ್ಲವೆಂದು ತಿಳಿಯಪಡಿಸುತ್ತೇನೆ.

ಮೂರನೆಯದಾಗಿ ಅರಣ್ಯಶಾಖೆ. ಇವುಗಳೆಲ್ಲಾ ಒಬ್ಬರೇ ಮಂತ್ರಿಗಳಿಗೆ ಸೇರಿರುವುವುಗಳಾಗಿರುವುದರಿಂದ ಈಗಲೇ ಸ್ವಲ್ಪಮಟ್ಟಿಗೆ ಹೇಳುತ್ತೇನೆ. ಫಾರೆಸ್ಟ್ ವಿಷಯದಲ್ಲಿ ನಮ್ಮ ಜಿಲ್ಲೆಯಲ್ಲಿ ಆಗಿರತಕ್ಕ ಕೆಲಸವನ್ನು ಲೆಕ್ಕಹಾಕಿದರೆ, ಸ್ವಲ್ಪ ಸಂತೋಷದಿಂದಲೇ ನಾನು ಹೇಳಬೇಕು, ಅಲ್ಲಿ ಸ್ವಲ್ಪಮಟ್ಟಿಗೆ ಕೆಲಸನಡೆದಿದೆ.

ವಿದ್ಯಾಭ್ಯಾಸಕ್ಕೆ ಸರ್ಕಾರದವರು ಕೊಟ್ಟಿರತಕ್ಕ ದುಡ್ಡು ದೇಶದ ಉತ್ಪತ್ತಿಯಲ್ಲಿ 1.5 ಭಾಗದಷ್ಟಿದೆ. ಆದರೂ ಈ ಇಲಾಖೆಯಲ್ಲಿ ನಿರೀಕ್ಷಿಸಿದಷ್ಟು ತ್ವರಿತವಾಗಿ ಕೆಲಸನಡೆಯುತ್ತಿಲ್ಲ. ಈಗ ಅನೇಕ ಪುಣ್ಯಾತ್ಮರು ಎಷ್ಟೋ ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಿಕೊಟ್ಟು ಇಂದು ಅವುಗಳನ್ನು ಸರ್ಕಾರ ಎಂದಿಗೆ ವಹಿಸಿಕೊಳ್ಳುತ್ತಾರೋ ಎಂದು ಮಾನ್ಯ ಮಂತ್ರಿಗಳಿಗೆ ಹೇಳಿಕೊಳ್ಳುತ್ತಿದ್ದಾರೆ. ನಮ್ಮ ಒಂದು ಕ್ಷೇತ್ರದ ಬಗ್ಗೆಯೇ ಹೇಳುವುದಾದರೆ, ಅಲ್ಲಿ 18 ಸ್ಕೂಲುಗಳನ್ನು ಕಟ್ಟಿರುವವರು ಸರ್ಕಾರದವರಿಗೆ, ಮಂತ್ರಿಗಳಿಗೆ, ಡಿ.ಪಿ.ಐ.ಗೆ ಪದೇ ಪದೇ ಕಾಗದ ಬರೆಯುತ್ತಾ, ತಮ್ಮ ಬಿಲ್ಡಿಂಗನ್ನು ವಹಿಸಿಕೊಳ್ಳಿ ಎಂದು ಕೇಳಿಕೊಳ್ಳುತ್ತಿದ್ದರೂ ಇವತ್ತಿನವರೆಗೂ ತೆಗೆದುಕೊಂಡಿಲ್ಲ. ಇದೇನು ಅಲ್ಲಿರತಕ್ಕ ಅಧಿಕಾರಿಗಳಿಗೆ ಮೇಲಿನಿಂದ ಬರುವ ಆರ್ಡರುಗಳನ್ನು ಓದುವುದಕ್ಕೇ ಬರವುದಿಲ್ಲವೋ ಏನೋ ಗೊತ್ತಿಲ್ಲ. ಏಕೆಂದರೆ, ಈ ಅನೇಕ ಬಿಲ್ಡಿಂಗ್‌ಗಳು maintenance ಮಾಡುವುದಿಲ್ಲದೆ ಬಿದ್ದುಹೋಗುವ ಸ್ಥಿತಿಗೆ ಬಂದಿರುವುದನ್ನು ಕಂಡು ನಾನೇ 4-5 ಅರ್ಜಿಗಳನ್ನು ಮಂತ್ರಿಗಳಿಗೆ ಕೊಟ್ಟಿದ್ದೇನೆ. ಇದುವರೆಗೂ ಅದರಮೇಲೆ ಏನೂ ಕಾರ್ಯಕ್ರಮ ಕೈಕೊಂಡಿಲ್ಲ. ಮಧ್ಯಾಹ್ನದ ಉಪಾಹಾರಕ್ಕೆ ಮಕ್ಕಳಿಗೆ ಏನಾದರೂ ಏರ್ಪಾಡು ಮಾಡಬೇಕೆಂದು ಹಿಂದಿನಿಂದಲೂ ಹೇಳುತ್ತಿದ್ದೇವೆ. ಒಮ್ಮೆ 10,000 ರೂಪಾಯಿಗಳನ್ನು ಕೊಟ್ಟಿದ್ದೇವೆಂತಲೂ ಹೇಳಿದರು. ಆದರೂ, ಇವತ್ತಿನವರೆಗೂ ಎಲ್ಲಿಗೂ ಕೊಡದೆ ಹಣವನ್ನು lapse ಮಾಡಿದ್ದಾರೆ. ಸರ್ಕಾರದಿಂದ ಬರುತ್ತದೆಂಬ ಆಸೆಯಿಟ್ಟುಕೊಂಡು ಅಧಿಕಾರಿಗಳು ಖರ್ಚು ಮಾಡಿದ್ದರೆ, ಇಂಡಿಯಾ ಸರ್ಕಾರದಿಂದಲಾದರೂ ಹಣ ಸಹಾಯ ಬರುತ್ತಿತ್ತು. ಈಗ ಅದೂ ಸಹಾಯವಿಲ್ಲದಹಾಗೆ ಮಾಡಿಕೊಂಡು ಈ ಹಣವನ್ನು ಲ್ಯಾಪ್ಸ್ ಮಾಡಿದ್ದಾರೆ.

ಕೆಲವುಕಡೆ Compulsory Education ಜಾರಿಯಲ್ಲಿದೆ. ಉದಾಹರಣೆ ನಮ್ಮ ಕ್ಷೇತ್ರದಲ್ಲೇ ಇದೆ. ಈ ಆಕ್ಟನ್ನು ಜಾರಿಗೆ ಕೊಟ್ಟಾಗ ಸ್ಕೂಲಿಗೆ ಕಳುಹಿಸದೆ ಹೋದರೆ, ಅಂಥ ಕೇಸುಗಳನ್ನು try ಮಾಡುವುದಕ್ಕೆ ಅಮಲ್ದಾರರಿಗೆ ಅಧಿಕಾರ ಕೊಟ್ಟಿತ್ತು. ಈಚೆಗೆ, ಅಮಲ್ದಾರರಿಗೆ ಕೆಲಸ ಜಾಸ್ತಿಯೆಂದು ಹೇಳಿ ಅವರ ಅಧಿಕಾರವನ್ನು ತಪ್ಪಿಸಿಬಿಟ್ಟರು. ಆದರೆ ಹಾಗೆ ಮಾಡುವಾಗ ಬೇರೆಯವರಿಗೆ ಆದರೂ ಅದನ್ನು ವಹಿಸಬೇಕಾಗಿತ್ತು. ಅದನ್ನು ಮಾಡಲಿಲ್ಲ. ಮೊದಲು ಪ್ರತಿಯೊಂದು ಹಳ್ಳಿಯಲ್ಲೂ ಒಂದು ಬ್ರಾಂಚ್ ಸ್ಕೂಲ್ ಎಂದು ಮಾಡಿ, attendance officers ಎಂದು ನೇಮಿಸಿ ಕೆಲಸ ಚೆನ್ನಾಗಿ ನಡೆಯುತ್ತಿತ್ತು. ಈಗಲಾದರೋ ಕೇಸನ್ನು ಎಲ್ಲಿ ಹಾಕಬೇಕೆಂಬುದುದೇ ಗೊತ್ತಿಲ್ಲದೆ, ಮೊದಲಿನ checking ಕಡಮೆಯಾಗಿ ಸ್ಕೂಲಿಗೆ ಬರುವ ಮಕ್ಕಳ ಸಂಖ್ಯೆ ಕಡಮೆಯಾಗಿದೆ. ಈ ವಿಷಯದಲ್ಲಿ ವಿದ್ಯಾ ಮಂತ್ರಿಗಳು ಸ್ವಲ್ಪಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯ ವಿಷಯ. ನಮ್ಮ ಕಡೆಯವರು P.W.D. ಇಲಾಖೆಯವರನ್ನು ಪೀಡೆ ಇಲಾಖೆಯವರು ಎನ್ನುತ್ತಾರೆ. ಕಾರಣ ಇಷ್ಟೆ: ಪೀಡೆ ಯಂತೆ ಬೆನ್ನಿಗೆ ಹತ್ತಿಕೊಂಡರೆ ಅದು ಚೆನ್ನಾಗಿ ಕೆಲಸ ಮಾಡುತ್ತದೆ, ಹತ್ತದೆ ಹೋದರೆ ಕೆಲಸವೇ ಇಲ್ಲ. ಅದೇರೀತಿ ಈ ಇಲಾಖೆಯವರ ಕೆಲಸವೂ. ಆದ್ದರಿಂದ ಮಾನ್ಯ ಮಂತ್ರಿಗಳು ಸ್ವಲ್ಪ ಹೆಚ್ಚಿಗೆ ಗಮನ ಕೊಟ್ಟರೂ ಪರವಾಯಿಲ್ಲ, ಪೀಡೆ ಹತ್ತದಹಾಗೆ ನೋಡಿಕೊಳ್ಳಬೇಕು. ಇಲ್ಲದೆ ಇದ್ದರೆ ಏನೂ ಕೆಲಸವಾಗುವುದಿಲ್ಲ. ಉದಾಹರಣೆಗೆ ನಾನೇ ಏಳೆಂಟು ಅರ್ಜಿಗಳನ್ನು ಕೊಟ್ಟಿದ್ದೇನೆ. ನಮ್ಮ ತಾಲ್ಲೂಕಿನಲ್ಲೇ 7–8 ಕೆರೆಗಳು ಎರಡು ಮೂರು ವರ್ಷಗಳಿಂದ ದುರಸ್ತಿಲ್ಲದೆ ಹಾಗೆಯೇ ಬಿದ್ದಿವೆ. ಜೋಡಿ ಮುಳಿಕುಂಟೆ, ಉರುಡಗೆರೆ, ಹೊಸಕೆರೆ, ಉತ್ತರಕಟ್ಟೆ, ಕ್ಯಾತ್ಸಂದ್ರದಕೆರೆ—ಇವೆಲ್ಲವೂ ಹಾಗೆಯೇ ದುರಸ್ತಿಲ್ಲದೆ ಬಿದ್ದಿವೆ. ಆಮೇಲೆ, ಹರಳೂರು ಕೆರೆಯ ಕೆಲಸ ಪ್ರಾರಂಭಮಾಡಿ ಎರಡು ವರ್ಷಗಳಾಗಿವೆ. ಅಲ್ಲೊಬ್ಬರು ಓವರ್ಸಿಯರ್ ಇದ್ದಾರೆ. ಕಮಿಷನ್ ಜಾಸ್ತಿ ಕೇಳುತ್ತಾರೋ ಏನೋ ಗೊತ್ತಿಲ್ಲ ಅಂತೂ ಅದೇನೋ ಕಂಟ್ರಾಕ್ಟರುಗಳೆಲ್ಲರೂ ಪ್ರತಿಭಟನೆ ಮಾಡಿ ಅವರನ್ನು ವರ್ಗಮಾಡದೆ ಇದ್ದರೆ ನಾವು ಕೆಲಸಮಾಡುವುದಿಲ್ಲವೆಂದು ಮುಷ್ಕರ ಹೂಡಿದ್ದಾರೆ. ಹರಳೂರು ಕೆರೆಯನ್ನು ಮಂತ್ರಿಗಳು ನೋಡಿಕೊಂಡು ಬಂದಿದ್ದಾರೆ. ಅಲ್ಲಿ ಹೋಗಿ ಏನು ಕೆಲಸ ಮಾಡಬೇಕು ಎಂದು ತೋರಿಸದೆ ಇರುವ ದೆಶೆಯಿಂದ, ಆ ಕೆಲಸ ಹಾಗೆಯೇ ನಿಂತಿದೆ. ಎರಡು ವರ್ಷಗಳಾದವು. ಅದಕ್ಕೋಸ್ಕರ ಪಬ್ಲಿಕ ವರ್ಕ್ಸ್ ಡಿಪಾರ್ಟ್‌ಮೆಂಟಿನ ವಿಷಯ ಹೇಳಿದ್ದೇನೆ. ಮೈನರ್ ಕೆರೆಯ ವಿಚಾರದಲ್ಲಿ ಬೇಕಾದಷ್ಟು ದುಡ್ಡು ಕೊಟ್ಟಿದ್ದಾರೆ. ಆದರೆ ಒಂದೊಂದು ತಾಲ್ಲೋಕಿಗೂ ಒಬ್ಬೊಬ್ಬ ಪಂಚಾಯಿತಿ ಓವರ್‌ಸೀಯರ್ ಇದ್ದಾರೆ; ಎಷ್ಟು ಕೆಲಸ ಮಾಡುತ್ತಾರೆ? ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದೊಂದು ಹೋಬಳಿಗೂ ಒಬ್ಬೊಬ್ಬರು ಇರುತ್ತಾರೆ, ಅವರಿಂದ ಏನು ಕೆಲಸ ನಿರೀಕ್ಷಣೆ ಮಾಡುತ್ತೀರಿ? ಕೆಲಸ ನಡೆಯುತ್ತಾ ಇಲ್ಲ. ನಾನು ಮಂತ್ರಿಗಳಲ್ಲಿಗೆ ಹೋಗಿ ಬರೆದು ಕೊಟ್ಟಿದ್ದು ಆಯಿತು. ಡಿಪಾರ್ಟ್‌ಮೆಂಟಿಗೂ ಬರೆದು ಕೊಟ್ಟಿದ್ದೂ ಆಯಿತು. ಇನ್ನು ಯಾರಿಗೆ ಬರೆದರೂ ಪ್ರಯೋಜನವಿಲ್ಲ ಎಂದು ತೀರ್ಮಾನಮಾಡಿದ್ದೇವೆ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡಿದ್ದಾರೆ. ಜನಗಳು ಅಲ್ಲಿಗೆ ಹೋಗಿ ವಾಸ ಮಾಡಲು ಏನೇ ಸಹಾಯ ಮಾಡುತ್ತೇವೆ ಎಂದು ಹೇಳಿದರೂ ಅಲ್ಲಿಗೆ ಜನಗಳು ಹೋಗಿ ಇರುವುದಕ್ಕೆ ಹೆದರುತ್ತಾರೆ. ಇರುವ ಕಡೆ ಕೊಡಿ ಎಂದರೆ ಕೊಡುವುದಿಲ್ಲ. ಲೋಕಲ್ ಆಗಿರತಕ್ಕ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಅಧಿಕಾರಿಗಳು ಹಳ್ಳಿಗೆ ಬಂದಾಗ ಅವರ ಅಳತೆ ಪಟ್ಟಿಗಳನ್ನು ರೈತನ ತಲೆಯ ಮೇಲೆ ಹೊತ್ತುಕೊಂಡು ಹೋಗಬೇಕು. ಬಿಸಿಲು ಆಯಿತು ಎಂದರೆ ನಾಳೆ ಬರುತ್ತೇನೆಂದು ಹೋಗುತ್ತಾರೆ. ಇಂಥ ಸನ್ನಿವೇಶಗಳು ಬಹಳ ಹೆಚ್ಚಾಗಿ ನಡೆಯುತ್ತಿವೆ. ಮಳೆ ಜಾಸ್ತಿ ಆದಾಗಲೆಲ್ಲಾ ಕೆಲವು ಕೆರೆಗಳ ಕೋಡಿಗಳು ಕಿತ್ತು ಹೋಗಿವೆ. ಆ ಪ್ರದೇಶಕ್ಕೆ ಹೋಗಿ ನೋಡಿದರೆ ಇವೊತ್ತಿನವರೆಗೂ ಅಲ್ಲಿಯಾವ ಕೆಲಸವನ್ನೂ ಮಾಡಿಲ್ಲ. ಮಳೆ ಬಂದು ನೀರು ಬೇರೆಕಡೆ ಹೋಗುತ್ತದೆ. ಬೆಳೆ ತೊಂದರೆಯಾಗಿದೆ ಎಂದು ಹೇಳಿದರೆ ಏನೂ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇಲ್ಲ. ಇದರಿಂದ ''ಗ್ರೋಮೋರ್ ಫುಡ್ ಸ್ಕೀಮು'' ಹೋಗಿ ''ನೋಮೋರ್ ಫುಡ್ ಸ್ಕೀಮು'' ಆಗುತ್ತದೆ. ದಯವಿಟ್ಟು ಅವನ್ನು ರಿಪೇರಿ ಮಾಡಿಸಬೇಕು. ವ್ಯವಸಾಯ ಮಂತ್ರಿಗಳು ನಿಗಾ ತೆಗೆದುಕೊಳ್ಳುತ್ತಾರೆಯೋ ಎಂದರೆ ಅವರು ತೆಗೆದುಕೊಳ್ಳುತ್ತಾ ಇಲ್ಲ. ಅವರು ತೆಗೆದುಕೊಳ್ಳದೆ ಹೋದರೆ ಆಹಾರದ ಸಮಸ್ಯೆ ಬಹಳ

ಕಷ್ಟವಾಗುತ್ತದೆ. ಹೊರಗಿನಿಂದ ತರಿಸಿಕೊಡುವುದರಿಂದ ಹೆಚ್ಚು ಹಣ ಖರ್ಚಾಗುತ್ತದೆ. ಆದ್ದರಿಂದ ತೂಬು ಒಡೆದು ಹೋಗಿರುವ ಕಡೆ ರಿಪೇರಿ ಮಾಡಿಸಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಆಮೇಲೆ ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ ಹೇಳುತ್ತೇನೆ. ರೋಡ್ ಟ್ರಾನ್ಸ್‌ಪೋರ್ಟಿನಿಂದ ನಮ್ಮ ಜನಗಳಿಗೆ ಬಹಳ ಸೌಕರ್ಯವಾಗುತ್ತದೆ ಎಂದು ಎಲ್ಲರೂ ತಿಳಿದುಕೊಂಡಿದ್ದರು. ಹಾಗೆ ತಿಳಿದುಕೊಂಡವರಲ್ಲಿ ನಾನೂ ಒಬ್ಬ. ಇದರಿಂದ ಕೆಲವು ಜನಗಳಿಗೆ ಮಾತ್ರ ಅನುಕೂಲವಾಗುತ್ತಿದೆ. ಸಾರ್ವಜನಿಕರಿಗೆ ಅನುಕೂಲವಾಗುತ್ತಿಲ್ಲ. ಸರ್ಕಾರಕ್ಕೆ ಅನುಕೂಲವಾಗುತ್ತಿಲ್ಲ. ಮಧ್ಯದಲ್ಲಿ ಕೆಲವರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ನೆಲಮಂಗಲದಿಂದ ಬಸ್ಸಿನಲ್ಲಿ ಬಂದೆ. ಅದು ಓವರ್‌ಲೋಡ್ ಆಗಿತ್ತು. ನೆಲಮಂಗಲದಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರು ಸಂದಿಯೊಳಗೆ ತೂರಿಕೊಂಡುಬಂದು ಒಬ್ಬ ಬಡಪಾಯಿಯನ್ನು ಜಾಗಬಿಡಿಸಿ ಕುಳಿತುಕೊಂಡರು. ಯಾರೋ ಒಬ್ಬ ಸಬ್ ಇನ್ಸ್‌ಪೆಕ್ಟರು ಯೂನಿಫಾರಂ ಹಾಕಿಕೊಂಡು ಟಿಕೆಟ್ ತೆಗೆದುಕೊಳ್ಳದೆ ಬಂದರು. ಟಿ.ಎ. ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಸಣ್ಣಸಣ್ಣ ಅಧಿಕಾರಿಗಳು ಹೀಗೆ ಮಾಡಲಿಕ್ಕೆ ಹತ್ತಿದರೆ ಅದು ಯಾರ ತಪ್ಪು? ಸರ್ಕಾರದ ತಪ್ಪೆ! ನಮ್ಮ ತಪ್ಪೆ? ಅಧಿಕಾರಿಗಳ ತಪ್ಪಲ್ಲ. ಸಂಬಂಧಪಟ್ಟ ಮಂತ್ರಿಗಳು ಅವರ ಮೇಲೆ ಹೆಚ್ಚಿಗೆ ನಿಗಾ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಎರಡನೆಯತಾರೀಖು ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ಬೆಳ್ಳಿ ಪಾಲಕಿ ಉತ್ಸವ ಬಹಳ ಚೆನ್ನಾಗಿತ್ತು. ಸ್ಪೀಕರ್ ಮತ್ತು ಕೆಲವು ಮಂತ್ರಿಗಳೂ ಕೂಡ ಅಲ್ಲಿಗೆ ದಯಮಾಡಿಸಿದ್ದರು. ಆ ಜಾತ್ರೆಕಾಲದಲ್ಲಿ ತುಮಕೂರಿನಿಂದ ಸಿದ್ಧಗಂಗಾ ಕ್ಷೇತ್ರಕ್ಕೆ ಪ್ರಯಾಣಿಕರ ಅನುಕೂಲಕ್ಕಾಗಿ ಸ್ಪೆಷಲ್ ಬಸ್ಸುಗಳನ್ನು ಓಡಿಸುತ್ತಿದ್ದರು. ಹೀಗೆ ಎರಡು ಡಿಸ್ಟ್ರಿಕ್ಟುಗಳಿಗೂ ಸೇರಿದ 30 ಬಸ್ಸುಗಳು 5 ನಿಮಿಷಕ್ಕೆ ಒಂದಾವರ್ತಿ ಓಡಾಡುವಕಾಲದಲ್ಲಿ ಚಿತ್ರದುರ್ಗಕ್ಕೆ ಹೋಗತಕ್ಕಂಥ ರೋಡ್ ಟ್ರಾನ್ಸ್‌ಪೋರ್ಟ್ ಮ್ಯಾನೇಜರ್ ಅವರು ತಮ್ಮ ಊಟದ ವ್ಯವಸ್ಥೆ ಮಾಡುವುದಕ್ಕೋಸ್ಕರ ಸೂಪರ್‌ವೈಜರ್ ಅವರನ್ನು ಚಿತ್ರದುರ್ಗಕ್ಕೆ ಕರೆದುಕೊಂಡುಹೋಗಿದ್ದರು. ಆದರೆ ಸೂಪರ್‌ವೈಜರ್ ಅವರಿಗೆ ಹಿಂದಕ್ಕೆ ಬರಲು ಬಸ್ಸು ಸಿಕ್ಕಲಿಲ್ಲ. ಅವೊತ್ತಿನ ದಿವಸ ರಾತ್ರಿ ದರಿದ್ರಪಕ್ಷ 10 ಸಾವಿರ ರೂಪಾಯಿಗಳು ಲುಕ್ಸಾನು ಆಗಿದೆ. ನಾವೇ ಕೆಲವು ಕೇಸುಗಳನ್ನು ವಾಲಂಟಿಯರ್ ಆಗಿ ಹಿಡಿದಿದ್ದೇವೆ. ಮ್ಯಾನೇಜರ್ ಚಿತ್ರದುರ್ಗಕ್ಕೆ ಅವರನ್ನು ಕರೆದುಕೊಂಡು ಹೋಗುವ ಪ್ರಮೇಯ ಏನಿತ್ತು ಎಂದು ನಾನು ಬರೆದಿದ್ದೇನೆ. ಅದಕ್ಕೆ ನಿಮ್ಮ ಸಹಕಾರಕ್ಕೆ ಬಹಳ ಸಂತೋಷ ಎಂದು ನನಗೆ ಕಾಗದ ಬಂದಿದೆ. ಅದನ್ನು ಬೇಕಾದರೆ ಕೊಡುತ್ತೇನೆ. ಅದಕ್ಕೋಸ್ಕರ ಈಗ ಸೆಕ್ಯುರಿಟಿ ಸಿಬ್ಬಂದಿ ಎಂದು ಬೇರೆ ಇಟ್ಟಿದ್ದಾರೆ. ಕೆಲವು ಕಂಡಕ್ಟರುಗಳು ಸಂದರ್ಭಾನುಸಾರ ಟಿಕೇಟು ಇಲ್ಲದೆ ಪ್ಯಾಸೆಂಜರುಗಳನ್ನು ಹಾಕಿಬಿಡುತ್ತಾರೆ. ಚೆಕ್ ಮಾಡತಕ್ಕ ಸಂದರ್ಭಗಳಿವೆ. ಆದರೆ ಈ ಸ್ಟಾಫ್‌ನವರು ಕ್ರಮ ತೆಗೆದುಕೊಂಡ ಹಾಗಿಲ್ಲ.

7-30 P.M.

ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ದೊಡ್ಡ ದೊಡ್ಡ ಸಾಹುಕಾರರುಗಳ ಮಾತಿನ ಮೇಲೆ ಬಸ್ಸುಗಳ ಟೈಮಿಂಗ್ಸನ್ನು ವ್ಯತ್ಯಾಸ ಮಾಡುತ್ತಾರೆ. ಹನುಮಂತಯ್ಯನವರು ಬಂದು ಎಲ್ಲಿಗೆ ಹೇಳಿದರೆ ಅಲ್ಲಿಗೆ ಓಡಿಸುತ್ತಾರೆ. ಈ ರೀತಿ ಆಗುತ್ತಾ ಇದೆ. ಅದನ್ನು ತಪ್ಪಿಸಬೇಕು.

ಬೆಂಗಳೂರಿನಲ್ಲಿರುವವರಿಗೇ ಕೆಲಸ! ಕಂಡಕ್ಟರ್ ಕೆಲಸ ಕೊಡುವಾಗ, ಬೆಂಗಳೂರಿನಲ್ಲಿ ಎಷ್ಟು ಜನಕ್ಕೆ ಸಿಕ್ಕಿದೆ, ಹಳ್ಳಿಗಳ ಜನರಿಗೆ ಎಷ್ಟು ಕೆಲಸಗಳು ಸಿಕ್ಕಿವೆ ಎಂದು ನೋಡಿದರೆ ಹೊರಗಡೆಯವರಿಗೆ ಶೇಕಡ ಐದರಷ್ಟು ಕೆಲಸ ಕೂಡ ಸಿಕ್ಕಿಲ್ಲ. ಶೇಕಡ 95ರಷ್ಟನ್ನು ಬೆಂಗಳೂರಿನವರಿಗೇ ಕೊಡುವುದರಿಂದ, ಹೊರಗಡೆಯವರಿಗೆ ಬಹಳ ಅನ್ಯಾಯವಾಗಿದೆ.

ರೈತನಿಗೆ ಸಹಾಯ ಮಾಡುವುದಕ್ಕೋಸ್ಕರ ಕೆಲವು ಕಡೆ ಡೆಟ್ ಕನ್ಸಿಲಿಯೇಷನ್ ಬೋರ್ಡ್ ಎಂದು ಮಾಡಿದರು. ಬಹುಶಃ ಅದನ್ನು ಈಗ ತೆಗೆದುಹಾಕಿ ಬಿಟ್ಟಿದ್ದಾರೆ. ಈ ಬೋರ್ಡಿನಿಂದ ರೈತನಿಗೆ ಅನುಕೂಲವಾಗಿದೆ ಎಂದು ತಿಳಿದುಕೊಂಡು, ಇದನ್ನು ಕೂಡಲೇ ಏರ್ಪಡಿಸಬೇಕು. ರೈತನಿಗೆ ಸಾಲಕೊಟ್ಟಿರುವವರು ಅವನಿಗೆ ಕಿರುಕುಳ ಬಹಳ ಕೊಡುತ್ತಾರೆ. ಮನಿ ಲೆಂಡರ್ಸ್ ಆಕ್ಟಿನಿಂದ ಸರ್ಕಾರಕ್ಕೆ ಉತ್ಪತ್ತಿ ಬರುತ್ತಾ ಇದೆ. ಮನಿಲೆಂಡರ್ಸ್ ಆಕ್ಟ್ ಈಗ ಇದ್ದಹಾಗೆ ಕಾಣುವುದಿಲ್ಲ. ಅದು ಇದ್ದರೂ ಮನಿಲೆಂಡರ್ಸನ್ನು ಕೇಳತಕ್ಕಂಥವರು ಇಲ್ಲ. ಒಂದು ನೂರು ರೂಪಾಯಿ ಕೊಟ್ಟು, ಅದಕ್ಕೆ ಒಂದು ಪಲ್ಲ ಭತ್ತ ಬಡ್ಡಿಯಾಗಿ ತೆಗೆದುಕೊಳ್ಳುವುದು. ಈ ರೀತಿಯಲ್ಲಿ ಬಡವರಿಗೆ ಅನ್ಯಾಯವಾಗುತ್ತಿದೆ. ನಮ್ಮ ಸರ್ಕಾರ ಇವರ ವಿಚಾರದಲ್ಲಿ ಉದಾಸೀನದಿಂದ ನೋಡುತ್ತಿರುವ ಹಾಗೆ ಕಾಣುತ್ತಾ ಇದೆ.

ಇನ್ನು Distress Relief Funds ವಿಚಾರ. ಎಲ್ಲಾ ಕಡೆಗಳಲ್ಲಿಯೂ Distress condition ಇರುತ್ತದೆ. ಕೆಲವು ಸಂದರ್ಭದಲ್ಲಿ ಕೆಲವು ಪ್ರದೇಶಗಳಲ್ಲಿ ಕಷ್ಟಬರುತ್ತದೆ. ಈ ಕಷ್ಟ ತುಮಕೂರು, ಕೋಲಾರ, ಮೈಸೂರು, ಬೆಂಗಳೂರಿಗೆ ಬಂದಿದೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ರೀತಿಯಾಗಿ ಯೋಚನೆಮಾಡಿ, ಕೊಂಚ ಕೆಲಸ ಪ್ರಾರಂಭ ಮಾಡಿದರು. ಆದರೆ ಇದ್ದಕ್ಕಿದ್ದಹಾಗೆ ನಿಲ್ಲಿಸಿಬಿಟ್ಟರು. ಇದರಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ನಮ್ಮ ವ್ಯವಸಾಯ ಮಂತ್ರಿಗಳು ಈ ಕಷ್ಟವನ್ನೆಲ್ಲಾ ನೋಡಿಕೊಂಡು ಬಂದಿದ್ದಾರೆ. ರೆವಿನ್ಯೂ ಮಂತ್ರಿಗಳೂ ಎಲ್. ಎಸ್. ಜಿ. ಮಂತ್ರಿಗಳೂ ನೋಡಿಕೊಂಡು ಬಂದರು. ತೊಂದರೆಯಾಗಿದೆ ಎನ್ನುವುದನ್ನು ಎಲ್ಲರೂ ಒಪ್ಪಿದ್ದಾರೆ. ಜನಗಳಿಗೆ ಸಹಾಯಬೇಕು, ಅವರು ಜೀವನ ನಡೆಸುವುದು ಕಷ್ಟ ಎಂದು ಹೇಳಿದರೇ ಹೊರತು, ಇಲ್ಲಿ ಏನು ಅನುಕೂಲವೂ ಮಾಡಿದಹಾಗೆ ಕಾಣುವುದಿಲ್ಲ. ಗಾಣಗಿತ್ತಿ ಅಯ್ಯೋ ಎಂದರೆ ನೆತ್ತಿ ತಣ್ಣಗಾಗುವುದಿಲ್ಲ ಎಂದು ಶ್ರೀ ವೀರಣ್ಣಗೌಡರು, ನಮ್ಮನ್ನು ರಾಜಕೀಯಕ್ಕೆ ಎಳೆಯುವ ಕಾಲದಲ್ಲಿ ಹೇಳುತ್ತಾ ಇದ್ದರು. ಆ ಡಿಸ್ಟ್ರಿಕ್ಟುಗಳಿಗೆ ಬಂದಂಥ ಮಂತ್ರಿಗಳು ಜನರ ಕಷ್ಟಕ್ಕೆ ಏನೂ ನಿಗಾ ಕೊಟ್ಟಹಾಗೆ ಕಾಣುವುದಿಲ್ಲ. ಕೊರಟಗೆರೆ ತಾಲ್ಲೂಕಿನಲ್ಲಿ ಮಳೆಗಾಲ ಬರುವವರೆಗೆ ರೈತರಿಗೆ ಬಹಳ ಕಷ್ಟವಿದೆ. ಶ್ರೀ ಚನ್ನಿಗರಾಮಯ್ಯನವರು, ಅದೇ ತಾಲ್ಲೂಕಿನವರು, ಬಾಕಿಯವರು ಏನು ತಿಳಿದುಕೊಳ್ಳುತ್ತಾರೋ ಎಂದು, ಬಹುಶಃ ಮುಚ್ಚಿಕೊಂಡಿದ್ದರೆ, ಅದಕ್ಕೆ ಅವಶ್ಯಕತೆಇಲ್ಲ. ಅಲ್ಲಿ ರಿಲೀಫ್ ಕೆಲಸವನ್ನು ಕೂಡಲೆ ಪ್ರಾರಂಭಮಾಡಬೇಕು.

ಆಮೇಲೆ ಕೋ-ಆಪರೇಷನ್ ವಿಷಯದಲ್ಲಿ ಮಾತ್ರ ಸ್ವಲ್ಪ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸಹಕಾರ ಚಳುವಳಿ ಬಹಳ ಹಿಂದೆ ಬಿದ್ದಿದೆ. ಇದು ಕೆಲವು ದಿವಸ ಜೋರಾಗಿ ನಡೆಯಿತು. ಈಗೇಕೋ ಸ್ವಲ್ಪ

(ಶ್ರೀ ಕೆ. ಎಲ್. ನರಸಿಂಹಯ್ಯ)

ಕಡಮೆಯಾಗಿದೆ. ಗೋಡೌನ್ ಕಟ್ಟುವುದಕ್ಕೆ 10 ಸಾವಿರ ರೂಪಾಯಿಗಳನ್ನು ಕೊಟ್ಟರು. ಎಸ್ಟಿಮೇಟ್ 13 ಸಾವಿರ ಚಿಲ್ಲರೆಗೆ ಬಂತು. ಹತ್ತು ಸಾವಿರ ರೂಪಾಯಿ ಕೊಟ್ಟಿದ್ದಾರೆ, 13 ಸಾವಿರಕ್ಕೆ ಎಸ್ಟಿಮೇಟಾಗಿರುವುದಕ್ಕೆ ಕಾರಣ ವಿಚಾರಿಸಲಾಗಿ ಬೊಂಬಾಯಿನಿಂದ ಪ್ಲಾನ್ ಮತ್ತು ಎಸ್ಟಿಮೇಟು ಎರಡೂ ಬಂದಿವೆಯೆಂದು ಗೊತ್ತಾಯಿತು. ಒಂದೆರಡು ವರ್ಷ ಕಳೆದರೂ ಒಂದು ಗೋಡೌನೂ ಸಹ ಆಗಿಲ್ಲ. ಮಾರ್ಕೆಟಿಂಗ್ ಸೊಸೈಟಿ ಮಾಡಿ ರೈತರಿಗೆ ಸಹಾಯಮಾಡುತ್ತೇವೆಂದು ಹೇಳಿದರು. ಆದರೆ ಅದರಿಂದೇನೂ ಸಹಾಯವಾಗುತ್ತಿಲ್ಲ. ಜೂನಿಯರ್ ಆಡಿಟರ್ಸ್, ಸೀನಿಯರ್ ಆಡಿಟರ್ಸ್ ಎಂದು ನೇಮಿಸಿ ಸಿಬ್ಬಂದಿಗಾಗಿ ಹೆಚ್ಚು ಖರ್ಚಾಗುತ್ತಿದೆಯೇ ವಿನಾ ರೈತರಿಗೇನೂ ಅಷ್ಟಾಗಿ ಸಹಾಯವಾಗುತ್ತಿಲ್ಲ. ಈ ಇಲಾಖೆಯಲ್ಲಿರುವ ಅಧಿಕಾರಿಗಳಿಗೆ ಸ್ಪೆಷಲ್ ಟ್ರೈನಿಂಗ್ ಕೊಟ್ಟಿದ್ದಾರೆ, ಪರದೇಶಗಳಿಗೆ ಸಹ ಕಳುಹಿಸಿ ಟ್ರೈನಿಂಗ್ ಮಾಡಿಸಿದ್ದಾರೆ. ಈ ದಿವಸ ಅವರನ್ನು ಇಲಾಖೆಗಳಲ್ಲಿಟ್ಟುಕೊಂಡಿದ್ದಾರೆ, ಕೆಲವರು ಬೇರೆಯವರು ಬಂದಿದ್ದಾರೆ. ಅವರಿಗೆ ನಾವು ಹೇಳುವುದು ತಿಳಿಯುವುದಿಲ್ಲ, ನಮಗೆ ಅವರು ಹೇಳುವುದು ತಿಳಿಯುವುದಿಲ್ಲ; ಪರಿಸ್ಥಿತಿ ಹೀಗಾಗಿದೆ. ಎಫ್.ಇ.ಎಸ್. ಸ್ಕೀಂ ಬಂದಾಗ ಅಲ್ಲಿನ ಕೆಲವು ಇನ್ಸ್‌ಪೆಕ್ಟರುಗಳನ್ನು ಆ ಕೆಲಸಕ್ಕೆ ಹಾಕಿದರು. ಅವರನ್ನು ಸೆಕ್ರೆಟರಿಗಳೆಂದು ಕರೆದರು. ಅಲ್ಲಿದ್ದ ಸೊಸೈಟಿಗಳ ಗುಮಾಸ್ತೆಗಳು ಹಣ ತಿಂದುಹಾಕಿದ್ದಾರೆಂದು ಅನುಮಾನಬಂದಾಗ ಪ್ರೆಸಿಡೆಂಟರನ್ನು ಕೇಳಬೇಕೆಂದು ಹೇಳಿದರು. ಹೀಗೆ ಅವ್ಯವಸ್ಥೆಯಾಗಿದೆ. ಸರ್ವರ್ ಪೇರಿಗಳು ಈ ಇನ್ಸ್‌ಪೆಕ್ಟರುಗಳ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ. ಸಂಬಳ ಕೊಡಿ ಎಂದು ಕೇಳಿದರೆ ನಾನಲ್ಲ ಕೊಡುವುದು ಎಂದು ಹೇಳುತ್ತಾರೆ. ಹೀಗಾಗಿ ಸಹಕಾರ ಇಲಾಖೆಯಲ್ಲಿ ಬಹಳ ಅವ್ಯವಸ್ಥೆಯಾಗಿದೆ. ರೆಗ್ಯುಲೇಟೆಡ್ ಮಾರ್ಕೆಟ್ ಎಂದು ಮಾಡಿದರು. ತುಮಕೂರಿನಲ್ಲಿ ನಾನೂ ಒಬ್ಬ ಸದಸ್ಯನಾದ್ದರಿಂದ ಈ ವಿಚಾರದಲ್ಲಿ ಅನುಭವವಿದೆ. ನಾಲ್ಕಾರು ಜನ ಯಾರೋ ಅಧಿಕಾರಿಗಳಿಗೆ ಸಂಬಳ ಕೊಡುವುದಕ್ಕಾಗಿ ಒಂದು ಅನುಕೂಲಮಾಡಿಕೊಂಡಿದ್ದಾರೆಯೇ ಹೊರತು ರೈತರಿಗೇನೂ ಸಹಾಯಮಾಡುತ್ತಿಲ್ಲ. ಸುಮ್ಮನೆ ಕಣ್ಣುಮುಚ್ಚಾಲೆ ಆಟವಾಡಿಸುತ್ತಿದ್ದಾರೆ. ಹೀಗಿರುವಾಗ ರೆಗ್ಯುಲೇಟೆಡ್ ಮಾರ್ಕೆಟ್ ಏಕೆಮಾಡಬೇಕು ? ಅಲ್ಲಿ ಚೀಫ್ ರೆಗ್ಯುಲೇಟೆಡ್ ಮಾರ್ಕೆಟಿಂಗ್ ಆಫೀಸರೊಬ್ಬರನ್ನು ಏಕೆ ನೇಮಕಮಾಡಬೇಕಾಗಿತ್ತು? ಇದಕ್ಕೆಲ್ಲಾ ರೈತರ ಹಣ 60 ಕೋಟಿ ರೂಪಾಯಿಗಳಲ್ಲಿ ಏಕೆ ಖರ್ಚಾಗಬೇಕು ? ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಹೀಗಾಗಿ ಕೋ-ಆಪರೇಟಿವ್ ಇಲಾಖೆಯಲ್ಲಾಗಿರುವ ಅವ್ಯವಸ್ಥೆ ಹೇಳುವುದಕ್ಕೆ ಸಾಧ್ಯವಿಲ್ಲ. ಈಗಿರುವ ರಿಜಿಸ್ಟ್ರಾರರು ಯೋಗ್ಯರೂ, ಬುದ್ಧಿವಂತರೂ ಇರಬಹುದು. ಆದರೆ ಮೆಷೀನರಿ ಸರಿಯಾಗಿ ನಡೆಯುತ್ತಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ತುಮಕೂರಿನಲ್ಲಿ ಫಸ್ಟ್‌ಗ್ರೇಡ್ ಕಾಲೇಜಿದೆ. ಅದಕ್ಕೆ ಕಟ್ಟಡ ಕಟ್ಟಬೇಕೆಂದು ಸುಮಾರು ಐದು ವರ್ಷಗಳ ಹಿಂದೆ ಅಸ್ತಿಭಾರ ಹಾಕಿದರು. ಅದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಆ ಕಾಲೇಜು ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಡದಲ್ಲಿ ಚಿಕ್ಕಚಿಕ್ಕ ರೂಮುಗಳಲ್ಲಿ ನಡೆಯುತ್ತಿರುವುದರಿಂದ ಬಹಳ ಕಷ್ಟವಾಗಿದೆ. ಆ ಕಾಲೇಜಿನ ಪ್ರೊಫೆಸರಿಗೆ ವಾಸಕ್ಕೆ ಸ್ಥಳವಿಲ್ಲದೆ ಪ್ರತಿದಿನ ಬೆಂಗಳೂರಿನಿಂದ ಬಂದುಹೋಗುತ್ತಿದ್ದಾರೆ. ಹೋಟಲಿನಲ್ಲಿ ಊಟ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ಇದು ಬಹಳ ಶೋಚನೀಯ. ಆ ಕಾಲೇಜಿಗೆ ಲೈಬ್ರೆರಿ ಸಹ ಇಲ್ಲ.

ಅಕ್ವಿಸಿಷನ್ ವಿಚಾರದಲ್ಲಿ ಎಲ್.ಎಸ್.ಜಿ. ಮಿನಿಸ್ಟರ್ ಅವರು ನಿನ್ನೆ ಉತ್ತರಕೊಡುವಾಗ ಒಂದು ವಿಚಾರ ಹೇಳಲಿಲ್ಲ. ನಾನು ಹೋದ ಸಲ ಒಂದು ವಿಷಯ ಹೇಳಿದ್ದೆ. ಅದೇನೆಂದರೆ, ನಮ್ಮ ಊರಿನಲ್ಲಿ ಹೆಣ ಹೂಳುವುದಕ್ಕೆ ಜಾಗ ಕೊಡಿಸಿ ಎಂದು ಕೇಳಿದ್ದರೂ ಕೂಡ ಇವತ್ತಿನವರೆಗೂ ಕೊಡಿಸಿಲ್ಲ. ನಾಳೆಗೂ ಕೊಡಿಸುವುದಿಲ್ಲ ಎನ್ನುವ ಹಾಗಾಗಿದೆ. ಆ ಊರಿನ ಹೆಸರು ದಿಬ್ಬೂರು ಪಂಚಾಯ್ತಿ ನಿರ್ಣಯ ಆಗಿ, ಪಂಚಾಯ್ತಿಯವರು ದುಡ್ಡು ಕಟ್ಟಿದರೂ ಸಹ ಇವತ್ತಿಗೂ ಅವರ ಸುಪರ್ದಿಗೆ ಜಾಗ ಕೊಟ್ಟಿಲ್ಲ. ಡಿಪ್ರೆಸ್ಡ್ ಕ್ಲಾಸ್‌ನವರು ಮನೆ ಕಟ್ಟಿಕೊಳ್ಳಲು ಅಕ್ವಿಜಿಷನ್ ಆಗಬೇಕಾಗುತ್ತದೆ. ಅಂಥ ಸಂದರ್ಭದಲ್ಲೂ ಕೂಡ ಬಹಳ ನಿಧಾನವಾಗುತ್ತಿದೆ. ಅವರಿಗೆ ಪ್ರತ್ಯೇಕವಾಗಿ ಮನೆ ಕಟ್ಟಿಕೊಳ್ಳಲು ಪ್ರತ್ಯೇಕಪ್ರತ್ಯೇಕವಾಗಿ ಸ್ಥಳಗಳನ್ನು ಮೀಸಲಾಗಿಟ್ಟ ಪಕ್ಷದಲ್ಲಿ ಎಲ್ಲರೊಡನೆಯೂ ಒಂದುಗೂಡುವುದಕ್ಕೆ ಅವಕಾಶವಾಗುವುದಿಲ್ಲ. ಆದ್ದರಿಂದ ಆ ರೀತಿ ಮಾಡಕೂಡದು ಎಂದು ಹೇಳುತ್ತೇನೆ. ಸಾಧಾರಣವಾಗಿ ಎಷ್ಟೋಕಡೆ ಈ ಅಕ್ವಿಸಿಷನ್ ಕೇಸುಗಳು ತೀರ್ಮಾನವಾಗದೆ ನಿಂತುಹೋಗಿರುವುದಕ್ಕೆ ಕಾರಣ ಅದಕ್ಕೆ ಸಂಬಂಧಪಟ್ಟ ರೈತರು ಹೋಗಿ ಉತ್ತಮವಾದ ಜಮೀನು, ಏಕೆ ನನ್ನ ಜಮೀನು ಕಿತ್ತುಕೊಳ್ಳುತ್ತೀರಿ ಎಂದು ತಕರಾರು ಹಾಕಿರುವುದರಿಂದಲೇ ಆಗಿದೆ. ಆದ್ದರಿಂದ ಈ ಅಕ್ವಿಸಿಷನ್ ಕೇಸುಗಳನ್ನು ಜಾಗ್ರತೆ ತೀರ್ಮಾನಮಾಡಲು ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ವಿದ್ಯುಚ್ಛಕ್ತಿಯ ವಿಚಾರ ಹೇಳಿ ಮುಗಿಸುತ್ತೇನೆ. ಮಾನ್ಯಮಂತ್ರಿಗಳು ಹಿಂದೆ ಈ ಬೋರ್ಡ್ ರಚನೆಮಾಡಬೇಕೆಂದು ಹೇಳಿ ಮಸೂದೆ ತಂದಾಗ ದರ ಹೆಚ್ಚುಮಾಡುವುದಿಲ್ಲ ಎಂದು ಹೇಳಿದ್ದರು.

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೆ ಹೇಳಲಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಈಗ ಏನಾಗಿದೆ, ಮೊದಲನೆ ಐದು ವರ್ಷ ಎಲೆಕ್ಟ್ರಿಕ್ ಪಂಪ್‌ಗಳಿಗೆ ಎಷ್ಟು ಮಿನಿಮಂ ಚಾರ್ಜಸ್ ಕೊಡುತ್ತಾ ಇದ್ದರೋ ಅಷ್ಟೇ ಎಂದು ತಿಳಿದುಕೊಂಡಿದ್ದರು. ಆದರೆ ಅದನ್ನು ಜಾಸ್ತಿ ಮಾಡಿದ್ದಾರೆ. ಅದರಿಂದ ರೈತರಿಗೆ ಬಹಳ ಫಜೀತಿ ಆಗಿದೆ. ಮತ್ತು ಕೆಲವು ಸಂದರ್ಭಗಳಲ್ಲಿ 20–30 ಪಂಪ್‌ಗಳಿಗೆ ದುಡ್ಡು ಕಟ್ಟಿ 10-12 ಜನ ಅರ್ಜಿಹಾಕಿದರೆ ಆಗ ಲೈನ್ ಎಳೆಯುತ್ತೇವೆ ಎನ್ನುವುದರಲ್ಲಿ ಅರ್ಥವಿಲ್ಲ. ಕೊನೆಗೆ ಶೇಕಡ 50 ರಷ್ಟಾದರೂ ಕೆಲಸ ನಡೆಸಿದ್ದರೆ ಸಾಕು, ಅವರಿಗೆಲ್ಲ ವಿದ್ಯುಚ್ಛಕ್ತಿ ಲೈನ್ ಕೊಡಬೇಕು. ಪ್ರತಿಯೊಬ್ಬರೂ ಕೆಲಸವನ್ನು ಪೂರ್ತಿಮಾಡಬೇಕೆಂದರೆ ತೊಂದರೆಯಾಗುತ್ತದೆ. ಯಾರಾದರೂ ನಾಲ್ಕಾರು ಜನ ಸ್ವಲ್ಪ ಸಾವಕಾಶ ಮಾಡಿದರೆ ಅಲ್ಲಿ ಲೈನ್ ಕೊಡದೆಹೋದರೆ ಇತರರಿಗೆ ತೊಂದರೆಯಾಗುತ್ತದೆ. ನನ್ನ ಕ್ಷೇತ್ರದಲ್ಲಿ ಹೊನ್ನುಡಿಕೆ ಗ್ರಾಮದಲ್ಲಿ ಪಂಪ್‌ಸೆಟ್ ಹಾಕಲು ವಿದ್ಯುಚ್ಛಕ್ತಿ ಕೇಳಿದ್ದು ಪಂಪ್‌ಸೆಟ್ ಕೊಂಡುಕೊಂಡಿದ್ದಾರೆ. ಇಲಾಖೆಯವರನ್ನು ಲೈನ್‌ಹಾಕಿ ಎಂದು ಕೇಳಿದರೆ, ನೀವು ಎಲ್ಲ ಕೆಲಸಗಳನ್ನೂ ಪೂರ್ತಿಮಾಡಿ ನಮಗೆ work order ಬರುವವರೆಗೂ ನಾವು ಲೈನ್ ಹಾಕುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಶೇಕಡ 50ರಷ್ಟು ಜನ ಪಂಪ್‌ಸೆಟ್ ಕೊಂಡುಕೊಂಡಿರುವ ದೆಸೆಯಿಂದ ಅವ

ರಿಗೆ ವಿದ್ಯುತ್ತನ್ನು ಒದಗಿಸಲು ಲೈನ್ ಹಾಕಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳನ್ನು ಪ್ರಾರ್ಥನೆಮಾಡುತ್ತೇನೆ.

ಕಡೆಯದಾಗಿ ತಹಸೀಲ್ದಾರರುಗಳ ವಿಚಾರ. N.E.S. ಪ್ರಾಜೆಕ್ಟನ್ನು ಕೊಟ್ಟಿರುವ ಕಡೆಗಳಲ್ಲಿ ಆ ತಾಲ್ಲೂಕಿನ ಅಧಿಕಾರಿಗಳು ಒಟ್ಟಿಗೆ ಸೇರಿ ಕೆಲಸ ಮಾಡಲು strict orders ಇರಬೇಕು. ತಾಲ್ಲೂಕು ಅಮಲ್ದಾರರು ಮತ್ತು N.E.S. ಪ್ರಾಜೆಕ್ಟಿನ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಒಟ್ಟಿಗೆಹೋಗಿ ಕೆಲಸ ಮಾಡುವ ಅವಕಾಶಗಳನ್ನು ಕಲ್ಪನೆಮಾಡಬೇಕು. ಇವೊತ್ತಿನ ದಿವಸ ಆ ರೀತಿ ಮಾಡಿಲ್ಲ. ಅವರು ಇಷ್ಟಪಟ್ಟರೆ ಹೋಗಬಹುದು. ಇಲ್ಲದಿದ್ದರೆ ಇಲ್ಲ. ಆದುದರಿಂದ ಈ ವಿಷಯದಲ್ಲಿ strict orders ಮಾಡಬೇಕು.

ತಹಸೀಲ್ದಾರರುಗಳಿಗೆ ಕೆಲಸಗಳು ಹೆಚ್ಚಾಗುತ್ತಿವೆ. ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ಗಳಲ್ಲಿರುವವರಿಗಾದರೂ ಜೀಪ್ ಕೊಟ್ಟರೆ ಹೆಚ್ಚಿನ ಕೆಲಸವಾಗುತ್ತದೆ. ಇಲ್ಲದೇ ಇದ್ದರೆ ಕಾಗದಗಳು ಇದ್ದ ಕಡೆಯೇ ಇರುತ್ತವೆ. ಅದರಿಂದ ಲುಕ್ಸಾನಾಗುವುದು ಅವರಿಗಲ್ಲ. ತಿಂಗಳಾದ ಕೂಡಲೇ ಸಂಬಳ ತೆಗೆದುಕೊಳ್ಳುತ್ತಾರೆ. ಅದಕ್ಕೋಸ್ಕರವಾಗಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿರತಕ್ಕ ತಹಸೀಲ್ದಾರರುಗಳಿಗಾದರೂ ಜೀಪುಗಳನ್ನು ಒದಗಿಸಬೇಕೆಂದು ಹೇಳಿ ಈ ಬಡ್ಜೆಟ್ಟನ್ನು ಅನುಮೋದಿಸುತ್ತೇನೆ.

[SRI N. O. SAMAJI (Belgaum II) spoke in Marathi.]

MR. SPEAKER.—Today 16 members have taken part. So far 78 members have spoken. This is a record number. Still some more members, I learn, are thinking to take part. Out of 78, 47 are from the Congress Party and 32 from the Opposition.

The House will now rise and meet tomorrow at 1 P.M.

The House adjourned at Fifteen Minutes past Eight of the Clock to meet again at One of the Clock on Tuesday, the 8th April 1958.

W D 974—GPB—900—13-9-58